"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

21ನೇ ಸೆಪ್ಟೆಂಬರ್ 2021
ಮಂಗಳವಾರ

**ವಿಷಯಾನುಕ್ರಮಣಿಕೆ (Index)**


**1. ಅಭಿನಂದನಾ ನಿರ್ಣಯ**

**ಟೋಕಿಯೊ ಒಲಂಪಿಕ್ಸ್‌ನಲ್ಲಿ 7 ಪದಕಗಳು ಹಾಗೂ ಪ್ಯಾರಾ ಒಲಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿ 19 ಪದಕಗಳನ್ನು ಗೆದ್ದುಕೊಂಡು ಐತಿಹಾಸಿಕ ಸಾಧನೆಯನ್ನು ಮಾಡಿರುವ ಕ್ರೀಡಾಪಟುಗಳಿಗೆ ಅಭಿನಂದನೆ ಸೂಚಿಸುವ ನಿರ್ಣಯ.**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಸಿ. ನಾರಾಯಣ ಗೌಡ(ಕ್ರೀಡೆ, ಯುವಜನ, ರೇಷ್ಮೆ ಸಚಿವರು)

**(ನಿರ್ಣಯ ಅಂಗೀಕರಿಸಲ್ಪಟ್ಟಿತು)**

**2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ಮೈಸೂರು ಜಿಲ್ಲೆಯ ಚಾಮುಂಡಿಪುರದ ರಿಂಗ್ ರಸ್ತೆಯ ಬಳಿ ದಿನಾಂಕ: 24.08.2021ರಂದು ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ತನಿಖೆಯಲ್ಲಿ ಪೊಲೀಸರು ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳ ಅನ್ವಯ ಕ್ರಮ ವಹಿಸದಿರುವ ಕುರಿತು.**

- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1128– ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**1115- ಬಿ.ಡಿ.ಎ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಕುರಿತು**

- ಶ್ರೀ ಆಯನೂರು ಮಂಜುನಾಥ್
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1029- ಮಂಗಳೂರಿನಲ್ಲಿರುವ ಸುರತ್ಕಲ್ ನಗರದಲ್ಲಿನ ಯು.ಜಿ.ಡಿ. ಯೋಜನೆ ಕುರಿತು**

- ಶ್ರೀ ಬಿ.ಎಂ.ಫಾರೂಖ್
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**995 – ಕುಂದಾಪುರ ಪುರಸಭೆಯ ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ಧೀಕರಣ ಘಟಕದ ನಿರ್ಮಾಣ ಕುರಿತು**

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**1000- ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣ ಪಂಚಾಯತ್‌ನ್ನು ಪುರಸಭೆ ಮಾಡಿರುವ ಬಗ್ಗೆ**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಎನ್.ನಾಗರಾಜು ಎಂ.ಟಿ.ಬಿ (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು)

**1032+1073- ಬೀದರ್ ಜಿಲ್ಲೆಯ ನಗರಸಭೆ ಸಾರ್ವಜನಿಕರ ಆಸ್ತಿ ತೆರಿಗೆ ವಂಚನೆ ಕುರಿತು**

- ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ
- ಶ್ರೀ ಎನ್.ನಾಗರಾಜು ಎಂ.ಟಿ.ಬಿ (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1063- ರೈತರು ಆರ್.ಟಿ.ಸಿ. ನೀಡುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ಪಡೆಯುತ್ತಿರುವ ಕುರಿತು**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1008- ಕೆ.ಐ.ಎ.ಡಿ.ಬಿ. ಯಿಂದ ಕೈಗೊಂಡ ಕಾಮಗಾರಿಗಳ ಕುರಿತು**

- ಶ್ರೀ ಹೆಚ್.ಎಂ. ರಮೇಶ್‌ಗೌಡ
- ಶ್ರೀ ಮುರುಗೇಶ್ ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

**1010- ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆ ಕುರಿತು**

- ಶ್ರೀ ಎನ್.ರವಿಕುಮಾರ್
- ಶ್ರೀ ಎನ್.ನಾಗರಾಜು ಎಂ.ಟಿ.ಬಿ (ಪೌರಾಡಳಿತ ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು)

**1045- ಕೋಲಾರ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಸ್ಥಳ ಮಂಜೂರು ಮಾಡುವ ಬಗ್ಗೆ**

- ಶ್ರೀ ಗೋವಿಂದರಾಜು
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1126- ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಕುರಿತು**

- ಶ್ರೀ ಅ.ದೇವೇಗೌಡ
- ಶ್ರೀ ಶಂಕರ ಬ.ಪಾಟೀಲ ಮುನೇನಕೊಪ್ಪ(ಕೈಮಗ್ಗ, ಜವಳಿ ಮತ್ತು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು)

**1089- ಕೊಡಗು ಜಿಲ್ಲೆಯಲ್ಲಿ ಎಂ-ಸ್ಯಾಂಡ್ ಸಾಮಗ್ರಿ ಕೊರತೆ ಕುರಿತು**

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**1019- ಸಕ್ಕರೆ ಸಂಶೋಧನಾ ಕೇಂದ್ರಗಳ ಬಗ್ಗೆ**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಕೋವಿಡ್-19 ವಾರಿಯರ್ಸ್‌ಗಳಾಗಿ ಕಾರ್ಯನಿರ್ವಹಿಸಿ ಮೃತಪಟ್ಟವರ ಅವಲಂಬಿತರಿಗೆ ಸರ್ಕಾರದ ಘೋಷಣೆಯಂತೆ ಪರಿಹಾರ ನೀಡುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ವಾರಾಹಿ ಬಲದಂಡೆ ಕಾಲುವೆ ಯೋಜನೆಯನ್ನು ಮೂಲ ಯೋಜನೆಯ ಕಾಮಗಾರಿಯನ್ನು ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳಿಸುವ ಬಗ್ಗೆ.**

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಸಿಬ್ಬಂದಿ ಮೇಲೆ ಹಲ್ಲೆ ನಡೆಸುತ್ತಿರುವ ಬಗ್ಗೆ.**

- ಶ್ರೀ ಆಯನೂರು ಮಂಜುನಾಥ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ನೋಂದಣಿ ಕಛೇರಿಗಳಲ್ಲಿ ಇ-ತಂತ್ರಾಂಶಗಳ ಸರ್ವರ್‌ನಲ್ಲಿ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**ಉ) ಬೆಂಗಳೂರು ನಗರದ ಬೀದಿ ದೀಪಗಳಿಗೆ ಎಲ್.ಇ.ಡಿ. ಬಲ್ಬ್ ಅಳವಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಗದಗದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಇದೇ ವಿಷಯದಲ್ಲಿ ಎಂ.ಎ. ವ್ಯಾಸಂಗ ಮಾಡಿ ಉದ್ಯೋಗ ದೊರಕಿಲ್ಲದಿರುವ ಬಗ್ಗೆ.**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ಮಡಿಕೇರಿಯ ಜನರಲ್ ತಿಮ್ಮಯ್ಯ ಕ್ರೀಡಾಂಗಣ ಆಟವಾಡಲು ಯೋಗ್ಯವಾಗದೇ ಇರುವ ಬಗ್ಗೆ.**

- ಶ್ರೀ ಸುನಿಲ್ ಸುಬ್ರಮಣಿ
- ಡಾ|| ಕೆ.ಸಿ. ನಾರಾಯಣಗೌಡ(ಕ್ರೀಡೆ, ಯುವಜನ, ರೇಷ್ಮೆ ಸಚಿವರು)

**ಎ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ನೀಡುವ ವಿದ್ಯಾರ್ಥಿ ವೇತನ ಸ್ಥಗಿತಗೊಂಡಿರುವ ಬಗ್ಗೆ.**

- ಶ್ರೀ ವಿಜಯ್ ಸಿಂಗ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಏ) ತಕರಾರು ಇರುವ ಸರ್ವೆ ನಂಬರ್ ಮತ್ತು ಪೋಡುಗಳ ರದ್ದತಿ ದುರಸ್ಥಿ ಮೇಲ್ಮನವಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ.**

- ಶ್ರೀ ಎಸ್. ರುದ್ರೇಗೌಡ
- ಶ್ರೀ ಆರ್. ಅಶೋಕ( ಕಂದಾಯ ಸಚಿವರು)

**ಐ) ಬಿಎ.ಎಂ.ಎಲ್ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘ ತನ್ನ ನೌಕರರಿಗೆ ನಿವೇಶನ ಹಂಚಿಕೆ ಮಾಡದೇ ಖಾಸಗಿ ಅವ್ಯವಹಾರ ನಡೆಸಿರುವ ಬಗ್ಗೆ.**

- ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**05. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ರಾಜ್ಯದಲ್ಲಿರುವ ನೇಕಾರರಿಗೆ ಗುರುತಿನ ಚೀಟಿ ನೀಡುವ ಹಾಗೂ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಕೈಮಗ್ಗ ಮತ್ತು ಜವಳಿ, ಕಬ್ಬುಅಭಿವೃದ್ಧಿ ಹಾಗೂ ಸಕ್ಕರೆ ಸಚಿವರ ಪರವಾಗಿ)

**ಆ) ನಾಗರಹೊಳೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಕ್ರಮ ಕೈಗೊಳ್ಳುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಅರಣ್ಯ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ)

**ಇ) ಕೇಂದ್ರ ಹಾಗೂ ರಾಜ್ಯದ ಪಾಲುದಾರಿಕೆಯ ಹಲವಾರು ಯೋಜನೆಗಳಿಗೆ ಅನುದಾನ ಬಿಡುಗಡೆಯಾಗದೆ ಯೋಜನೆಗಳು ಸ್ಥಗಿತಗೊಳ್ಳುವ ಸಂಭವವಿರುವುದರಿಂದ ಆತಂಕ ಉಂಟಾಗಿರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು, (ತೋಟಗಾರಿಕೆ ಮತ್ತು ಯೋಜನೆ ಹಾಗೂ ಸಾಂಖ್ಯಿಕ ಸಚಿವರ ಪರವಾಗಿ)

**06. ಕಾರ್ಯದರ್ಶಿಯವರ ವರದಿ**

**07. ವರದಿಯನ್ನೊಪ್ಪಿಸುವುದು**

**08. ಹಕ್ಕುಚ್ಯುತಿ ಪ್ರಸ್ತಾವ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧಾನ ಪರಿಷತ್ತಿನ ಸಭಾಂಗಣದ ಪಕ್ಕದಲ್ಲಿ ಶೌಚಾಲಯವನ್ನು ಪುನರ್ ಸ್ಥಾಪಿಸುವ ಬಗ್ಗೆ**

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು)
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಿ.ಕೆ.ಹರಿಪ್ರಸಾದ್

**(ಹಕ್ಕುಚ್ಯುತಿ ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು)**

**09. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್. ಅಪ್ಪಾಜಿಗೌಡ
- ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
- ಡಾ|| ತೇಜಸ್ವಿನಿ ಗೌಡ
- ಶ್ರೀ ಎನ್. ರವಿಕುಮಾರ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕಾಂತರಾಜ್(ಬಿ.ಎಂ.ಎಲ್)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**10. ಗಮನ ಸೆಳೆಯುವ ಸೂಚನೆಗಳು**

**ಅ) ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದು ಸರ್ವತೋಮುಖ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕೆ.ಆರ್.ಐ.ಡಿ.ಎಲ್.ನ ಅಧಿಕಾರಿಗಳು ದುರ್ಬಳಕೆ ಮಾಡುತ್ತಿರುವ ಕುರಿತು**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ)
- ಶ್ರೀ ಎನ್. ಅಪ್ಪಾಜಿಗೌಡ

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ರಚಿಸುವಾಗ ಭೂಸ್ವಾಧೀನಪಡಿಸಿಕೊಳ್ಳದೇ ಇರುವ ಪ್ರದೇಶವನ್ನು ಬಳಕೆ ಮಾಡಿಕೊಂಡು ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕುರಿತು**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)
- ಶ್ರೀ ಎನ್.ನಾಗರಾಜು ಎಂ.ಟಿ.ಬಿ (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಡಾ:ತೇಜಸ್ವಿನಿಗೌಡ
- ಶ್ರೀ ಕೆ.ಟಿ. ಶ್ರೀಕಂಠೇಗೌಡ

**<><><>**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(839) 21-09-2021 YL-GR 10.40**

## ಕರ್ನಾಟಕ ವಿಧಾನ ಪರಿಷತ್ತು

**ಮಂಗಳವಾರ, 21ನೇ ಸೆಪ್ಟೆಂಬರ್ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 47 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಾದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01. ಅಭಿನಂದನಾ ನಿರ್ಣಯ

**ವಿಷಯ:- ಟೋಕಿಯೊ ಒಲಂಪಿಕ್ಸ್‌ನಲ್ಲಿ 7 ಪದಕಗಳು ಹಾಗೂ ಪ್ಯಾರಾಒಲಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿ 19 ಪದಕಗಳನ್ನು ಗೆದ್ದುಕೊಂಡು ಐತಿಹಾಸಿಕ ಸಾಧನೆಯನ್ನು ಮಾಡಿರುವ ಕ್ರೀಡಾಪಟುಗಳಿಗೆ ಅಭಿನಂದನೆ ಸೂಚಿಸುವ ನಿರ್ಣಯ.**

****

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 31(ಎ) ಪ್ರಕಾರ ಟೋಕಿಯೋ ಒಲಂಪಿಕ್ಸ್‌ನಲ್ಲಿ 7 ಪದಕಗಳು ಹಾಗೂ ಪ್ಯಾರಾಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿ 19 ಪದಕಗಳನ್ನು ಗೆದ್ದುಕೊಂಡು ಐತಿಹಾಸಿಕ ಸಾಧನೆಯನ್ನು ಮಾಡಿರುವ ಕ್ರೀಡಾಪಟುಗಳಿಗೆ ಅಭಿನಂದನೆ ಸೂಚಿಸುವ ಈ ಕೆಳಕಂಡ ನಿರ್ಣಯವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ ಹಾಗೂ ಸರ್ವಾನುಮತದಿಂದ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಒಲಿಂಪಿಕ್ಸ್ ಕ್ರೀಡಾಕೂಟ ಆರಂಭವಾಗಿ 124 ವರ್ಷಗಳು ಕಳೆದರು ಒಲಿಂಪಿಕ್ಸ್ ಕ್ರೀಡಾಕೂಟವನ್ನು ಭಾರತ ಪ್ರತಿನಿಧಿಸಿದ್ದು 1900ರಲ್ಲಿ. ಒಲಿಂಪಿಕ್ಸ್‌ನಲ್ಲಿ ಭಾರತೀಯ ಕ್ರೀಡಾಪಟುಗಳು ಪಾಲ್ಗೊಳ್ಳುತ್ತಿದ್ದರೂ ಪ್ರಶಸ್ತಿ ಪಟ್ಟಿಯಲ್ಲಿ ಮಹತ್ವದ ಸಾಧನೆ ಮೆರೆಯಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿಯ ಒಲಿಯಂಪಿಕ್ಸ್‌ನಲ್ಲಿ 125 ವರ್ಷಗಳ ಬಳಿಕ ಭಾರತ 07 ಪದಕಗಳನ್ನು ಗೆದ್ದು ಇತಿಹಾಸ ನಿರ್ಮಿಸಿದೆ. ಅವರುಗಳು:-

**01.ಶ್ರೀ ನೀರಜ್ ಚೋಪ್ರಾ, ಜಾವಲಿನ್ ಥ್ರೋನಲ್ಲಿ ಚಿನ್ನದ ಪದಕ**

**02.ಕುಮಾರಿ ಮೀರಾಬಾಯಿ ಚಾನು, ವೇಯ್ಟ್ ಲಿಫ್ಟಿಂಗ್, 49 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ**

**03.ಶ್ರೀ ರವಿಕುಮಾರ್ ದಹಿಯಾ ಕುಸ್ತಿ ವಿಭಾಗದಲ್ಲಿ 57 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ**

**04.ಶ್ರೀ ಭಜರಂಗ್ ಪೂನಿಯಾ 65 ಕೆ.ಜಿ. ವಿಭಾಗದಲ್ಲಿ, ಕಂಚಿನ ಪದಕ**

**05.ಭಾರತದ ಪುರುಷರ ಹಾಕಿ ತಂಡ 5-4 ಗೋಲುಗಳ ಅಂತರದಿಂದ ಗೆದ್ದು ಕಂಚಿನ ಪದಕ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**06.ಕುಮಾರಿ ಲವ್ಲಿನಾ ಬೊರ್ಗೊಹೇನ್, ಮಹಿಳೆಯರ ವೆಲ್ಟರ್ ವೇಟ್ ಕಂಚಿನ ಪದಕ**

**07.ಕುಮಾರಿ ಪಿ.ವಿ.ಸಿಂಧು ಕಂಚಿನ ಪದಕ**

ಮೇಲ್ಕಂಡ 07 ಜನರು ಪದಕ ಗೆದ್ದು ಭಾರತದ ಕೀರ್ತಿಯನ್ನು, ಗರಿಮೆಯನ್ನು ಹೆಚ್ಚಿಸಿದ ಕ್ರೀಡಾಪಟುಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅದೇ ರೀತಿ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿಯೂ ಕೂಡ ಭಾರತದ ಕ್ರೀಡಾ ಶಕ್ತಿ ಪ್ರಜ್ವಲಿಸಿದೆ. ಭಾರತದ ಅಂಗವಿಕಲ ಕ್ರೀಡಾಪಟುಗಳು ಅಮೋಘ ಪ್ರದರ್ಶನ ತೋರಿಸಿ 19 ಪದಕಗಳನ್ನು ಗೆದ್ದುಕೊಂಡಿರುವುದು ಐತಿಹಾಸಿಕ ಸಾಧನೆಯಾಗಿದೆ.

(ಮುಂದು...)

(840) 21.09.2021/10.50/ ಎಸ್‌ಕೆ-ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

ಅಂಗವಿಕಲರು ತಮ್ಮ ಬದುಕನ್ನೇ ಕ್ರೀಡೆಗಾಗಿ ಮೀಸಲಿಟ್ಟು ಕ್ರೀಡಾ ಕೂಟದಲ್ಲಿ ಭಾಗವಹಿಸಿ, ಕ್ರೀಡೆಯಲ್ಲಿ ಇಷ್ಟು ದೊಡ್ಡದಾದಂತಹ ಸಾಹಸ ಮಾಡಿ, ಪದಕವನ್ನು ಪಡೆದಿದ್ದಾರೆ. ಭಾರತದಲ್ಲಿ ಕ್ರೀಡೆಗಳಿಗೆ ಸಿಕ್ಕಿರುವಂತಹ ಆದ್ಯತೆ ಅಷ್ಟಕ್ಕಷ್ಟೇ. ವಿದ್ಯಾಭ್ಯಾಸ, ಉದ್ಯೋಗ ಗಳಿಕೆಯ ಕಸರತ್ತಿನಲ್ಲಿ ಕ್ರೀಡೆಗೆ ಕೊನೆಯ ಸ್ಥಾನವಿದೆ. ಅದರಲ್ಲೂ ಕೋವಿಡ್ ಸಂದರ್ಭದಲ್ಲಂತೂ ನಮ್ಮ ಅಂಗವಿಕಲ ಕ್ರೀಡಾಪಟುಗಳು ತೋರಿಸಿರುವ ಉತ್ಸಾಹ, ಧೈರ್ಯ ಮೆಚ್ಚಲೇಬೇಕಾಗುತ್ತದೆ. ಈ ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಂತು, ಪ್ಯಾರಾಲಿಂಪಿಕ್‌ನಲ್ಲಿ ಭಾಗವಹಿಸಿದ ಭಾರತದ 54 ಅಥ್ಲೀಟ್‌ಗಳಿಗೂ ಕೂಡ ನಾವು ಇವತ್ತು ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಅವರು ಅರ್ಹರಿದ್ದಾರೆ ಎಂದು ನಾನು ಭಾವಿಸುತ್ತಿದ್ದೇನೆ. ಉತ್ತರ ಪ್ರದೇಶದಲ್ಲಿ ಐ.ಎ.ಎಸ್. ಅಧಿಕಾರಿಯಾಗಿರುವ ಕನ್ನಡಿಗ ಶ್ರೀ ಸುಹಾಸ್ ಯತಿರಾಜ್ ಬೆಳ್ಳಿ ಪದಕ ಗೆದ್ದಿರುವುದು ನಮ್ಮ ಕನ್ನಡಿಗರಿಗೆ ಬಹಳ ಅಭಿಮಾನದ ವಿಷಯವಾಗಿದ್ದು, ಅವರ ಸಾಧನೆ ಶ್ಲಾಘನೀಯ ಎಂದು ಹೇಳಬಯಸುತ್ತೇನೆ.

ಇದರ ಜೊತೆಗೆ ಕರ್ನಾಟಕ ರಾಜ್ಯದವರಾದ ಶ್ರೀ ಸತ್ಯನಾರಾಯಣ್ ಎಂಬುವವರು ಕೋಚ್ ಇದ್ದಾರೆ. ಪ್ಯಾರಾಲಿಂಪಿಕ್‌ನಲ್ಲಿ ಗೆದ್ದಂತಹ ಐದಾರು ಜನ ಕ್ರೀಡಾ ಪಟುಗಳಿಗೆ ತರಬೇತಿಯನ್ನು ಕೊಟ್ಟಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರೀಡಾ ಪಟುಗಳು ಪದಕಗಳನ್ನು ಗೆದ್ದಿದ್ದಾರೆ. ನಾವು ಅವರಿಗೆ ಪ್ರಶಸ್ತಿಯನ್ನು ಕೊಟ್ಟು, ಅಭಿನಂದಿಸಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದವರಾದ ಶ್ರೀ ಸತ್ಯನಾರಾಯಣ್‌ರವರು ಕೋಚ್ ಆಗಿದ್ದಾರೆ. ನಮ್ಮ ಕರ್ನಾಟಕ ರಾಜ್ಯದವರಾದ ಶ್ರೀ ಸುಹಾಸ್ ಯತಿರಾಜ್ ಎನ್ನುವವರು ಬಹಳ ಸಾಧನೆಯನ್ನು ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೇ ಕರ್ನಾಟಕ ರಾಜ್ಯದವರಾದ ಕ್ರೀಡಾ ಪಟು 17 ಚಿಕಿತ್ಸೆಯನ್ನು ಪಡೆದು, ಪ್ಯಾರಾಲಿಂಪಿಕ್‌ನಲ್ಲಿ ಭಾಗವಹಿಸಿದ್ದಾರೆ. ಆದರೆ ಆ ಕ್ರೀಡಾ ಪಟುಗೆ ಪದಕ ಸಿಕ್ಕಿಲ್ಲ. ಆದರೂ ಕೂಡ ಅವರಿಗೂ ಸಹ ಅಭಿನಂದನೆಯನ್ನು ಸಲ್ಲಿಸಬೇಕು. ಇದನ್ನು ಮಂಡನೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತು ಈ ಸದನದ ಮಾನ್ಯ ಸದಸ್ಯರೆಲ್ಲರಿಗೂ ನಾನು ಒತ್ತಾಯ ಮಾಡುವುದೇನೆಂದರೆ, ಸರ್ವಾನುಮತದಿಂದ ಅವರಿಗೆ ಅಭಿನಂದನೆಯನ್ನು ಹೇಳೋಣ. ಒರಿಸ್ಸಾ ರಾಜ್ಯದಿಂದ ಹಾಕಿ ತಂಡವನ್ನು ತೆಗೆದುಕೊಂಡು, ಅವರಿಗೆ ತರಬೇತಿಯನ್ನು ಕೊಡುವುದಕ್ಕೆ ಅವರು ಮುಂದಾಗಿದ್ದಾರೆ. ಕರ್ನಾಟಕ ಸರ್ಕಾರವು ಎಲ್ಲಾ ಕ್ರೀಡಾ ಪಟುಗಳಿಗೆ ಈ ತರಹ ಅವಕಾಶ, ಸವಲತ್ತುಗಳನ್ನು ಮಾಡಿಕೊಡಬೇಕು. ವಿಶೇಷವಾಗಿ ಪ್ಯಾರಾಲಿಂಪ್‌ಕ್ಸ್‌ನಲ್ಲಿ ಅವರಿಗೆ ramp ನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 32(ಎ) ರೀತ್ಯಾ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಅವರು ಮಂಡಿಸಿರುವ ಅಭಿನಂದನಾ ನಿರ್ಣಯವನ್ನು ಬೆಂಬಲಿಸಿ, ಸದನದ ಸಹಮತಿಯನ್ನು ವ್ಯಕ್ತಪಡಿಸುತ್ತಾ, ಟೋಕಿಯೊ ಒಲಂಪಿಕ್ಸ್‌ನ ಅನೇಕ ಕ್ರೀಡೆಗಳಲ್ಲಿ ಚಿನ್ನದ ಪದಕವು ಸೇರಿದಂತೆ, ವಿವಿಧ ರೀತಿಯಲ್ಲಿ ಸಾಧನೆ ಮಾಡಿದಂತಹ ಎಲ್ಲಾ ಕ್ರೀಡಾ ಪಟುಗಳಿಗೆ ನಾನು ಈ ಸದನದ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಕ್ರೀಡೆಯ ಮೂಲಕ ಭಾರತಕ್ಕೆ ಗೌರವವನ್ನು ತಂದು ಕೊಟ್ಟಿದ್ದು, ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತಹ ಎಲ್ಲಾ ಕ್ರೀಡಾ ಪಟುಗಳಿಗೆ ಕೂಡ ಇದರಲ್ಲಿ ಅಭಿನಂದಿಸುತ್ತೇನೆ. ಈ ಕ್ರೀಡೆಯಲ್ಲಿ ಕ್ರೀಡಾ ಪಟುಗಳು ಭಾಗವಹಿಸಿ, ಚಿನ್ನದ ಪದಕ ಮತ್ತು ವಿವಿಧ ಪದಕವನ್ನು ಪಡೆದಿರುವಂತಹ ಎಲ್ಲಾ ಕ್ರೀಡಾ ಪಟುಗಳಿಗೆ ಈ ರಾಜ್ಯದ ಜನತೆ ಮತ್ತು ಈ ಸದನದ ಸದಸ್ಯರ ಪರವಾಗಿ ಅಭಿನಂದಿಸಿ, ಅವರಿಗೆ ಹೃತ್ಪೂರ್ವಕವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಆ ಕ್ರೀಡಾ ಪಟುಗಳಿಗೆ ಸಹಕಾರ ಮತ್ತು ಆರ್ಥಿಕ ನೆರವನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಸುತ್ತಿನ ಮಾತುಕತೆ ಮಾಡಿದ್ದಾರೆ. ಟೋಕಿಯೊ ಒಲಂಪಿಕ್ಸ್‌ನಲ್ಲಿ ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮ್ಮ ಅಂಗವೈಕಲ್ಯತೆಯನ್ನು ಮೀರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿರುವ ಎಲ್ಲಾ ಕ್ರೀಡಾಪಟುಗಳು ಭಾರತ ಮತ್ತು ಕರ್ನಾಟಕ ರಾಜ್ಯಕ್ಕೆ ಗೌರವವನ್ನು ತಂದುಕೊಟ್ಟಿದ್ದಾರೆ. ಅವರಿಗೆಲ್ಲರಿಗೂ ನಾನು ಅಭಿನಂದಿಸುತ್ತಾ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಅವರು ಮಂಡಿಸಿರುವ ಅಭಿನಂದನಾ ನಿರ್ಣಯಕ್ಕೆ ಸದನದ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಟೋಕಿಯೊ ಒಲಂಪಿಕ್ಸ್‌ನಲ್ಲಿ ಈ ಕ್ರೀಡಾ ಪಟುಗಳು ಆಗಾಧವಾದ ಸಾಧನೆ ಮಾಡಿ, ಈ ರಾಷ್ಟ್ರದ ಗೌರವವನ್ನು ಹೆಚ್ಚಿಸುವುದರ ಜೊತೆಗೆ ವಿಶ್ವದ ಕ್ರೀಡಾ ಭೂಪಟದಲ್ಲಿ ಭಾರತದ ಸ್ಥಾನ ಚಿರಸ್ಮರಣೀಯವಾಗಿ ಉಳಿಯುವಂತೆ ಅದ್ಭುತವಾದಂತಹ ಸಾಧನೆಯನ್ನು ಮಾಡಿದಂತಹ ಎಲ್ಲಾ ಕ್ರೀಡಾ ಪಟುಗಳಿಗೆ ಅಭಿನಂದಿಸುವ ಅಭಿನಂದನಾ ನಿರ್ಣಯವನ್ನು ಈ ಸದನದ ಹಿರಿಯ ಸದಸ್ಯರಾದ ರಣಜಿ ಕ್ರಿಕೆಟ್ ಪಟು ಆದಂತಹ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಅಭಿನಂದನಾ ನಿರ್ಣಯವನ್ನು ತಂದಿರುವಂತಹದ್ದು ಬಹಳ ಸೂಕ್ತವಾದದ್ದು. ಈ ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ಮತ್ತು ಪುರಸ್ಕಾರ ನೀಡುವಂತಹ ಅತ್ಯುತ್ತಮವಾದ ನಿರ್ಣಯವನ್ನು ಏನು ತಂದಿದ್ದಾರೆ, ಅದನ್ನು ಮೇಲ್ಮನೆಯ ಸದಸ್ಯರೆಲ್ಲರೂ ಒಮ್ಮತದಿಂದ ಬೆಂಬಲಿಸೋಣ. ವಿಶ್ವದಲ್ಲಿ ನಡೆಯುವ ಕ್ರೀಡೆಗಳಾದ ಒಲಂಪಿಕ್ಸ್, Asian Games ಮತ್ತು ಇತರ ಕ್ರೀಡೆಗಳಲ್ಲಿ, ನಮ್ಮ ಕ್ರೀಡೆ ಬಹಳ ಕಳಪೆ ಇರುತ್ತಿತ್ತು. ಈ ಬಾರಿ ಕ್ರೀಡೆಯಲ್ಲಿ ಮಾಡಿರುವಂತಹ ಕ್ರೀಡಾ ಪಟುಗಳ ಸಾಧನೆಯಿಂದಾಗಿ, ಇಡೀ ದೇಶದಲ್ಲಿರುವ ಸುಮಾರು 140 ಕೋಟಿ ಜನತೆಯು ಹುರುಪು, ಉತ್ಸಾಹದಿಂದ ಮಾತನಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಶತಮಾನದ ಇತಿಹಾಸವಿರುವಂತಹ ಈ ಮೇಲ್ಮನೆಯಲ್ಲಿರುವ ಮಾನ್ಯ ಸದಸ್ಯರು ಅಭಿನಂದನಾ ನಿರ್ಣಯವನ್ನು ಮಂಡಿಸಿದ್ದಾರೆ. ಅದನ್ನು ನಾನು ಬೆಂಬಲಿಸಿ, ಅದಕ್ಕೆ ಸದನ ಒಮ್ಮತದಿಂದ ನಿರ್ಣಯವನ್ನು ಕೈಗೊಳ್ಳಬೇಕೆಂದು ಹೇಳಿ, ನಾನು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸದಸ್ಯರೆಲ್ಲರಿಗೂ ಮನವಿಯನ್ನು ಮಾಡುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ನಾರಾಯಣ ಗೌಡ ತಾವು ಕ್ರೀಡಾ ಸಚಿವರಾಗಿದ್ದೀರಲ್ಲವೇ?

**ಶ್ರೀ ಕೆ.ಸಿ. ನಾರಾಯಣ ಗೌಡ:- ಕ್ರೀಡೆ, ಯುವಜನ, ರೇಷ್ಮೆ ಸಚಿವರು:-** ಮಾನ್ಯ ಸಭಾಪತಿಯವರೇ, ಹೌದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ನಾರಾಯಣ ಗೌಡರೇ, ರಾಜ್ಯ ಸರ್ಕಾರ ಈ ಕ್ರೀಡಾಪಟುಗಳಿಗೆ ಏನು ಮಾಡುತ್ತೀರೆಂಬ ಬಗ್ಗೆ ಹೇಳಿ. ತಾವು ಸುಮ್ಮನೇ ಕುಳಿತಿದ್ದೀರಾ. ಬೇರೆ ರಾಜ್ಯದಲ್ಲಿರುವ ಸರ್ಕಾರ ಆ ಕ್ರೀಡಾ ಪಟುಗಳಿಗೆ ಹೇಗೆ ಸನ್ಮಾನ ಮಾಡಿದ್ದಾರೋ, ಅದೇ ತರಹ ನಮ್ಮ ರಾಜ್ಯದಲ್ಲಿಯೂ ಮಾಡುವ ಬಗ್ಗೆ ಸದನದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಿ. ಇದರ ಬಗ್ಗೆ ತಾವು ಮಾತನಾಡಿ.

**ಶ್ರೀ ಕೆ.ಸಿ. ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಮಾಡಿದಂತಹ ಚರ್ಚೆಯನ್ನು ಸ್ವಾಗತಿಸುತ್ತಾ, ನಮ್ಮ ಭಾರತ ದೇಶದ ಕ್ರೀಡಾ ಪಟುಗಳು ಒಲಂಪಿಕ್ಸ್‌ನಲ್ಲಿ ಮೊದಲನೆ ಬಾರಿ 07 ಪದಕಗಳನ್ನು ತಂದಿರುವುದು ನಮ್ಮ ಭಾರತ ದೇಶಕ್ಕೆ ಹೆಮ್ಮೆ ತಂದಿರುವಂತಹ ವಿಷಯವಾಗಿದೆ. ನಮ್ಮ ಭಾರತದ ಪ್ರಧಾನ ಮಂತ್ರಿಗಳಾದಂತಹ ಶ್ರೀ ನರೇಂದ್ರ ಮೋದಿಯವರು ಇದಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬುವಂತಹದ್ದನ್ನು ಮಾಡಿದ್ದಾರೆ. ಭಾರತ ದೇಶಕ್ಕೆ ಕ್ರೀಡಾ ಪಟುಗಳು ಪದಕವನ್ನು ತಂದುಕೊಟ್ಟಿರುವಂತಹದ್ದಕ್ಕೆ ನಮಗೆಲ್ಲರಿಗೂ ಸಂತೋಷವನ್ನು ತಂದು ಕೊಟ್ಟಿದೆ. ಅದೇ ರೀತಿ ಕರ್ನಾಟಕ ರಾಜ್ಯದಿಂದ ಮೂರು ಜನ ಕ್ರೀಡಾ ಪಟುಗಳು ಭಾಗವಹಿಸಿರುವಂತಹದ್ದು. ಪ್ರಾರಂಭದಲ್ಲಿ ಅವರು ಕ್ರೀಡೆಯಲ್ಲಿ ಭಾಗವಹಿಸುವುದಕ್ಕೆ ಹತ್ತು ಸಾವಿರ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆ. ಅನಂತರ ನಮ್ಮ ಕರ್ನಾಟಕ ರಾಜ್ಯದ ರಾಜ್ಯಪಾಲರು ಸಹ ಈ ಕ್ರೀಡಾ ಪಟುಗಳಿಗೆ ತಲಾ ಒಂದು ಲಕ್ಷ ರೂಪಾಯಿಗಳ ಗೌರವಧನವನ್ನು ಕೊಡುವಂತಹ ಕೆಲಸವನ್ನು ನಮ್ಮ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಮೊದಲನೆ ಬಾರಿ ಮಾಡಿರುವುದು ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು 75 ತಂಡಗಳನ್ನು ಆಯ್ಕೆ ಮಾಡಿ, ಅವರನ್ನು ದತ್ತು ತೆಗೆದುಕೊಳ್ಳುವಂತಹ ಕೆಲಸವನ್ನು ಈಗಾಗಲೇ ನಮ್ಮ ಸರ್ಕಾರ ಮಾಡಿದೆ.

**ಸಭಾಪತಿಯವರು:-** ಮಾನ್ಯ ನಾರಾಯಣ ಗೌಡರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಅವರು ಮಂಡಿಸಿರುವ ಅಭಿನಂದನಾ ನಿರ್ಣಯದ ಬಗ್ಗೆ ಅಷ್ಟೆ ಮಾತನಾಡಿ. ಕ್ರೀಡಾ ಪಟುಗಳಿಗೆ ಬೇರೆ ರಾಜ್ಯದ ಸರ್ಕಾರ ಯಾವ ತರಹ ಮಾಡಿದ್ದಾರೋ, ಅದೇ ತರಹ ನಮ್ಮ ರಾಜ್ಯ ಸರ್ಕಾರ ಈ ಕ್ರೀಡಾ ಪಟುಗಳಿಗೆ ಏನು ಮಾಡುತ್ತೀರೆಂಬ ಬಗ್ಗೆ ಅಷ್ಟೇ ಹೇಳಿ.

**ಶ್ರೀ ಕೆ.ಸಿ. ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ಈ ಕ್ರೀಡೆಯಲ್ಲಿ ಭಾಗವಹಿಸಿದಂತಹ ನಮ್ಮ ಕರ್ನಾಟಕ ರಾಜ್ಯದವರಾದ ಶ್ರೀ ಸುಹಾಸ್ ಯತಿರಾಜ್ ಎನ್ನುವವರು ನಮ್ಮ ಹಾಸನ ಜಿಲ್ಲೆಯವರು. ಅವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ

ಈಗಾಗಲೇ ಅವರಿಗೊಂದು ಪತ್ರವನ್ನು ಬರೆದಿದ್ದೇವೆ. ಶ್ರೀ ಸತ್ಯನಾರಾಯಣ್ ಅವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಈಗಾಗಲೇ ಅವರಿಗೊಂದು ಪತ್ರವನ್ನು ಬರೆದಿದ್ದೇವೆ. ನಮ್ಮ ರಾಜ್ಯದ ಮಾನ್ಯ ಮುಖ್ಯಂತ್ರಿಗಳು ಮತ್ತು ರಾಜ್ಯಪಾಲರು ಇದರ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರಿಗೆ ದ್ರೋಣಾಚಾರ್ಯ ಪ್ರಶಸ್ತಿ ಕೊಡಬೇಕಾಗಿತ್ತು. ಅವರಿಗೆ ಕೊಟ್ಟಿಲ್ಲ. ದ್ರೋಣಾಚಾರ್ಯ ಪ್ರಶಸ್ತಿಗೆ ಏನಾದರೂ announce ಅನ್ನು ಕೊಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ದಯವಿಟ್ಟು, ಕುಳಿತುಕೊಳ್ಳಿ. ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. ಮಾನ್ಯ ನಾರಾಯಣ ಗೌಡರೇ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಒಲಂಪಿಕ್ಸ್ ಕ್ರೀಡಾ ಪಟುಗಳಿಗೆ ಬೇರೆ ರಾಜ್ಯದ ರಾಜ್ಯ ಸರ್ಕಾರಗಳು ಯಾವ ತರಹ ಸನ್ಮಾನ ಮಾಡಿದ್ದಾರೋ, ಅದೇ ತರಹ ನಮ್ಮ ರಾಜ್ಯದ ರಾಜ್ಯ ಸರ್ಕಾರದವರು ಸಹ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಸಿ. ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದೇವೆ. ಅವರಿಗೆ ಉತ್ತಮವಾದ ಸ್ಥಾನವನ್ನು ತುಂಬುವಂತಹ ಕೆಲಸವನ್ನು ಅತಿ ಶೀಘ್ರದಲ್ಲಿ ಮಾಡುತ್ತೇನೆ.

**ಸಭಾಪತಿಯವರು:-** ಆಯಿತು. ಇದನ್ನು ಮಾಡಿ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 32(ಎ) ರೀತ್ಯಾ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಅವರು ಮಂಡಿಸಿರುವ ಅಭಿನಂದನಾ ನಿರ್ಣಯಕ್ಕೆ ಸದನದ ಸಹಮತಿಯನ್ನು ವ್ಯಕ್ತಪಡಿಸುತ್ತಾ, ಟೋಕಿಯೊ ಒಲಂಪಿಕ್ಸ್‌ನಲ್ಲಿ ಹಾಗೂ ತಮ್ಮ ಅಂಗವೈಕಲ್ಯತೆಯನ್ನು ಮೀರಿ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿರುವ ಎಲ್ಲಾ ಕ್ರೀಡಾಪಟುಗಳಿಗೆ ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ಮೈಸೂರು ಜಿಲ್ಲೆಯ ಚಾಮುಂಡಿಪುರದ ರಿಂಗ್ ರಸ್ತೆಯ ಬಳಿ ದಿನಾಂಕ: 24.08.2021ರಂದು ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ತನಿಖೆಯಲ್ಲಿ ಪೊಲೀಸರು ಆರೋಪಿಗಳನ್ನು ರಕ್ಷಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳ ಅನ್ವಯ ಕ್ರಮ ವಹಿಸದಿರುವ ಕುರಿತು.**

...

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯ ಪೂರ್ವದಲ್ಲಿ ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. ಆ ನಿಲುವಳಿ ಸೂಚನೆಯನ್ನು ಓದುತ್ತೇನೆ.

(ಮುಂದು)

(841) 21.09.2021, 11.00, ಟಿಸಿಹೆಚ್-ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮಾನ್ಯ ವಿರೋಧ ಪಕ್ಷದ ನಾಯಕರು)(ಮುಂದು):-**

ವಿಶ್ವದ ಭೂಪಟದಲ್ಲಿ ವಿವಿಧ ಕಾರಣಗಳಿಂದ ವಿಶೇಷ ಸ್ಥಾನವನ್ನು ಪಡೆದಿರುವಂತಹ ರಾಜ್ಯದ ಮೈಸೂರು ಜಿಲ್ಲೆಯಲ್ಲಿ ದಿನಾಂಕ 24.08.2021ರಂದು ಚಾಮುಂಡಿಪುರ ರಿಂಗ್ ರೋಡ್ ಪಕ್ಕದ ಜನವಸತಿ ಸಮೀಪ ಇರುವ ಪ್ರದೇಶದಲ್ಲಿ ಸುಮಾರು 21 ವರ್ಷದ ಯುವತಿ ಹಾಗೂ ಸುಮಾರು 24 ವರ್ಷದ ಯುವಕ ವಾಯು ವಿಹಾರಕ್ಕೆಂದು ಹೋಗಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಯುವಕನಿಗೆ ಪ್ರಜ್ಞೆ ತಪ್ಪುವಂತೆ ಹಲ್ಲೆ ನಡೆಸಿ, ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಪ್ರಕರಣ ಬೆಳಕಿಗೆ ಬಂದ ನಂತರ ಪೊಲೀಸರು ಸಂತ್ರಸ್ತ ಯುವತಿ ಮತ್ತು ಯುವಕನನ್ನು ಪ್ರತಿಷ್ಠಿತ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿ, ಈ ಪ್ರಕರಣವನ್ನು ಮುಚ್ಚುವ ಸಲುವಾಗಿಯೇ ಆಸ್ಪತ್ರೆಯಿಂದ Medico Legal Case (MLC) ಬಂದು ಸುಮಾರು 15 ಗಂಟೆಗಳ ಬಳಿಕ ಎಫ್‌ಐಆರ್ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸದೆ, ಸಾಂತ್ವಾನ ಕೇಂದ್ರಕ್ಕೆ ಕರೆದೊಯ್ಯದೆ, ಆಕೆಯ ಹೇಳಿಕೆಯನ್ನೂ ದಾಖಲಿಸಿಕೊಳ್ಳದೇ ಕೇಸ್‌ನ್ನು ಮುಚ್ಚಿಹಾಕಿ ಆರೋಪಿಗಳನ್ನು ರಕ್ಷಿಸುವ ಸಲುವಾಗಿಯೇ ಈ ತನಿಖೆಯಲ್ಲಿ ಪೊಲೀಸರು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಾರೆ. ಈ ಘಟನೆಯಿಂದಾಗಿ ರಾಜ್ಯಕ್ಕೆ ಅಷ್ಟೇ ಅಲ್ಲ ಇಡೀ ದೇಶಕ್ಕೆ ಕಪ್ಪು ಚುಕ್ಕೆಯಾಗಿದೆ. ಇಂತಹ ಒಂದು ಅಪರಾಧ ನಡೆದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ನಾನು ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿರುವಂಥ ಈ ಸಂದರ್ಭದಲ್ಲಿ ಚರ್ಚೆ ಮಾಡುವ ಸಲುವಾಗಿ ಇಂದಿನ ಎಲ್ಲಾ ಕಲಾಪಗಳನ್ನು ಬದಿಗಿಟ್ಟು ಈ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬೇಕು. ಏಕೆಂದರೆ ಈ ವಿಷಯ ಸಾರ್ವಜನಿಕವಾಗಿ ಬಹಳ ಮಹತ್ವದ್ದಾಗಿದೆ. ಏಕೆಂದರೆ ನಮ್ಮ ರಾಜ್ಯದ ಮಾನ ಮರ್ಯಾದೆ ಹರಾಜು ಆಗುವಂತಹ ಒಂದು ಸ್ಥಿತಿಯಲ್ಲಿ ಇದ್ದೇವೆ. ಆದ್ದರಿಂದ ತಾವು ದಯಮಾಡಿ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ ನಾನು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಏನು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ನೀವು ಅದನ್ನು ಯಾವುದಕ್ಕೆ convert ಮಾಡುತ್ತೀರೋ ಅದಕ್ಕೆ ಸರ್ಕಾರ ಚರ್ಚೆಗೆ ಸಿದ್ಧವಾಗಿದೆ. ನಾನು ಒಂದು ವಿಚಾರವನ್ನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷಕ್ಕೆ ಹೇಳುವುದೇನೆಂದರೆ, ಮೈಸೂರಿನಲ್ಲಿ ನಡೆದ ಪ್ರಕರಣ ಅದೊಂದು ಖಂಡನೀಯ ಘಟನೆ. ಅದರಲ್ಲಿ ಏನೂ ಅನುಮಾನವಿಲ್ಲ. ಆದರೆ ಆ ಇಡೀ ಪ್ರಕರಣದಲ್ಲಿ ಯಾರು ಆರೋಪಿಗಳಿದ್ದಾರೋ ಅವರನ್ನು ಬಂಧಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಸರ್ಕಾರ ಬಹಳ ದಿಟ್ಟವಾದಂಥ ಹೆಜ್ಜೆಯನ್ನಿಟ್ಟಿದೆ. ಸರ್ಕಾರ ಅದರ ಬಗ್ಗೆ ಚರ್ಚೆ ಮಾಡಲು ಮತ್ತು ಉತ್ತರ ಕೊಡುವುದಕ್ಕೆ ಸಿದ್ಧವಿದೆ.

**ಸಭಾಪತಿಯವರು:-** ಈ ವಿಚಾರವನ್ನು ನಾಳೆ ನಿಯಮ 68ರಲ್ಲಿ ತೆಗೆದುಕೊಳ್ಳಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್ :-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು. ದಯಮಾಡಿ ಮಾನ್ಯ ಎಲ್ಲಾ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿನ್ನೆ ದಿವಸ ಪ್ರಶ್ನೋತ್ತರಕ್ಕೆ 1 ಗಂಟೆ 50 ನಿಮಿಷಗಳಾಗಿದೆ. ಅದರಲ್ಲಿ ಒಬ್ಬರು ಸದಸ್ಯರು 21 ನಿಮಿಷಗಳ ಕಾಲ ಮಾತನಾಡಿದ್ದಾರೆ. ಒಬ್ಬರು ಸಚಿವರು 13 ನಿಮಿಷಗಳ ಕಾಲ ಮಾತನಾಡಿದ್ದಾರೆ. ಅದಕ್ಕೆ ನಾನು ತಮಗೆ ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದೇನೆ. ಒಂದು ಗಂಟೆಯೊಳಗೆ ಪ್ರಶ್ನೋತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮುಗಿಯದಿದ್ದರೆ, ಇನ್ನುಳಿದ ಪ್ರಶ್ನೆಗಳನ್ನೆಲ್ಲಾ ರದ್ದುಪಡಿಸುತ್ತೇನೆ. ನಾನು ಈಗಲೇ ಹೇಳುತ್ತಿದ್ದೇನೆ. ನಾನು ಬೆಲ್ ರಿಂಗಣಿಸಿದಾಗ ತುರ್ತಾಗಿ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಬೇಕು. ಸಂಬಂಧಪಟ್ಟವರು ಉತ್ತರ ಕೊಡುತ್ತಾರೆ. ಸಮಯವನ್ನು ಹಾಳು ಮಾಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ.1128**
**(ಉತ್ತರ ಲಗತ್ತಿಸಿದೆ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಈ ಪುಸ್ತಕದಲ್ಲಿ ಇಲ್ಲಿರತಕ್ಕಂಥ ಹೆಚ್ಚು-ಕಡಿಮೆ ಶೇ.80 ಸದಸ್ಯರುಗಳು ಇದೇ ಪ್ರಶ್ನೆಗಳನ್ನು ಲಿಖಿತ ಮೂಲಕ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ನನ್ನ star ನಿಂದಲೋ ಏನೋ starred question ಆಗಿ ಬಂದಿದೆ. ಆ ರೀತಿ starred question ಬಂದಿರುವುದು ಎಲ್ಲೋ ಒಂದು ಕಡೆ results ಸಿಗುತ್ತದೆ ಎನ್ನುವ ಆಶಾಭಾವನೆ ಹೊಂದಿದ್ದೇನೆ. ನಮ್ಮ ಸದಸ್ಯರುಗಳೆಲ್ಲಾ ಸುಮಾರು 100 ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ ಎಲ್ಲರಿಗೂ starred question ಆಗಿ ಬಂದಿಲ್ಲ. ನನ್ನ ಪ್ರಶ್ನೆ starred question ಆಗಿ ಬಂದಿದೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಮಾನ್ಯ ಸಚಿವರು ಸಹಕಾರ ಕ್ಷೇತ್ರದಲ್ಲಿ ಬಹಳ ದಿಗ್ಗಜರಿದ್ದಾರೆ. ಸಂಪೂರ್ಣವಾಗಿ ನಶಿಸಿ ಹೋಗುತ್ತಿರುವ ಒಂದು Marketing Federation ನಲ್ಲಿ ಅಧ್ಯಕ್ಷರಾಗಿ ಅದನ್ನು ಪುನಶ್ಚೇತನಗೊಳಿಸಿ ಕೋಟ್ಯಂತರ ರೂಪಾಯಿ ಆದಾಯ ಬರತಕ್ಕಂಥ ರೈತರಿಗೆ ಅನುಕೂಲವಾಗುವಂಥ ಕೆಲಸ ಮಾಡಿರತಕ್ಕಂಥ ಅಗಾದ ಅನುಭವವನ್ನು ಹೊಂದಿರತಕ್ಕಂಥವರು. ಇದರಲ್ಲಿ ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಆದರೆ ಮೇಲ್ನೋಟಕ್ಕೆ ಅವರು ಯಾವಾಗಲೂ ಕೊಡತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಕಲ್ಲು ಗಣಿಗಾರಿಕೆ ವಿಚಾರದಲ್ಲಿ ಇಡೀ ನಾಡು ನೋಡುತ್ತಿದೆ. ಎಲ್ಲಾ ಕಲ್ಲುಗಣಿಗಾರಿಕೆಗಳು ಪ್ರಭಾವಿಗಳ ಕೈಯಲ್ಲೇ ಇರತಕ್ಕಂಥದ್ದು. ಅದು including ಮಾನ್ಯ ಸಚಿವರು ಇರಬಹುದು, ಎಂಎಲ್ಎಗಳು ಮತ್ತು ಬೇರೆ ಬೇರೆ businessmen ಗಳು ಇರಬಹುದು ಇದೆಲ್ಲಾ ಅವರ ಕೈಯಲ್ಲೇ ಇರತಕ್ಕಂಥದ್ದು. ಅವರಿಗೆ ಒಂದು ಕಾನೂನು ಮತ್ತು ಸಾಮಾನ್ಯ ಜನರಿಗೆ ಒಂದು ಕಾನೂನು ಆಗಬಾರದು. ನಾನು ಜನರಲ್ ಆಗಿ ಹೇಳಿಬಿಡುತ್ತೇನೆ. ತಮಗೆಲ್ಲಾ ಗೊತ್ತಾಗುತ್ತದೆ. ನಾನು ಒಂದೊಂದೇ ಪ್ರಶ್ನೆಯನ್ನು ಕೇಳುವುದಿಲ್ಲ. ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದಷ್ಟು ಬೇಗ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದಾರೆ. ಹಾಗಾಗಿ, ಈ ಪ್ರಶ್ನೆ ಬಹಳ ಮುಖ್ಯವಾಗಿರುತ್ತದೆ. ಶೇ.50 ಕ್ಕಿಂತ ಹೆಚ್ಚು ಜನ ಸದಸ್ಯರು ಈ ಪ್ರಶ್ನೆಗಳನ್ನು ಕೇಳಿದ್ದಾರೆ. ಇದು ತಮಗೂ ಗೊತ್ತಿದೆ ಹಾಗೂ ಮಾನ್ಯ ಸಚಿವರಿಗೂ ಗೊತ್ತಿದೆ. ಆದ್ದರಿಂದ ಇದಕ್ಕೆ ಒಂದು ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಡುಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಕೂಡ intervene ಆಗಿದೆ. ಅರಣ್ಯ ಇಲಾಖೆ, ಕಂದಾಯ ಇಲಾಖೆಯವರು ಅಭಿಪ್ರಾಯವನ್ನು ಕೊಡಲಿಲ್ಲವೆಂದು ಕಲ್ಲುಗಣಿಗಾರಿಕೆಯಲ್ಲಿ unsaved ಅರ್ಜಿಗಳಿವೆಯಲ್ಲಾ, ಹಾಗೆಯೇ ಇಟ್ಟುಬಿಟ್ಟರು. Unsaved ಅರ್ಜಿಗಳನ್ನು ಕೊಟ್ಟ ಮಾತ್ರಕ್ಕೆ I am not permitted to do. ಇದು ಬಹಳ ಸ್ಪಷ್ಟ. ಆದರೆ ಆ ಅರ್ಜಿಗಳನ್ನು ಕೊಟ್ಟನಂತರ ನಾನು ಒಂದು ಕ್ರಶರ್ ಪ್ರಾರಂಭ ಮಾಡುತ್ತೇನೆ. ಆ ಕ್ರಶರ್ ಪ್ರಾರಂಭ ಮಾಡಲು ನನಗೆ ಕಲ್ಲುಗಣಿಗಾರಿಕೆ ಲೈಸೆನ್ಸ್ ಇರಬೇಕಲ್ಲವೇ? I don't have license. ಅವರು license ಕೊಡಲಿಲ್ಲ. ಅದಕ್ಕೆ ಅವರು ಕ್ರಶರ್ ಕಲ್ಲು ಗಣಿಗಾರಿಕೆಯನ್ನು ಪ್ರಾರಂಭ ಮಾಡಿದರು. ಈ ರೀತಿಯ illegal crusher ಗಳು 106 ಇವೆ. ಅವು ಎಲ್ಲಾ ಜಿಲ್ಲೆಗಳಲ್ಲಿವೆ. Including ಚಿಕ್ಕಮಗಳೂರು ಜಿಲ್ಲೆ ಇರಬಹುದು, ಬೇರೆ ಬೇರೆ ಜಿಲ್ಲೆಗಳಲ್ಲಿ ಪೇಪರ್‌ನಲ್ಲಿ ವರದಿಯಾಗುವುದನ್ನು ಪ್ರತಿನಿತ್ಯ ನೋಡುತ್ತಿದ್ದೀರಿ. ಆ illegal ಕಲ್ಲುಗಣಿಗಾರಿಕೆ ಕ್ರಶರ್ ಮಾಡುವವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಇದರ ಜೊತೆಗೆ ರಾಜಧನ ಕೋಟ್ಯಂತರ ರೂಪಾಯಿಗಳು ಸರ್ಕಾರಕ್ಕೆ ಬರುತ್ತಿಲ್ಲ. ನೀವೇ ಸರ್ಕಾರಕ್ಕೆ ಎಷ್ಟರಮಟ್ಟಿಗೆ ದುಡ್ಡು ಬಂದಿದೆಯೆಂದು ಲೆಕ್ಕ ಮಾಡಿ. ಸರ್ಕಾರ ಕೊಟ್ಟಿರುವ ಉತ್ತರದ ಕೊನೆಯಲ್ಲಿ 47 ಪ್ರಕರಣಗಳಲ್ಲಿ ಮೊಕದ್ದಮೆ ದಾಖಲಿಸಿ 293 ಪ್ರಕರಣಗಳಲ್ಲಿ ರೂ.155.22 ಲಕ್ಷಗಳ ದಂಡ ವಸೂಲು ಮಾಡಲಾಗಿದೆ ಎಂದು ಹೇಳಿದ್ದಾರೆ. ಸ್ವಾಮಿ, ತಾವೇನು illegal ಎಂದು ಹೇಳುತ್ತಿದ್ದಾರಲ್ಲಾ, ಒಂದೊಂದು ಪ್ರಕರಣದಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಅಧಿಕಾರಿಗಳು ಬರೀ ಒಂದೂವರೆ ಕೋಟಿ ರೂಪಾಯಿಗಳ ದಂಡ ವಸೂಲಿ ಮಾಡಿದ್ದೇವೆಂದು ಹೇಳುತ್ತಿದ್ದಾರಲ್ಲಾ, ದಯಮಾಡಿ ದಂಡವನ್ನು ನೆಪ ಮಾತ್ರಕ್ಕೆ ಹಾಕಬಾರದು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಲ್.ಭೋಜೇಗೌಡರವರು ಕಲ್ಲುಗಣಿಗಾರಿಕೆ ನಡೆಸಲು ಅನುಮತಿಗೆ ಬಂದಿರುವ unsaved application ಗಳೇ ವಿಲೇವಾರಿ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಮೊದಲು ಏನು ಅನುಮತಿ ಕೊಡುತ್ತಿದೆವು; ಅದು ಏನೆಂದರೆ open auction ಆಗುತ್ತದೆ ಎನ್ನುವ ಕಾರಣಕ್ಕೆ ಇತ್ತೀಚೆಗೆ ನಾವು ನಿಯಮಗಳನ್ನು ಬದಲಾವಣೆ ಮಾಡಿದ ನಂತರ, ಅವೊತ್ತು ಆ ಅಪ್ಲಿಕೇಷನ್‌ಗಳನ್ನು ಕೊಟ್ಟಿರತಕ್ಕಂಥವರಿಗೆ ಇವತ್ತಿನ ದಿವಸ ಅರಣ್ಯ ಇಲಾಖೆ ಮತ್ತು ರೆವೆನ್ಯೂ ಇಲಾಖೆಯವರಿಂದ NOC (No Objection Certificate) ಸಿಗದಿದ್ದಕ್ಕೆ 2016ರಲ್ಲಿ ಕೊಟ್ಟಿರತಕ್ಕಂಥ ಅರ್ಜಿಗಳು unsaved ಆಗಿ ಸುಮಾರು 4500 ಕಟ್ಟಡ ಕಲ್ಲಿನ ಕ್ರಶರ್‌ಗಳ ಅರ್ಜಿಗಳು ಮತ್ತು 1714 ಅಲಂಕಾರಿಕ ಸಿರಾ ಗಣಿಗಳು ಅವೊತ್ತು unsaved ಆಗಿ ಉಳಿದಿವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಲ್ಲಿ ಈಗಾಗಲೇ ಹೈಕೋರ್ಟ್‌ಗೆ ಹೋಗಿರುವ 800 ಅರ್ಜಿಗಳಿಗೆ ಅವರಿಗೆ ಕ್ವಾರಿ ನಡೆಸಲು ಅವಕಾಶ ಕೊಡಬೇಕು ಎನ್ನತಕ್ಕಂಥ ಆದೇಶ ಕೂಡ ಆಗಿದೆ. ಅವೊತ್ತು ಏನೆಂದರೆ saved ಆಗಿರತಕ್ಕಂಥ ಅಪ್ಲಿಕೇಷನ್ 830. ಕಟ್ಟಡ ಕಲ್ಲು ಅರ್ಜಿಗಳು ಮತ್ತು 109 ಅಲಂಕಾರಿಕ ಸಿರಾ ಗಣಿ ಗುತ್ತಿಗೆಗಳಿಗೆ ಇವತ್ತಿನ ದಿವಸ ಕೊಟ್ಟಿದ್ದು ರೆಕಾರ್ಡ್‌ನಲ್ಲಿದೆ. ಅವುಗಳನ್ನು ಏನು saved and court ನಿಂದ ಕೊಟ್ಟು ನಾನು ಒಂದು ಕ್ರಮ ತೆಗೆದುಕೊಳ್ಳುತ್ತೇನೆ. ತಕ್ಷಣವೇ ಸಾಧ್ಯವಾದಷ್ಟು ಬೇಗ ಅವುಗಳಿಗೆ ಕೊಟ್ಟು, ಇವತ್ತಿನ ದಿವಸ ಅವರು ಅಲ್ಲಿ ಕೆಲಸ ಮಾಡುವುದಕ್ಕೆ ಮತ್ತು ಉತ್ಪಾದನೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ಎನ್ನುವ ಒಂದು ಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಇನ್ನುಳಿದಂತೆ ಇವತ್ತಿನ ದಿವಸ ಏನು ಕಲ್ಲುಗಣಿ ಹೊಂದಿಲ್ಲದಿರುವವರು ಹಾಗೂ ಹೊರ ಜಿಲ್ಲೆಯವರು crusher ಪರವಾನಿಗೆ ಪಡೆಯುತ್ತಿದ್ದು, ಕಲ್ಲು ಗಣಿ ಗುತ್ತಿಗೆ ಹೊಂದಿರುವವರಿಗೆ ಮಾತ್ರವೇ ಕ್ರಶರ್ ಪರವಾನಿಗೆ ನೀಡುವ ಕುರಿತು ಸರ್ಕಾರದ ನಿಲುವೇನು ಎಂದು ಕೇಳಿದ್ದಾರೆ. ಇವತ್ತಿನ ದಿವಸ crusher ಬೇರೆ. ಇವತ್ತಿನ ದಿವಸ crusher ಉತ್ಪಾದನೆಯದ್ದು ಕೂಡ ಒಂದು ಕೈಗಾರಿಕೆ ಇದೆ. ಇದು ಒಂದು ಕೈಗಾರಿಕೆಯಾಗಿರುವುದರಿಂದ ಇದಕ್ಕೆ ಇರತಕ್ಕಂಥ ನಿಯಮಗಳೇ ಬೇರೆ. ಆಕ್ಟ್‌ನಲ್ಲಿ ಜಿಲ್ಲಾಧ್ಯಕ್ಷರ ಒಂದು ಅಧ್ಯಕ್ಷತೆಯಲ್ಲಿ license ಕೊಡುವುದಕ್ಕೆ ಒಂದು ನಿಯಂತ್ರಣ ಪ್ರಾಧಿಕಾರವನ್ನೂ ಕೂಡ ಮಾಡಿರುತ್ತಾರೆ, ಅವರು ಅದನ್ನು ಕೊಡುತ್ತಾರೆ. ಇನ್ನು ತಮಗೆಲ್ಲಾ ಗೊತ್ತಿರುವಂತೆ ಕಲ್ಲು ಗಣಿಗಾರಿಕೆಗೆ ಪರವಾನಿಗೆಯನ್ನು ಜಿಲ್ಲಾಧಿಕಾರಿಗಳು ಕೊಡುತ್ತಾರೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ licensing ಮತ್ತು ನಿಯಂತ್ರಣ ಪ್ರಾಧಿಕಾರ ಇವೆರಡೂ ಕೂಡಿ ಇದನ್ನು ಕೊಡುತ್ತಿದ್ದೆವು. ಆದರೆ ಈಗ ಇವೆರಡೂ ಪ್ರತ್ಯೇಕಗೊಂಡಿವೆ. ಇವತ್ತು crusher ಗೆ ಪರವಾನಿಗೆ ಕೊಡುವುದೇ ಬೇರೆ. ಗಣಿಗಾರಿಕೆಗೆ ಪರವಾನಿಗೆ ಕೊಡತಕ್ಕಂಥದ್ದೇ ಬೇರೆ. ಇವತ್ತಿನ ದಿವಸ ಇವೆರಡರಲ್ಲೂ ಪರವಾನಿಗೆ ಕೊಡುವುದಕ್ಕೆ ಅವಕಾಶವಿದೆ ಒಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರಿಗೆ ಒಂದು ಅನುಮಾನವೇನೆಂದರೆ, ಕೃಷಿ ಜಮೀನಿನಲ್ಲಿರುವ ಕಟ್ಟಡ ಕಲ್ಲು ಮತ್ತು ಇತರೆ ಉಪಖನಿಜಗಳನ್ನು ತೆರವುಗೊಳಿ ಕೃಷಿ ಯೋಗ್ಯ ಜಮೀನನ್ನಾಗಿ ಪರಿವರ್ತಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆಯೇ ಎಂದು ಕೇಳಿದ್ದಾರೆ. ಅದು ಅವಕಾಶವಿತ್ತು. ಇವತ್ತಿನ ದಿವಸ 1994ರ ನಿಯಮ 3 (ಎ)(ಬಿ) ಅಡಿಯಲ್ಲಿ ಕೃಷಿ ಜಮೀನಿನಲ್ಲಿ ಲ್ಯಾಟರೈಟ್, ಪುಲ್ಲರ್ಸ್ ಅರ್ಥ್ ಮತ್ತು ಮುರ್ರಂ ಕಲ್ಲುಗಳನ್ನು ತೆಗೆಯುವುದಕ್ಕೆ ಅವಕಾಶ ಇದೆ. ಆದರೆ ಇವತ್ತಿನ ದಿವಸ ನಾವು ನಿಯಮಗಳನ್ನು ತಿದ್ದುಪಡಿ ಮಾಡಿದ್ದೇವೆ. ಅಲ್ಲಿ ಏನಾದರೂ ಕಲ್ಲುಗಳು ಬಂದಿದ್ದರೆ ಅವನ್ನು ಕಮರ್ಷಿಯಲ್ ಆಗಿ ಬೇರೆ ಕಡೆ ಮಾರಾಟ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶವಿಲ್ಲ. ಈ ಒಂದು ತಿದ್ದುಪಡಿಯಾಗಿರುವುದರಿಂದ ಕೊಡುವುದಿಲ್ಲ. ಆದರೆ ಇವತ್ತಿನ ದಿವಸ ಸ್ವಂತಕ್ಕೆ ನಿಯಮ 35ರಡಿಯಲ್ಲಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅದನ್ನು ಅವರ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳಬಹುದು ಎನ್ನುವುದನ್ನು ಬದಲಾವಣೆ ಮಾಡಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಹೊಸ ಮರಳು ನೀತಿ 2020 ರನ್ವಯ 1, 2, ಮತ್ತು 3ನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಎತ್ತುವಳಿ ಮಾಡಿ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿದೆಯೇ ಎಂದು ಕೇಳಿದ್ದಾರೆ. ಈಗ ನಾವು ಹೊಸ ಮರಳು ನೀತಿಯನ್ನು ತರುವುದಕ್ಕೆ rules frame ಮಾಡುತ್ತಿದ್ದೇವೆ. ಇತ್ತೀಚೆಗೆ ಇದು ಕ್ಯಾಬಿನೆಟ್ ಮುಂದೆ ಹೋಗಿತ್ತು. ಅದು postpone ಆಗಿದೆ. ಅದನ್ನು ಮುಂದಿನ ಕ್ಯಾಬಿನೆಟ್‌ನಲ್ಲಿ ತಂದು ಆ ಮರಳು ನೀತಿಯನ್ನು ಸರಳೀಕರಣ ಮಾಡುವುದರ ಜೊತೆಗೆ ಹಳ್ಳ, ತೊರೆಗಳಲ್ಲಿ ಸಿಗತಕ್ಕಂಥ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಕೊಡಬೇಕು ಎನ್ನುವುದು ನಿಯಮಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಿದ್ದೇವೆ.

**(ಮುಂದು...)**

**(842)21.9.2021/11.10/ಎಂ.ಎಂ-ಎ.ಕೆ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಮುಂದು):-**

ಅದನ್ನು ಅಲ್ಲಿಂದಲೇ ಪರ್ಮಿಟ್ ಮಾಡುವುದು ಮತ್ತು ಜಿಲ್ಲಾದ್ಯಂತ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಸಮಿತಿ ಮತ್ತು ತಾಲ್ಲೂಕಿನಲ್ಲಿ ಕೂಡ ಸಹಾಯಕ ಆಯುಕ್ತರಿಂದ ಮರಳು ನೀತಿಯನ್ನು ಮಾಡಿ ಅವರಿಗೆ ಅಲ್ಲಿ ಪರ್ಮಿಟ್ ಕೊಡುವುದು, ಕಾನೂನಾತ್ಮಕವಾಗಿ ನಿಯಮಗಳನ್ನು ರೂಪಿಸಿಕೊಂಡು ಮತ್ತು geo-tracker ಮಾಡಿಕೊಡುವುದು ಒಟ್ಟಾರೆ ಅವುಗಳನ್ನು ಸರ್ವೆ ಮಾಡುವುದರ ಜೊತೆಗೆ ಕೊಡಬೇಕಾದಂತಹ ಮರಳನ್ನು ಸರಿಯಾಗಿ ಕೊಡುವ ಪ್ರಯತ್ನ ಮಾಡುತ್ತೇನೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ, ನಮ್ಮ ರಾಜ್ಯದಲ್ಲಿ ಬೇಡಿಕೆ ಇರುವುದು 45 ದಶಲಕ್ಷ ಟನ್ ಮರಳಿನ ಅವಶ್ಯಕತೆ ಇದೆ. ಆದರೆ ನಮ್ಮಲ್ಲಿ ಉತ್ಪಾದನೆಯಾಗುವುದು ಕೇವಲ 35 ದಶಲಕ್ಷ ಟನ್ ಆಗಿರುವುದರಿಂದ 10 ದಶಲಕ್ಷ ಟನ್ ಮರಳಿನ ಬೇಡಿಕೆಯನ್ನು ಪೂರ್ತಿ ಮಾಡುವುದಕ್ಕೆ ಕ್ರಷರ್‌ಗಳಿಗೆ ಅನುಮತಿ ಕೊಡುವುದು ಮತ್ತು ಉಸುಗು ನೀತಿಯಲ್ಲಿ ಬದಲಾವಣೆ ಮಾಡುವುದರಿಂದ ಕೊರತೆಯನ್ನು ನೀಗಿಸುತ್ತೇವೆ ಎಂಬ ಮಾತನ್ನು ಹೇಳಲಿಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರ ಅನುಭವದಲ್ಲಿ ಉತ್ತರ ಕೊಟ್ಟಿದ್ದಾರೆ ಅದನ್ನು ನಾವು ಒಪ್ಪಬೇಕಾಗುತ್ತದೆ. ಬಹಳ ಮುಖ್ಯವಾಗಿ ನಾನು ಬೇರೆ ವಿಚಾರವನ್ನು ಕೇಳುವುದಕ್ಕೆ ಹೋಗುವುದಿಲ್ಲ. ಕಲ್ಲು ಗಣಿಗಾರಿಕೆ ಮಾಡಿ ಯಾರು ಎಷ್ಟು ಬೇಕಾದರೂ ಶ್ರೀಮಂತರಾಗಲಿ. ಹಿಂದೆ ಕೃಷಿ ಜಮೀನಿನಲ್ಲಿ ಕಾಡ್ಗಲ್ಲು ಎಂದು ಬರುತ್ತಿತ್ತು. ಆ ಕಾಡ್ಗಲ್ಲುಗಳನ್ನು ಹೆಕ್ಕಿ ಈಗಿರುವ ಚಾನಲ್‌ಗಳಲ್ಲಿ, ತೋಟಗಳಲ್ಲಿ ಕಾಡ್ಗಲ್ಲಿನಲ್ಲಿ revetment ಕಟ್ಟುತ್ತಿದ್ದೇವೆ. ಜೆಲ್ಲಿ ಹೊಡೆಯುವವರಿದ್ದರು. ಅವರು ಕಲ್ಲಿನಿಂದ ಜೆಲ್ಲಿ ಹೊಡೆದು ಹಿಂದೆ ಎಲ್ಲಾ ರಸ್ತೆಗಳನ್ನು ಮಾಡಿಲ್ಲವೇ? ಅವರೆಲ್ಲಾ ಇವತ್ತು ಎಲ್ಲಿ ಹೋಗಿದ್ದಾರೆ? ಕಾಡ್ಗಲ್ಲುಗಳು ಕೂಡ ಇರುವುದಿಲ್ಲ. ಮಲೆನಾಡಿನಲ್ಲಿ ಒಂದು ಸಲ ಮಳೆ ಬಂದು ಗುಡ್ಡ ಕುಸಿದರೆ ನೀರು ಗದ್ದೆ ಮೇಲೆಲ್ಲಾ ಹೋಗುತ್ತದೆ. ಆಗ ಮರಳು ಪೂರ್ತಿಯಾಗಿ ಗದ್ದೆಯನ್ನು ತುಂಬುತ್ತದೆ. ಆ ಮರಳನ್ನು ತೆಗೆಯುವುದಕ್ಕೆ ಅರಣ್ಯ ಇಲಾಖೆಯವರು ಅನುಮತಿ ಕೊಡುವುದಿಲ್ಲ. ಹಾಗಿದ್ದರೆ ನಾನು ಗದ್ದೆಯನ್ನು ಅಚ್ಚುಕಟ್ಟು ಮಾಡುವುದು ಬೇಡವೇ?

**ಸಭಾಪತಿಯವರು**:- ಏನು ಮಾಡಬೇಕು ಎಂಬುದನ್ನು ಹೇಳಿ. ನೀವು 10 ನಿಮಿಷಗಳ ಸಮಯ ತೆಗೆದುಕೊಂಡರೆ ಹೇಗೆ? ನಾನು ಸಭೆಯನ್ನು ಹೇಗೆ ನಡೆಸಬೇಕು?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದುದು. ಕೃಷಿ ಜಮೀನಿಗೆ ಹೋಗಬೇಕಾದರೆ ನಾನು ಅರಣ್ಯ ಇಲಾಖೆ ದಾರಿಯಲ್ಲಿ, ಕಂದಾಯ ಇಲಾಖೆಯ ದಾರಿಯಲ್ಲಿ ಹೋಗಬೇಕು. ನನ್ನ ಜಾಗವನ್ನು ಅಚ್ಚುಕಟ್ಟು ಮಾಡಿಕೊಂಡು ಅಲ್ಲಿಗೆ ಹೋಗಬೇಕು. ಆದರೆ ಅಲ್ಲಿನ ಮರಳು ತೆಗೆಯುವುದಕ್ಕೆ ನೀವು ಬಿಡುವುದಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಚಾರದಲ್ಲಿ ಸ್ವಲ್ಪ ತೊಂದರೆಗಳಿವೆ. ಅಲ್ಲಿ ಅರಣ್ಯ ಇಲಾಖೆಯವರ ಕಿರಿಕಿರಿ ಇದೆ. ಇವರು ಮರಳನ್ನು ತೆಗೆದುಕೊಂಡು ಹೋಗುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಸರ್ಕಾರವು ಅರಣ್ಯ ಇಲಾಖೆಯ ಜೊತೆ ಮಾತನಾಡಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಮರಳಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರದ ಮಟ್ಟದಲ್ಲಿ ಅರಣ್ಯ ಇಲಾಖೆಯ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಸಭಾಪತಿಯವರು**:- ಮಾನ್ಯ ಕೊಂಡಯ್ಯನವರೇ, ತಮ್ಮ ಪ್ರಶ್ನೆ ಸಂಖ್ಯೆ 92(1050) ಗೃಹ ಇಲಾಖೆಗೆ ವರ್ಗಾವಣೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ. ಕೊಂಡಯ್ಯ**:- ಸದನ ಮುಗಿಯುವುದರೊಳಗೆ ನನ್ನ ಪ್ರಶ್ನೆ ಬರುತ್ತದೆಯೇ?

**ಸಭಾಪತಿಯವರು**:- ಅದನ್ನು ಹೇಳುತ್ತೇನೆ. ಈಗ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರ ಪ್ರಶ್ನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 1115**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಬೆಂಗಳೂರಿನ ಬಿ.ಡಿ.ಎ.,ಗೆ ಸಂಬಂಧಪಟ್ಟದ್ದಾಗಿದೆ. ಇಲ್ಲಿ ಎರಡು ಸಂಘಗಳು ನೋಂದಣಿಯಾಗಿವೆ. ಒಂದು ಬಿ.ಡಿ.ಎ. ನೌಕರರ ಸಂಘ ಇನ್ನೊಂದು ಬಿ.ಡಿ.ಎ. ವೆಲ್‌ಫೇರ್ ಅಸೋಸಿಯೇಷನ್. ಒಂದು Trade Unions Act ಒಳಗೆ ನೋಂದಣಿಯಾದರೆ ಇನ್ನೊಂದು ಸೊಸೈಟೀಸ್ ಆಕ್ಟ್‌ನಲ್ಲಿ ನೋಂದಣಿಯಾಗಿದೆ. ಇವೆರಡಕ್ಕೂ ನಿವೇಶನ ಹಂಚುವಂತಹ ಅಧಿಕಾರ ಇದೆಯೇ ಎನ್ನುವುದು ನನ್ನ ಪ್ರಶ್ನೆ. ಎರಡನೆಯದಾಗಿ ಕರ್ನಾಟಕ ಸರ್ಕಾರ ಸುವರ್ಣ ಕರ್ನಾಟಕ ಯೋಜನೆ ಸಂದರ್ಭದಲ್ಲಿ ಬಿ.ಡಿ.ಎ. ನೌಕರರಿಗೆ ನಿವೇಶನವನ್ನು ಹಂಚಿಕೆ ಮಾಡುವುದಕ್ಕೋಸ್ಕರ 45 ಎಕರೆ ಭೂಮಿಯನ್ನು ಮಂಜೂರು ಮಾಡಿದೆ. ಅದನ್ನು ಸರ್ಕಾರ ಯಾವ ಸಂಘಕ್ಕೆ ಮಂಜೂರು ಮಾಡಿತ್ತು? ಯಾವ ಸಂಘಕ್ಕೆ ಅದನ್ನು ವಿತರಣೆ ಮಾಡಿದೆ ಎನ್ನುವುದನ್ನು ಮಾನ್ಯ ಸಚಿವರು ನನಗೆ ಸ್ಪಷ್ಟೀಕರಿಸಬೇಕು. ಸರ್ಕಾರ ಮಂಜೂರು ಮಾಡಿದ 45 ಎಕರೆ ಭೂಮಿ ಬೇರೆ ಸಂಘಕ್ಕೆ. ಆದರೆ ನೋಂದಣಿ ಮಾಡಿಕೊಂಡಿದ್ದು ಇನ್ನೊಂದು ಸಂಘಕ್ಕೆ ಆಗಿದೆ. ಅದಕ್ಕೆ ಅವರು ಉತ್ತರಿಸಬೇಕು. ಜೊತೆಗೆ ಇಲ್ಲಿ ಬಹಳಷ್ಟು ಹಗರಣಗಳಾಗಿವೆ. ತಮ್ಮ ಸಂಘದ ಸದಸ್ಯರಲ್ಲದವರಿಗೂ ಕೂಡ ಬಿ.ಡಿ.ಎ.ನಲ್ಲಿ ಭ್ರಷ್ಟಾಚಾರ ನಡೆಸಿ 800 ಜನರಿಗೆ ಬೇರೆ ಬೇರೆಯವರಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ. ಹಿಂದೆ ಒಂದು ವರ್ಷದ ಕೆಳಗೆ ಸದನದಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಒಂದು ನಿವೇಶನದ ಬಗ್ಗೆ ಹಿಂದಿನ ಸದಸ್ಯರಾದ ಶ್ರೀ ಶರಣಪ್ಪ ಮಟ್ಟೂರರವರು ಪ್ರಶ್ನೆಯನ್ನು ಕೇಳಿದ್ದರು. ನಿಖರವಾದ ಸೈಟ್ ನೋಂದಣಿಯಾಗಿದೆಯೇ ಎಂದು ಕೇಳಿದ್ದರು. ನೋಂದಣಿಯಾಗಿಲ್ಲ ಎಂಬ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಾಗ ಅದು ಹಕ್ಕುಚ್ಯುತಿಯಾಗಿ ಬೇರೆ ಬೇರೆ ಕಡೆಗೆ ಬಂತು. ಅಲ್ಲಿ ಪರಿಶೀಲನೆ ಮಾಡಿದಾಗ ಮಾನ್ಯ ಸದಸ್ಯರು ಅಂದು ಏನು ಪ್ರಶ್ನೆ ಕೇಳಿದ್ದರು, ಆ ನಿವೇಶನ ನೋಂದಣಿಯಾಗಿತ್ತು, ಅದನ್ನು ಅಧಿಕಾರಿಗಳು ಒಪ್ಪಿಕೊಂಡರು. ಹಂಚಿಕೆಯಾಗಿದ್ದ ಆ ಸೈಟು ಬಹಳ ಸಣ್ಣದಾಗಿತ್ತು. ಬೆಂಗಳೂರಿನ ಬಿ.ಡಿ.ಎ. ವ್ಯಾಪ್ತಿಯೊಳಗೆ ಒಂದು ಎಕರೆ ಕಾರ್ನರ್ ಸೈಟನ್ನು ಹಂಚಿಕೆ ಮಾಡಿದ್ದರು. ಅಂದು ಇದ್ದಂತಹ ಕಮೀಷನರ್ ಮತ್ತು ಪದಾಧಿಕಾರಿಗಳು ಸೇರಿಕೊಂಡು ಭ್ರಷ್ಟಾಚಾರ ಮಾಡಿದ್ದರು. ನಂತರ ನಾವು ಒತ್ತಾಯ ಮಾಡಿದ ಮೇಲೆ ಅದನ್ನು ವಾಪಸ್ ಪಡೆದುಕೊಂಡಿದ್ದಾರೆ. ಆದರೆ ಅಂದಿನ ಒಬ್ಬ ಬಿ.ಡಿ.ಎ ಕಮೀಷನರ್ ಮತ್ತು ಬೇರೆಯವರು ಸೇರಿ ಒಂದು ಎಕರೆ ಸೈಟನ್ನು ಇದುವರೆಗೂ ಬಿ.ಡಿ.ಎ.ನಲ್ಲಿ ಎಲ್ಲಾದರೂ ಮಾಡಿದ್ದಾರೆಯೇ ಅಥವಾ ಬೇರೆ ಯಾವುದಾದರೂ ಲೇಔಟ್‌ನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆಯೇ? ಆ ರೀತಿ ಬಹಳ ದೊಡ್ಡ ಅನಾಚಾರವನ್ನು, ಭ್ರಷ್ಟಾಚಾರವನ್ನು ಮಾಡಿದವರ ಮೇಲೆ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಯಬಯಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ. ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರಡಿ ನೋಂದಣಿಯಾಗಿದೆ. ಹಿಂದೆ ಅದು ಸಹಕಾರ ಇಲಾಖೆಯಲ್ಲಿರಲಿಲ್ಲ, ಕಂದಾಯ ಇಲಾಖೆಯಲ್ಲಿತ್ತು. ಆಮೇಲೆ ಮೂಲ ಬೈಲಾಗೆ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘವು ದಿನಾಂಕ 08.8.2006ರಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಬೈಲಾ ಅನುಮೋದನೆಯನ್ನು ಪಡೆಯಲಾಗಿದೆ. ನಮ್ಮ ಇಲಾಖೆಗೆ ಬರುವುದಕ್ಕಿಂತ ಮುಂಚೆಯೇ ಅದು ನೋಂದಣಿಯಾಗಿದೆ. ಬೈಲಾ ವನ್ನು ಕೂಡ ಅವರು ತಿದ್ದುಪಡಿ ಮಾಡಿಕೊಂಡಿದ್ದಾರೆ. ಅಲ್ಲಿ ಸುಮಾರು 1,000 ಜನ ಸದಸ್ಯರಿದ್ದಾರೆ. ಬಿ.ಡಿ.ಎ.ನವರು 48 ಎಕರೆಯಲ್ಲಿ ಎರಡು ಎಕರೆಯನ್ನು ಇದಕ್ಕೆ ಏನು ನೋಂದಣಿಯಾಗಿದೆ ಅದಕ್ಕೆ ಹಸ್ತಾಂತರ ಮಾಡಿದ್ದಾರೆ. 48 ಎಕರೆಯಲ್ಲಿ 42 ಎಕರೆ ಮಾತ್ರ ಹಸ್ತಾಂತರವಾಗಿದೆ. ಉಳಿದ ಐದು ಎಕರೆ ಆಗಬೇಕಾಗಿತ್ತು, ಇನ್ನೂ ಆಗಿಲ್ಲ. ಸುಮಾರು 01,47,31,823/- ರೂಪಾಯಿಗಳನ್ನು ಸಂಘದವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಣವನ್ನು ಕಟ್ಟಿದ್ದಾರೆ. ಪ್ಲ್ಯಾನ್ ಕೂಡ ಮಂಜೂರಾಗಿದೆ. ನೋಂದಣಿಗೆ ಸೈಟನ್ನು ಹಂಚುವ ಅಧಿಕಾರ ಇಲ್ಲ. ಆದರೆ ಅವರು ಅದನ್ನು misguide ಮಾಡಿದ್ದಾರೆ. ಗೃಹ ನಿರ್ಮಾಣ ಸಹಕಾರ ಸಂಘ ಎಂದು ಸೇರಿಸಿ ಅದರಲ್ಲಿ ನೋಂದಣಿ ಮಾಡಿದ್ದಾರೆ. ಅದಕ್ಕೆ ಇಲಾಖೆ ಕೂಡ ತನಿಖೆ ಮಾಡಿ ಇವರು ಮಾಡಿರುವುದು ತಪ್ಪು ಎಂದು ಆರೋಪ ಮಾಡಿದ್ದಾರೆ. ಆ ಸಂಘವನ್ನು supersede ಮಾಡಿದ್ದೇವೆ. ಅಲ್ಲಿಗೆ ಆಡಳಿತಾಧಿಕಾರಿಯನ್ನು ಕೂಡ ಹಾಕಿದ್ದೇವೆ. ಬಿಡಿಎ.ನವರು ನೌಕರರಿಗೆ ಮತ್ತು ಬೇರೆ ಬೇರೆಯವರಿಗೆ ಏನು ಕೊಟ್ಟಿದ್ದಾರೆ ಅದೆಲ್ಲವೂ ಪೂರ್ಣವಾಗಿ ತನಿಖೆಯಾಗಿದೆ, ಲೋಕಾಯುಕ್ತ ಕೂಡ ಅದನ್ನು ತನಿಖೆ ಮಾಡಿದ್ದಾರೆ. ಯಾರೋ 108 ಜನ ಸದಸ್ಯರಿಗೆ ಸೈಟ್ ಹಂಚಿಕೆಯಾಗಿಲ್ಲ ಅವರು ಹೈಕೋರ್ಟ್‌ಗೆ ಹೋಗಿದ್ದರು. ಹೈಕೋರ್ಟ್ ಕೂಡ ಆದೇಶ ನೀಡಿದೆ. ಇನ್ನು ಐದು ಎಕರೆ ಭೂಮಿ ಏನು ಸಂಘಕ್ಕೆ ಬರಬೇಕು, ಅದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ತೆಗೆದು ಆ ಸಂಘಕ್ಕೆ ಹಸ್ತಾಂತರ ಮಾಡಬೇಕಾಗುತ್ತದೆ. ಐದು ಎಕರೆಯಲ್ಲಿ ಲೇಔಟ್ ಮಾಡಿ ಉಳಿದಂತಹ ಸದಸ್ಯರಿಗೆ ಅದನ್ನು ಹಂಚಿಕೆ ಮಾಡುವ ಕ್ರಮ ವಹಿಸಲಾಗುತ್ತದೆ. ನಾವು ಶ್ರೀ ಲೋಕೇಶ್ ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಗೆ ಹಾಕಿದ್ದೆವು. ಅವರಿಗೆ ಬಡ್ತಿಯಾಗಿ ಬೇರೆ ಕಡೆಗೆ ಹೋದಮೇಲೆ ಇನ್ನೊಬ್ಬರನ್ನು ಅಲ್ಲಿಗೆ ತನಿಖಾಧಿಕಾರಿಯನ್ನಾಗಿ ಹಾಕಿದ್ದೇವೆ. ಮಾನ್ಯ ಸದಸ್ಯರಿಗೆ ಇಷ್ಟು ಮಾಹಿತಿಯನ್ನು ಕೊಡುತ್ತಾ ಇನ್ನೂ ಏನಾದರೂ ಇದ್ದರೆ ನನ್ನ ಗಮನಕ್ಕೆ ತರಬೇಕೆಂದು ತಿಳಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಭಾಪತಿಯವರೇ, ಸಂಘ ಯಾರಿಗೆ ನಿವೇಶನಗಳನ್ನು ಹಂಚಿದೆಯೋ ಆ ಸಂಘಕ್ಕೆ ಸರ್ಕಾರಿ ಭೂಮಿ ಹಂಚಿಕೆಯಾಗಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಹಂಚಿಕೆಯಾಗಿದ್ದು ಆಯನೂರು ಮಂಜುನಾಥ್ ಹೆಸರಿನಲ್ಲಿ, ಆದರೆ ಹಂಚಿರುವುದು ಸೋಮಶೇಖರ್ ಅವರ ಹೆಸರಿಗೆ ಎಂದು ಆದರೆ ಅದರ ಸಿಂಧುತ್ವ ಹೇಗೆ? ಸರ್ಕಾರ ಕೊಟ್ಟಿದ್ದು ಯಾರಿಗೆ, ಅದನ್ನು ಯಾರು ಯಾರಿಗೆ ನೋಂದಣಿ ಮಾಡಿಕೊಟ್ಟರು? ಅದನ್ನು ಹಂಚುವ ಅಧಿಕಾರ ಹೇಗೆ ಬಂತು? ಸರ್ಕಾರ ಕೊಟ್ಟಿದ್ದು ಸರ್ಕಾರಿ ನೌಕರರ ಸಂಘಕ್ಕೆ. ವೆಲ್‌ಫೇರ್ ಅಸೋಸಿಯೇಷನ್‌ಗೆ locus-standi ಹೇಗೆ ಬಂತು? ಅದನ್ನು ಯಾರು ವರ್ಗಾವಣೆ ಮಾಡಿಕೊಟ್ಟರು? ಸರ್ಕಾರಿ ಭೂಮಿಯನ್ನು ಒಂದು ಸಂಘ ಇನ್ನೊಂದು ಸಂಘಕ್ಕೆ ವರ್ಗಾವಣೆ ಮಾಡಲು ಬರುತ್ತದೆಯೇ? ಇಲ್ಲಿ ಬಹಳ ದೊಡ್ಡ ಕರ್ಮಕಾಂಡದ ಹಗರಣ ನಡೆದಿದೆ. ಅದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆಯುತ್ತದೆ. ಏಕೆಂದರೆ, ಬಿಡಿಎ ನೌಕರರ ಸಂಘ ಏನಿದೆ ಅಲ್ಲಿರುವಂತಹ ನೌಕರರೇ ಈ ಸಂಘದ ಸದಸ್ಯರು. ಸಂಘದಲ್ಲಿ ಭ್ರಷ್ಟಾಚಾರವನ್ನು ಮಾಡುವುದು, ಅದನ್ನು ಇಲ್ಲಿ ಬಂದು ಮುಚ್ಚಿ ಹಾಕಿಕೊಳ್ಳುವುದು. ಇಲಾಖೆಯಲ್ಲಿರುವ ಅಧಿಕಾರಿಗಳೂ ಅವರೇ. ಇಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ನುಂಗಿ ಹಾಕುವಂತಹ ಕೆಲಸ ಆಗಿದೆ. ನನ್ನ ಮೂಲ ಪ್ರಶ್ನೆಯೇನೆಂದರೆ, ಸರ್ಕಾರ ಇಷ್ಟು ಜಮೀನನ್ನು ಯಾವ ಸಂಘಕ್ಕೆ ಮಾಡಿಕೊಟ್ಟಿತ್ತು ಅದನ್ನು ಏತಕ್ಕೆ ಹಂಚಲಿಲ್ಲ? ಬೇರೆಯವರಿಗೆ ಹಂಚುವಂತಹ ಅಧಿಕಾರ ಅವರಿಗೆ ಹೇಗೆ ಬಂತು?

(ಮುಂದು)

(843) 21-09-2021/ 11-20/ ಕೆಹೆಚ್-ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್ ಈ ಹೆಸರಿನಲ್ಲಿಯೇ ಸಂಘ ನೋಂದಾವಣಿಯಾಗಿದೆ. ಅದರ ಜೊತೆಗೆ ಮೆಮೋರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಧ್ಯೇಯೋದ್ದೇಶಗಳನ್ವಯ ಬೈಲಾ ಕೂಡ ಅಮೆಂಡ್‌ಮೆಂಟ್ ಆಗಿದೆ. ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಸೋಸಿಯೇಷನ್‌ಗೆ ನಿವೇಶನ ಹಂಚಿಕೆ ಮಾಡುವುದಕ್ಕೆ ಅವಕಾಶ ಇಲ್ಲ. ಮೆಮೋರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಧ್ಯೇಯ್ಯೋದ್ದೇಶಗಳು ಏನಿವೆ, ಅದರಲ್ಲಿ ನಿವೇಶನಗಳನ್ನು ಹಂಚಬಹುದು ಎನ್ನುವಂತಹದ್ದನ್ನು ಸೇರಿಸಿ, ರಿಜಿಸ್ಟರ್‌ನಲ್ಲಿ ಈ ಬೈಲಾವನ್ನು ಅಮೆಂಡ್‌ಮೆಂಟ್ ಮಾಡಿಕೊಂಡಿದ್ದಾರೆ. ಬಿಡಿಎ ಅಲಾಟ್‌ಮೆಂಟ್ ಕೂಡ . . .

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಚಿವರೇ, ನನ್ನ ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ಸಚಿವರಾದ ಎಸ್.ಟಿ.ಸೋಮಶೇಖರ್‌ರವರೇ, ಅವರು ತಪ್ಪು ಎಂದು ಹೇಳುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸರ್ಕಾರ 45 ಎಕರೆ ಜಮೀನನ್ನು ಯಾವ ಸಂಘಕ್ಕೆ ಕೊಟ್ಟಿದೆ, ಇದನ್ನು ಯಾವ ಸಂಘ ವಿತರಣೆ ಮಾಡಿದೆ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರ ಕೊಟ್ಟಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅವರದ್ದೇ ಆದಂತಹ resolution ಮಾಡಿ, ಬಿಡಿಎ ಎಂಪ್ಲಾಯಿಸ್ ವೆಲ್‌ಫೇರ್ ಅಸೋಸಿಯೇಷನ್‌ಗೆ ಕೊಟ್ಟಿರುವಂತಹದ್ದಾಗಿದೆ. ಅವರು ಅದನ್ನು misguide ಮಾಡಿದ್ದಾರೆ ಎಂದು ಹೇಳಿ. . .

**ಸಭಾಪತಿಯವರು:-** ಮಾನ್ಯ ಸಚಿವರೇ, misguide ಏನಾದರೂ ಮಾಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನನ್ನ contention ಇಲ್ಲೇ ಇದೆ. ಮಾನ್ಯ ಸಚಿವರು ದಾಖಲೆಯನ್ನು ತರಿಸಿಕೊಳ್ಳಲಿ. ಕರ್ನಾಟಕ ರಾಜ್ಯ ಸರ್ಕಾರ ಈ ಭೂಮಿಯನ್ನು ಹಂಚಿಕೆ ಮಾಡಿದೆ. ನಂತರ ಬಿಡಿಎ ರವರು ಅವರಿಗೆ ಕೊಟ್ಟಿದ್ದಾರೆ. ಸರ್ಕಾರ ಸುವರ್ಣ ಕರ್ನಾಟಕದ ಹೆಸರಿನಲ್ಲಿ ನೌಕರರಿಗೆ ಕೊಡುವುದಕ್ಕೋಸ್ಕರ 45 ಎಕರೆ ಭೂಮಿಯನ್ನು ಯಾವ ಸಂಘಕ್ಕೆ ಕೊಟ್ಟಿದ್ದು, ಇದನ್ನು ಯಾವ ಸಂಘದವರು ವಿತರಣೆ ಮಾಡಿದ್ದಾರೆ? ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಬಿಡಿಎ ರವರು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಬಿಡಿಎರವರು ಕೊಡಬೇಕೆಂದು ಸರ್ಕಾರ ಒಂದು ಆದೇಶವನ್ನು ಮಾಡಿದೆಯಲ್ಲವೇ, ಅದರ ಮಾಹಿತಿ ಮಾನ್ಯ ಸಚಿವರ ಹತ್ತಿರ ಇದ್ದರೆ ಹೇಳಲಿ. ಇಲ್ಲದಿದ್ದರೆ ತಪ್ಪು ತಪ್ಪಾಗಿ ಹೇಳಿ ಸದಸ್ಯನ ಹಕ್ಕನ್ನು ಚ್ಯುತಿ ಮಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನು ತಪ್ಪಾಗಿ ಏನು ಹೇಳುತ್ತಿಲ್ಲ. ನನಗೆ ಇರುವಂತಹ ಮಾಹಿತಿಯನ್ನು ಸದ್ಯದಲ್ಲಿಯೇ ತರಿಸಿ ಅವರಿಗೆ ಒದಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೇಳಿರುವಂತಹ ಮಾಹಿತಿಯನ್ನು ತರಿಸಿಕೊಡಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿಲ್ಲ. ಬೇರೆ ಯಾವುದಾದರೂ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ತಾವು ಪತ್ರವನ್ನು ಕೊಡಿ. ನಂತರ ಅವಕಾಶ ಮಾಡಿಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1029**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹುತೇಕವಾಗಿ ಉತ್ತರಗಳನ್ನು ಕೊಟ್ಟಿದ್ದಾರೆ. ಈ ಬಾರಿ ಇವರು ಕೊಟ್ಟಿರುವಂತಹ ಉತ್ತರ ಚೆನ್ನಾಗಿದೆ. He has agreed that the total project is a failure ಮತ್ತು ನಾವೆಲ್ಲಾ revamp ಮಾಡುತ್ತೇವೆ. ಮೊನ್ನೆಯ ದಿವಸ ಉಳ್ಳಾಲ ನಗರದ ಬಗ್ಗೆ ಬಹಳ ದೊಡ್ಡ ಚರ್ಚೆಯಾಯಿತು. ಸುರತ್ಕಲ್ ವಲಯದಲ್ಲಿ ಆಗಿರುವಂತಹ ಪ್ರಾಜೆಕ್ಟ್ ಉಳ್ಳಾಲ ನಗರದಲ್ಲಿಯೂ ಆಗುತ್ತಿದೆ. ಹಳೇ ಅಂಗಡಿ, ಮುಲ್ಕಿ ಆ ಭಾಗದಲ್ಲಿಯೂ ಇದೇ ರೀತಿಯಾದರೆ ಹೇಗೆ? ಸುರತ್ಕಲ್ ನಗರ ಒಂದು ಪ್ರಾಮುಖ್ಯತೆಯಿರುವ ಒಂದು ಪ್ರವಾಸಿ ತಾಣ. ಅಲ್ಲಿ ಒಂದು ಕಡಲ ಕಿನಾರೆಯಲ್ಲಿ ಬಂಡೆಯ ಮೇಲೆ ಸದಾಶಿವ ದೇವಸ್ಥಾನ ಇದೆ. ಬಹಳಷ್ಟು ಪ್ರವಾಸಿಗರು ಬರುತ್ತಾರೆ. ಅಲ್ಲಿ ಎನ್.ಐ.ಟಿ.ಕೆ., ಕಾಲೇಜು ಇದೆ. ಆ ಸ್ಥಳದಲ್ಲಿ ಬರುವ ದುರ್ನಾತದಿಂದ ಎಲ್ಲರೂ ವಲಸೆ ಹೋಗುತ್ತಿದ್ದಾರೆ. ತಮಗೆ ಮೊನ್ನೆಯ ದಿವಸ ಇದರ ಫೋಟೋ ಕೂಡ ಕೊಟ್ಟಿದ್ದೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಮಾನ್ಯ ಸಚಿವರು ಮುಂದಿನ ಗುರುವಾರ ಮಧ್ಯಾಹ್ನ 12 ಗಂಟೆಗೆ ಮಂಗಳೂರು ಭಾಗದ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಒಂದು ಸಭೆಯನ್ನು ಕರೆಯುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ನನ್ನ ಒಂದು ಸಣ್ಣ ಪ್ರಶ್ನೆ ಏನೆಂದರೆ, ಟೂರಿಸಂನಿಂದ ಬಹಳ ಪರಿಣಾಮ ಬೀರುತ್ತಿದೆ. ಏಕೆಂದರೆ, ಗೋವಾ ಒಂದು ಸಣ್ಣ ರಾಜ್ಯವಾಗಿದ್ದು, ಅಲ್ಲಿ ಟೂರಿಸಂನಿಂದ ಬಜೆಟ್‌ನ ಶೇಕಡ 42 ರಷ್ಟು ಆದಾಯ ಬರುತ್ತದೆ. ನಮ್ಮ ಕರ್ನಾಟಕ ಇಷ್ಟು ದೊಡ್ಡ ರಾಜ್ಯವಾಗಿದ್ದರೂ ಕೂಡ, ಇಷ್ಟು ಪ್ರವಾಸಿ ತಾಣಗಳು ಇದ್ದರೂ ನಮ್ಮ ಬಜೆಟ್‌ನ ಶೇಕಡ 2 ರಷ್ಟು ಆದಾಯ ಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಕಲುಷಿತ, environment issue ಮತ್ತು ಮಾನ್ಯ ಸಚಿವರಲ್ಲಿ ಇನ್ನೊಂದು ವಿನಂತಿಯೇನೆಂದರೆ, ಈ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮಾಡುವಾಗ, ಸುರತ್ಕಲ್‌ನಲ್ಲಿ revamp ಮಾಡುವಾಗ, ತಾವು Environmental Impact Study ಮತ್ತು Coastal Zone Management Authority ಅದರ ಅನುಮತಿ ಮತ್ತು public hearing ಮಾಡಿ, ಇಂತಹ ಯೋಜನೆಗೆ ಕೈಹಾಕಬೇಕು. ಏಕೆಂದರೆ, it will be unnecessary waste of money. ಇದೆಲ್ಲಾ ಒಂದು ರೀತಿಯಲ್ಲಿ ಕೊಳ್ಳೆ ಒಡೆಯುವಂತಹ ರೀತಿಯಾಗುತ್ತದೆ. ಮಾನ್ಯ ಸಚಿವರಲ್ಲಿ ಮತ್ತೊಂದು ವಿನಂತಿಯೇನೆಂದರೆ, ಮಾನ್ಯ ಸಚಿವರು ಗುರುವಾರ 12 ಗಂಟೆಗೆ ಒಂದು ಸಭೆಯನ್ನು ಕರೆದಿದ್ದಾರೆಯಲ್ಲವೇ, ಆ ಸಭೆಯಲ್ಲಿ ಹಲವಾರು ಇಲಾಖೆಗಳು ಬರುತ್ತದೆ. ಮುಖ್ಯವಾಗಿ Industries Minister, Home Minister ಮತ್ತು Urban Development Minister ರವರ role ಬರುತ್ತಿದೆ. ಹಾಗೆಯೇ ಯುಜಿಡಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟ ನಗರಾಭಿವೃದ್ಧಿ ಇಲಾಖೆಯವರ ಪಾತ್ರ ಬರುತ್ತಿದೆ. ಹಾಗೆಯೇ ಪರಿಸರಕ್ಕೆ ಸಂಬಂಧಪಟ್ಟ ಇಲಾಖೆಯವರ ಪಾತ್ರ ಬರುತ್ತಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಚಿವರೇ ಒಂದು ನಿಮಿಷ. ಇದರಲ್ಲಿ ರಾಜಕೀಯವನ್ನು ಬೆರೆಸದೇ, ಇದು ಪಕ್ಷಾತೀತವಾಗಿ ನಡೆಯಲಿ. ಇಲ್ಲಿ ಎಲ್ಲಾ ಖಾತೆಗಳು ಇರುವುದರಿಂದ, ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಈ ಸಭೆಯನ್ನು ಮಾಡಿ, ಏನೇನು ಪರಿಹಾರವನ್ನು ಕೊಡಬೇಕೆಂದು ಚರ್ಚೆ ಮಾಡೋಣ. ಇದು ಒಂದೊಂದು ಪಕ್ಷಾತೀತವಾಗಿ ಇರಲಿ. ನಾವೆಲ್ಲರೂ ಸೇರಿ ಕರಾವಳಿ ಭಾಗವನ್ನು ಉಳಿಸೋಣ. ದಯವಿಟ್ಟು ತಮ್ಮ ಅಧ್ಯಕ್ಷತೆಯಲ್ಲಿ ಇದನ್ನು ಮಾಡಬೇಕೆಂದು ಹೇಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಮಂಗಳೂರು ನಗರ ವ್ಯಾಪ್ತಿಯಲ್ಲಿ ಇರುವಂತಹ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಒಂದು ಸಭೆಯನ್ನು ಕರೆಯಬೇಕೆಂದು ಸೂಚನೆ ಕೊಟ್ಟಿರುವುದಕ್ಕೆ ನಾನು ಗುರುವಾರ 12.30 ಗಂಟೆಗೆ ಸಭೆಯನ್ನು ನಿಗದಿ ಮಾಡಿದ್ದೇನೆ. ಸುರತ್ಕಲ್ ನಗರದಲ್ಲಿ ಮಳೆಯ ನೀರು ರಸ್ತೆಯಲ್ಲಿ ಹರಿದುಹೋಗುತ್ತಿದೆ ಎನ್ನುವ ಮಾತನ್ನು ಎಲ್ಲಾ ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಇವತ್ತು ಆ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದೇವೆ. ಕಾಮಗಾರಿಯನ್ನು ಕೈಗೆತ್ತಿಕೊಂಡು ಸುಮಾರು . .

**ಸಭಾಪತಿಯವರು:-** ಮಾನ್ಯ ಸದಸ್ಯರು ಬೇರೆ ಬೇರೆ ಸಚಿವರನ್ನು ಕರೆಯಬೇಕೆಂದು ಹೇಳುತ್ತಿದ್ದಾರೆಯಲ್ಲವೇ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಸಚಿವರನ್ನು ಕರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾನೇನು ಮುಖ್ಯಮಂತ್ರಿ ಅಲ್ಲ. ನಾನು ಒಬ್ಬ ಸಚಿವ. ನನ್ನ ಇಲಾಖೆಯ ವ್ಯಾಪ್ತಿಗೆ ಒಳಪಡುವಂತಹ ಕಾಮಗಾರಿಗಳ ಬಗ್ಗೆ . . .

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾಪತಿಯವರ ಪೀಠದ ಮುಖಾಂತರ ಈ ಸಭೆಯಾಗಲಿ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಬಿ.ಎಂ.ಫಾರುಖ್‌ರವರೇ, ಒಂದು ನಿಮಿಷ. ಮಾನ್ಯ ಸಚಿವರು ಹೇಳಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜನರಿಗೆ ತೊಂದರೆಯಾಗಿರುವಂತಹ ಕೆಲಸಗಳನ್ನು ಮಾಡುವುದಕ್ಕೆ ನಾನು ಬದ್ಧನಾಗಿದ್ದೇನೆ ಮತ್ತು ಈ ರೀತಿ ನಮಗೆ ಸಮಸ್ಯೆಯಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವಂತಹದ್ದು, ಅಲ್ಲಿನ ನಾಗರಿಕರಿಗೆ ಸರ್ಕಾರದಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ. ಮಾನ್ಯ ಸದಸ್ಯರು ಸುರತ್ಕಲ್ ನಗರದ ಬಗ್ಗೆ ಏನು ಹೇಳಿದ್ದಾರೆ. ಈಗಾಗಲೇ ಅಲ್ಲಿನ ಕಾಮಗಾರಿಗೆ ಚಾಲನೆಯನ್ನು ಕೊಟ್ಟಿದ್ದೇವೆ. ಒಟ್ಟು ಸುಮಾರು 29.17 ಕಿ.ಮೀವರೆಗೆ ಪೈಪ್‌ಲೈನ್ ಅಳವಡಿಸಬೇಕಾಗಿತ್ತು. ಅದರಲ್ಲಿ ಈಗಾಗಲೇ ಸುಮಾರು 20.79 ಕಿ.ಮೀವರೆಗೆ ಪೈಪ್‌ಲೈನ್ ಅಳವಡಿಸಿರುವುದನ್ನು ಮುಗಿಸುತ್ತೇವೆ. 1492 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್‌ಹೋಲ್‌ಗಳನ್ನು ನಿರ್ಮಾಣ ಮಾಡಬೇಕಾಗಿತ್ತು. ಅದರಲ್ಲಿ 1245 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್‌ಹೋಲ್‌ಗಳ ನಿರ್ಮಾಣ ಕಾಮಗಾರಿಯನ್ನು ಮುಗಿಸಿದ್ದೇವೆ. ಡಿಸೆಂಬರ್ ಅಂತ್ಯದೊಳಗೆ ಈ ಕಾಮಗಾರಿಗಳನ್ನು ಸಂಪೂರ್ಣವಾಗಿ ಮುಗಿಸುವಂತಹ ಮಾತನ್ನು ಹೇಳಿದ್ದೇನೆ. ಸದನದಲ್ಲಿ ಉತ್ತರ ಕೊಡುವಂತಹ ಸಂದರ್ಭದಲ್ಲಿಯೂ ಕೂಡ ಹೇಳಿದ್ದೇನೆ. ನಾನು ನನ್ನ ಇಲಾಖೆಯ ಎಲ್ಲಾ ಅಧಿಕಾರಿಗಳ ಜೊತೆ ಸುರತ್ಕಲ್ ಮತ್ತು ಉಲ್ಲಾಳ ಎರಡು ನಗರಗಳಿಗೂ ಭೇಟಿ ಕೊಡುತ್ತೇನೆ. ಮಾನ್ಯ ಸದಸ್ಯರು ಸಾರ್ವಜನಿಕವಾಗಿ ತೊಂದರೆಯಾಗುತ್ತಿರುವ ಬಗ್ಗೆ ಹೇಳಿದ್ದಾರೆ. ನಾನು ಎರಡು ಜಾಗಗಳಿಗೂ ಭೇಟಿಕೊಟ್ಟು ಅಲ್ಲಿರುವಂತಹ ಸಮಸ್ಯೆಯನ್ನು ಬಗೆಹರಿಸುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳಬಯಸುತ್ತೇನೆ.

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕರಾವಳಿ beach ಗಳು ಇವೆ. ಇದು ಯು.ಜಿ.ಡಿ., ಸಮಸ್ಯೆ. ಏಕೆಂದರೆ, unscientific way ನಲ್ಲಿ ಮಾಡಿ ಈ ರೀತಿಯಾಗಿದೆ ಎಂದು ತಾವು ಒಪ್ಪಿಕೊಳ್ಳುತ್ತೀರಾ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಈ ಕಾಮಗಾರಿ 2006ನೇ ಸಾಲಿನಲ್ಲಿ ಆಗಿರುವಂತಹದ್ದು. ಈ ಸಂದರ್ಭದಲ್ಲಿ ನಾವು ಅತ್ಯಾಧುನಿಕ ವ್ಯವಸ್ಥೆಗಳನ್ನು ಕಲ್ಪಿಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ, ಈ ಕಾಮಗಾರಿಗೆ ಒಬ್ಬನೇ ಗುತ್ತಿಗೆದಾರರು. ಅವನು ಹೈದರಾಬಾದ್‌ನವನು. ಅವನನ್ನು ಹುಡುಕುವುದಕ್ಕೆ ಸಾಧ್ಯವೇ ಇಲ್ಲ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಈ ರೀತಿಯೆಲ್ಲಾ ಹೇಳಬೇಡಿ.

**(ಗೊಂದಲ)**

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಬಿ.ಎಂ.ಫಾರುಖ್‌ರವರೇ ಒಂದು ನಿಮಿಷ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು 3 ಜನ ಎಂದು ಹೇಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷ. ಇದರ ಬಗ್ಗೆ ಹೇಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನೇನು ಹೇಳುತ್ತಿದ್ದೇನೆಂದರೆ, ಇವತ್ತು ಆಧುನಿಕ ಯುಗದಲ್ಲಿ ನಾವು ತಂತ್ರಜ್ಞಾನವನ್ನು ಉತ್ತಮಪಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಎಲ್ಲಿಯೂ ಕೂಡ ಈ ರೀತಿಯ ಸಮಸ್ಯೆಯಾಗಬಾರದೆನ್ನುವ ದೃಷ್ಟಿಯಿಂದ ಅನೇಕ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಹಾಗಾಗಿ ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ನಿಜವಾಗಿಯೂ ನಾನು ಒಬ್ಬ ಮಹಾನಗರ ಪಾಲಿಕೆಯ ಸದಸ್ಯನಾಗಿ ಎಲ್ಲೋ ಒಂದು ಕಡೆ ನೋವಿನ ಸಂಗತಿಯಾಗಿದೆ. ಆದರೆ, ಈ ರೀತಿ ಆಗಬಾರದಿತ್ತು. ಮುಂದಿನ ದಿನಗಳಲ್ಲಿ ಈ ರೀತಿಯಾಗದೇ ಇರುವ ಹಾಗೆ ಸರ್ಕಾರ ಎಚ್ಚರಿಕೆಯಿಂದ ಕ್ರಮ ವಹಿಸುತ್ತದೆ.

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಿ.ಎಂ.ಫಾರುಖ್‌ರವರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ.

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ತಮ್ಮ ಹತ್ತಿರ ಒಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಬಿ.ಎಂ.ಫಾರುಖ್‌ರವರೇ, ನಾನು ಹೇಳುವುದನ್ನು ತಾವು ಕೇಳುವುದೇ ಇಲ್ಲ. ಈಗ ಅವರು ಅವರ ಇಲಾಖೆಯನ್ನು ಭದ್ರತೆಯಿಂದ ನಡೆಸುವುದು ಅವರ ಜವಬ್ದಾರಿ. ತಾವು ಬೇರೆ ಇಲಾಖೆಯ ಬಗ್ಗೆ ಹೇಳಿದ್ದೀರಲ್ಲವೇ, ನಾನು ತಮ್ಮ ಪ್ರಶ್ನೆಯನ್ನು ನೋಡಿ ಹೇಳುತ್ತಿದ್ದೇನೆ. ಸಾಧ್ಯವಾದರೆ, ಬೇರೆ ಸಚಿವರನ್ನು ಕರೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಚಿವರೇ ಒಂದು ನಿಮಿಷ. ಇದರಲ್ಲಿ ಏನಾಗಿದೆ ಎಂದರೆ, ಇದಕ್ಕೆ comprehensive scheme workout ಮಾಡಬೇಕಾಗುತ್ತದೆ. ಈ ಸಭೆಗೆ ತಜ್ಞರು ಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಬಿ.ಎಂ.ಫಾರುಖ್‌ರವರೇ, ಆ ರೀತಿ ಅಲ್ಲ. ಇದರ ಬಗ್ಗೆ ತಾವು ತಿಳಿದುಕೊಳ್ಳಬೇಕು.

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ಎಲ್ಲಾ ರಾಜಕೀಯ ಪಕ್ಷದವರು, ಎಲ್ಲಾ ಶಾಸಕರು, ಜನಪ್ರತಿನಿಧಿಗಳು ಇರಬೇಕು. ನಾನು ಯು.ಜಿ.ಡಿ., ಬಗ್ಗೆ ಮಾತ್ರ ಹೇಳುತ್ತಿಲ್ಲ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು ನನ್ನ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳು ಏನಿವೆಯೋ, ಅದಕ್ಕೆ ಯಾರು ತಜ್ಞರು ಇದ್ದಾರೆ. ಎಲ್ಲರನ್ನೂ ಕೂಡ ಆ ಸಭೆಗೆ ಬರುವುದಕ್ಕೆ ಹೇಳಿದ್ದೇನೆ. ಮಾನ್ಯ ಸದಸ್ಯರಿಗೂ ಕೂಡ ಆಹ್ವಾನವನ್ನು ನೀಡಿದ್ದೇನೆ. ಗುರುವಾರ ಮಧ್ಯಾಹ್ನ 12.30 ಗಂಟೆಗೆ ಸಭೆಯನ್ನು ಏರ್ಪಡಿಸಲಾಗಿದೆ.

**ಶ್ರೀ ಬಿ.ಎಂ.ಫಾರುಖ್:-** ಮಾನ್ಯ ಸಭಾಪತಿಯವರೇ, ಈ ಕಾಮಗಾರಿಯ ಗುತ್ತಿಗೆದಾರರನ್ನು ಸಹ ಕರೆಯಿಸಿ. ಆ ಗುತ್ತಿಗೆದಾರರು ಸಹ ಬರಬೇಕು. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವಂತಹ ಕಳಪೆ ಕಾಮಗಾರಿ ಇದೆಯಲ್ಲವೇ, ಎಲ್ಲಾ equipment ಕೂಡ damage ಆಗಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಗುತ್ತಿಗೆದಾರರನ್ನು ಸಹ ಸಭೆಗೆ ಕರೆಸುತ್ತೇವೆ.

**ಸಭಾಪತಿಯವರು:-** ಈ ವಿಚಾರಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಸಭೆಗೆ ಕರೆಸಬೇಕೆಂದು ಹೇಳಿದ್ದೇನೆ. ಅವರು ಕೂಡ ಎಲ್ಲರನ್ನೂ ಕರೆಯುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 995**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಪ್ರಸ್ತಾವನೆಯಂತೆ ತಗ್ಗಿನ ಪ್ರದೇಶದಲ್ಲಿ ಸಂಗ್ರಹವಾಗುವ ತ್ಯಾಜ್ಯ ನೀರನ್ನು ಪಂಪ್ ಮಾಡಲು ಅನುಕೂಲವಾಗುವಂತೆ ತೇವಬಾವಿ ನಿರ್ಮಿಸಲು (ವೆಟ್‌ವೆಲ್) ಖಾಸಗಿ ಸ್ಥಳವನ್ನು ಗುರುತಿಸಿ ಮಂಡಳಿಯವರಿಗೆ ಹಸ್ತಾಂತರಿಸಲಾಗಿರುತ್ತದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಎರಡನೆಯದಾಗಿ, ಇದರ ನಿರ್ಮಾಣಕ್ಕೆ ಸಾರ್ವಜನಿಕರ ಆಕ್ಷೇಪವಿದೆಯೇ ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಸಾರ್ವಜನಿಕ ಆಕ್ಷೇಪ ಇದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

(ಮುಂದು)

(844)/21-9-2021/11-30/(ಎಲ್‌ಎಂ)ಎಸ್ ಪಿ ಆರ್/ಆರ್‌ಎನ್

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**(ಮುಂದು):-

ಸಾರ್ವಜನಿಕ ಆಕ್ಷೇಪಣೆಯನ್ನು ಬಹುಮತದಿಂದ ತೀರ್ಮಾನ ಮಾಡುತ್ತೀರಾ? ಇದಕ್ಕೆ ಯಾವ ವಿಧಾನವನ್ನು ಅನುಸರಿಸುತ್ತೀರಿ? ದಾರಿ ಇಲ್ಲದೆ ಇರುವ ನಿವೇಶನವನ್ನು ಗುರುತಿಸಲು ವ್ಯವಸ್ಥಿತವಾಗಿ ಪ್ಲ್ಯಾನ್ ಮಾಡಿದ್ದಾರೆ. ಮಾರಾಟ ಮಾಡಲು ಆಗುವುದಿಲ್ಲ, ತಾವೆ ತೆಗೆದುಕೊಳ್ಳಲು ಅವಕಾಶವಾಗುತ್ತದೆ ಎನ್ನುವ ಉದ್ದೇಶವೇನಾದರೂ ಇದೆಯೇ? ಉತ್ತರದಲ್ಲಿ ಈ ಮೇಲಿನ ನಿವೇಶನಗಳ ನಕ್ಷೆಯನ್ನು ತಾಲ್ಲೂಕು ಸರ್ವೆಯರ್‌ರಿಂದ ತಯಾರಿಸಿದ್ದು, ಸದರಿ ನಕ್ಷೆಯನ್ನು ಲಗತ್ತಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಲಗತ್ತಿಸಿರುವುದಿಲ್ಲ. ಮುಂದುವರೆದು ಸದರಿ ನಿವೇಶನಕ್ಕೆ ಸಂಪರ್ಕ ರಸ್ತೆ ಇದ್ದು, ಭೂಪರಿವರ್ತಿತ ಜಮೀನಿನ ನಕ್ಷೆಯಲ್ಲಿ ಕಾಣಿಸಿರುವಂತೆ ಸ್ಥಳದಲ್ಲಿ ಮಾಮೂಲು ರಸ್ತೆ ಇರುತ್ತದೆ ಎಂದು ಹೇಳದ್ದಾರೆ ಅದಕ್ಕೆ ಯಾವುದೆ ದಾಖಲೆಯನ್ನು ಕೊಟ್ಟಿರುವುದಿಲ್ಲ. ಇವುಗಳ ಬಗ್ಗೆ clarification ಕೊಡಿ.

**ಶ್ರೀ ಬಿ.ಎ.ಬಸವರಾಜ(ಬೈರತಿ)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕುಂದಾಪುರ ಪುರಸಭಾ ವ್ಯಾಪ್ತಿಯ ೮ನೇ ವಾರ್ಡಿನಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಲಾಗುತ್ತಯೇ ಎಂದು ಕೇಳಿದ್ದಾರೆ. ಆದರೆ ಸದ್ಯಕ್ಕೆ ಸರ್ಕಾರದಲ್ಲಿ ಈ ರೀತಿಯ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಇದಕ್ಕಾಗಿ ಜಮೀನಿನನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಲಾಗಿದೆಯೇ ಎಂದು ಕೇಳಿದ್ದಾರೆ. ಸುಮಾರು ೨೬ ಸೆಂಟ್ ಜಮೀನನ್ನು ೯೫,೬೭೬ ರೂ.ಗಳಿಗೆ ಖರೀದಿ ಮಾಡಲಾಗಿದೆ. ಪುರಸಭೆಯವರು ಇದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಇನ್ನು ೫ ಸೆಂಟ್ ಜಮೀನನ್ನು ಖರೀದಿ ಮಾಡಲು ಈಗಾಗಲೇ ಮಾತುಕತೆಯಾಗಿದೆ ಎಂದು ನಮ್ಮ ಅಧಿಕಾರಿಗಳು ಹೇಳಿದ್ದಾರೆ. ಇದರ ಬಗ್ಗೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ೫ wet well ಗಳನ್ನು ಮಾಡಿದ್ದಾರೆ. ಅದರ ನಕ್ಷೆಯನ್ನು ತೋರಿಸುತ್ತೇವೆ. ಮಾನ್ಯ ಸದಸ್ಯರು ೫ನೇ wet well ನಲ್ಲಿ ಹೋಗಲು ದಾರಿ ಇದೆಯೇ ಎಂದು ಕೇಳಿದ್ದಾರೆ. ನಕ್ಷೆ ಪ್ರಕಾರ ಇದೆ. ಮಲಿನ ನೀರನ್ನು ಶುದ್ಧಿಕರಣ ಘಟಕಕ್ಕೆ ತಲುಪಿಸುವಂತಹ ಕೆಲಸವನ್ನು ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಕಾರ್ಯಕ್ರಮವನ್ನು ರೂಪಿಸಿಕೊಂಡು ಕೆಲಸವನ್ನು ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾಪತಿಗಳೆ, ಸರ್ಕಾರ wet well ಮಾಡಿರುವುದು, ಭೂಮಿ ಖರೀದಿ ಮಾಡಿರುವುದು ತಪ್ಪು ಎಂದು ಹೇಳುವುದಿಲ್ಲ. Wet well ಮಾಡಿರುವುದು ಜನವಸತಿ ಇರುವವಂತಹ ಜಾಗದಲ್ಲಿ. ಅಲ್ಲಿ ಸಾರ್ವಜನಿಕರ ಆಕ್ಷೇಪವಿದೆ. ಆ ಆಕ್ಷೇಪವನ್ನು ಬಹುಮತದ ಮೇಲೆ ಪರಿಹಾರ ಮಾಡುತ್ತೀರಾ? ಅಥವಾ ಅದಕ್ಕೆ ಒಂದು ಬೇರೆ ದಾರಿ ಇದೆಯಾ? ಮಂತ್ರಿಗಳು ನಕ್ಷೆಯಲ್ಲಿ ದಾರಿ ಇದೆ ಎಂದು ಹೇಳುತ್ತಿದ್ದಾರೆ. ಮತ್ತು ಭೂ ಖರೀದಿ ಮಾಡಿರುವುದಕ್ಕೆ ನಕ್ಷೆ ಇದೆ ಎಂದು ಹೇಳಿದ್ದಾರೆ. ಅವೆರಡು ನಕ್ಷೆಗಳನ್ನು ಕಳುಹಿಸಿಕೊಂಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಿ.ಎ.ಬಸವರಾಜ(ಬೈರತಿ)**:- ಮಾನ್ಯ ಸಭಾಪತಿಗಳೆ, ನಕ್ಷೆಯನ್ನು ಕಳುಹಿಸಿ ಕೊಡುತ್ತೇನೆ. ಇದಕ್ಕೆ ಸಿಆರ್‌ಝಡ್ (Coastal Regulation Zone) ನಿಂದ ಅನುಮತಿಯನ್ನು ಪಡೆಯಲಾಗಿದೆ. ಎಸ್‌ಟಿಪಿ ಯನ್ನು ನಿರ್ಮಾಣ ಮಾಡಲು ಭೂಮಿಯನ್ನು ಗುರುತಿಸಿ ತಕ್ಷಣ ಕೆಲಸವನ್ನು ಪ್ರಾರಂಭ ಮಾಡಲು ಕ್ರಮವಹಿಸುತ್ತೇವೆ. ಮಾನ್ಯ ಸದಸ್ಯರು ಕೇಳಿರುವ ನಕ್ಷೆ ಮತ್ತು ಇತರ ದಾಖಲಾತಿಗಳನ್ನು ಒದಗಿಸಿಕೊಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಸಾರ್ವಜನಿಕ ಆಕ್ಷೇಪವನ್ನು ಹೇಗೆ ಪರಿಹರಿಸುತ್ತೀರಿ. ಅದರ ಬಗ್ಗೆ clarification ಕೊಡಿ. ಆಕ್ಷೇಪವನ್ನು ನಿವಾರಿಸದೆ ಕಾಮಗಾರಿಯನ್ನು ಕೈಗೊಳ್ಳಲು ಆಗುವುದಿಲ್ಲ.

**ಶ್ರೀ ಬಿ.ಎ.ಬಸವರಾಜ**:- ಮಾನ್ಯ ಸಭಾಪತಿಗಳೆ, ಖಾಸಗಿ ಜಮೀನು ಹೊಂದಿದವರು ಆಕ್ಷೇಪವನ್ನು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ನಿಮ್ಮ ಉತ್ತರದಲ್ಲಿ ಏನಿದೆ ನೋಡಿ.

**ಸಭಾಪತಿಯವರು**:- ಮಾನ್ಯ ಸದಸ್ಯರ ಸಲಹೆಯನ್ನು ಪಡೆದುಕೊಂಡು ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಏನು ಮಾಡಬೇಕೆಂದು ಹೇಳುತ್ತಾರೆ ಅದನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## <u>ಪ್ರಶ್ನೆ ಸಂಖ್ಯೆ: 1000</u>
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪ್ರಕಾಶ್ ಕೆ ರಾಥೋಡ್**:- ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ. ಹೊಳಲ್ಕೆರೆ ಪುರಸಭೆಯನ್ನು ಮೇಲ್ದರ್ಜೆಗೇರಿಸಿ ಪಟ್ಟಣ ಪಂಚಾಯಿತಿ ಮಾಡಲಾಗಿದೆಯೇ ಎನ್ನುವ ಪ್ರಶ್ನೆಗೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಯಾವ ಪುರಸಭೆಗಳನ್ನು ಮೇಲ್ದರ್ಜೆಗೇರಿಸಿ ಪಟ್ಟಣ ಪಂಚಾಯಿಗಳಾಗಿ ಮಾಡಲಾಗಿದೆ ಎನ್ನುವ ವಿವರವನ್ನು ಕೊಟ್ಟಿದ್ದಾರೆ. ಇಲ್ಲಿ ವಿಪರ್ಯಾಸ ಎಂದರೆ, ದಿನಾಂಕ: ೩೦-೧೨-೨೦೨೧ರಂದು ಗ್ರಾಮ ಪಂಚಾಯಿತಿ ಸದಸ್ಯರು ಚುನಾಯಿತರಾಗಿದ್ದಾರೆ. ೩೧ನೇ ತಾರೀಖಿಗೆ ಮೇಲ್ದರ್ಜೆಗೇರಿಸಿ ಪಟ್ಟಣ ಪಂಚಾಯಿತಿ ಮಾಡಲಾಗಿದೆ ಎಂದು ಅಧಿಸೂಚನೆಯನ್ನು ಹೊರಡಿಸುತ್ತಾರೆ. ನಾನು ದಿನಾಂಕ: ೨೦-೨-೨೦೨೧ರಂದು ಈ ವಿಚಾರವಾಗಿ ಒಂದು ಪ್ರಶ್ನೆಯನ್ನು ಕೇಳಿದೆ, ಆಗ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸ ಪಟ್ಟಣ ಪಂಚಾಯಿತಿ ಮಾಡುವ ಯಾವುದೆ ಪ್ರಸ್ತಾವನೆ ಇಲ್ಲ ಎಂದು ಹೇಳುತ್ತಾರೆ. ಆದರೆ ೩೧ನೇ ತಾರೀಖಿಗೆ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅಲ್ಲಿ ಲಂಬಾಣಿ ತಾಂಡಾಗಳು ೫ ಕಿ.ಮೀ ದೂರದಲ್ಲಿದ್ದರೂ ಅದನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಿದ್ದಾರೆ. ವಿಶೇಷವಾಗಿ ಲಂಬಾಣಿ ಜನರು ಗುಳೆ ಹೋಗುವುದನ್ನು ತಡೆಯಲು ಅವರಿಗೆ ನರೇಗಾ ಯೋಜನೆಯಲ್ಲಿ ಕೆಲಸವನ್ನು ಕೊಟ್ಟು ಅವರು ಕೂಲಿಯನ್ನು ಪಡೆಯಲು ಅನುಕೂಲವಾಗಲಿ ಎಂದು ಅಲ್ಲಿಯ ಗ್ರಾಮ ಪಂಚಾಯಿತಿಯ ಸದಸ್ಯರು ಪಟ್ಟಣ ಪಂಚಾಯಿತಿ ಮಾಡದಂತೆ ಆಕ್ಷೇಪಣೆಯನ್ನು ಕೊಟ್ಟಿದ್ದಾರೆ. ಆಕ್ಷೇಪಣೆ ಬಂದಿವೆ ಎಂದು ಸರ್ಕಾರವು ಒಪ್ಪುತ್ತದೆ. ದಿನಾಂಕ: ೨೩-೩-೨೦೨೧ರಂದು ಮೇಲ್ದರ್ಜೆಗೇರಿಸಲಾಗಿದೆ ಎಂದು ನನಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಹೊಳಲ್ಕೆರೆ ಒಂದೇ ಅಲ್ಲ, ಬಾಗಲಕೋಟೆ ಜಿಲ್ಲೆಯ ಶಿರೂರು ಮತ್ತು ನೀಲಾನಗರಗಳಲ್ಲಿ ತಾಂಡಗಳು ಇವೆ. ಅದನ್ನು ಮೇಲ್ದರ್ಜೆಗೇರಿಸಿದ್ದಾರೆ. ಅಲ್ಲಿ ಎಲ್ಲ ಲಂಬಾಣಿ ಜನರು ಆಕ್ಷೇಪಣೆಯನ್ನು ಸಲ್ಲಿಸಿದರು ಸಹ ಅದನ್ನು ಮೇಲ್ದರ್ಜೆಗೇರಿಸಿದ್ದಾರೆ. ಸರ್ಕಾರ ಇದರ ಕಡೆಗೆ ಗಮನ ಹರಿಸಬೇಕು. ಲಂಬಾಣಿ ಜನರು ಕೂಲಿ ಕೆಲಸಕ್ಕಾಗಿ ಗುಳೆ ಹೋಗುತ್ತಿದ್ದಾರೆ. ಅವರನ್ನು ತಡೆಯಬೇಕು ಎಂದು ನರೇಗಾ ಯೋಜನೆಯಲ್ಲಿ ಅವರಿಗೆ ವಸತಿಯನ್ನು ಮತ್ತು ಕೆಲಸವನ್ನು ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಈ ರೀತಿ ಪಟ್ಟಣ ಪಂಚಾಯಿತಿ ಮಾಡಿದರೆ ಅವರಿಗೆ ಯಾವ ಸೌಲಭ್ಯಗಳು ಸಿಗುವುದಿಲ್ಲ. ಅಲ್ಲದೆ ಸರ್ಕಾರಿ ನೌಕರಿ ಹಿಡಿಯುವ ಸಮಯದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದರೆ ಅವರಿಗೆ ಹೆಚ್ಚಿನ ಅಂಕಗಳು ಸಿಗುತ್ತವೆ. ಅದರಿಂದಲೂ ಅವರನ್ನು ವಂಚಿತರನ್ನಾಗಿ ಮಾಡಲಾಗುತ್ತಿದೆ. ಇದೆಲ್ಲವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉದ್ದೇಶಪೂರ್ವಕವಾಗಿ ಮಾಡಲಾಗುತ್ತಿದೆ. ಇನ್ನೊಂದು ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ, ಹೊಳಲ್ಕೆರೆ ಪಟ್ಟಣ ಪಂಚಾಯಿತಿಯಿಂದ ಅರ್ಧ ಕಿ.ಮೀ. ದೂರದಲ್ಲಿರುವಂತಹ ಗುಂಡಗೇರಿ, ಕಾವಲುಹಟ್ಟಿ, ಭೂಮಿಹಟ್ಟಿಗಳನ್ನು ಬಿಟ್ಟಿದ್ದಾರೆ. ಆದರೆ ೫ ಕಿ.ಮೀ.ದೂರದಲ್ಲಿರುವ ಲಂಬಾಣಿ ತಾಂಡವನ್ನು ಪಟ್ಟಣ ಪಂಚಾಯಿತಿಗೆ ಸೇರಿಸಿದ್ದಾರೆ. ನೀರಾನಗರ ಮತ್ತು ಶಿರೂರುಗಳನ್ನು ಪಟ್ಟಣ ಪಂಚಾಯಿತಿಗೆ ಸೇರಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯವರೆ ಆದ ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಇಲ್ಲೇ ಇದ್ದಾರೆ. ಅವರಿಗೆ ಇದರ ಬಗ್ಗೆ ಗೊತ್ತಿದೆ. ದಯಮಾಡಿ ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕೆಂದು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಬಾಗಲಕೋಟೆ ಜಿಲ್ಲೆಯ ಶಿರೂರು ದೊಡ್ಡದಾದ ಗ್ರಾಮವಾಗಿದೆ. ಮಾನ್ಯ ಸಭಾಪತಿಗಳು ಅಲ್ಲಿಗೆ ಬಂದು ಹೋಗಿದ್ದಾರೆ. ಶಿರೂರುನಿಂದ ೬ ಕಿ.ಮೀ. ದೂರದಲ್ಲಿ ತಾಂಡಾ ಇದೆ. ಅದಕ್ಕೆ ಈಗ ನೀರಾನಗರ ತಾಂಡಾ ಎಂದು ಹೇಳುತ್ತಾರೆ. ಆ ನೀರಾನಗರವನ್ನು ಕೂಡಿಸಿಕೊಂಡು ಪಟ್ಟಣ ಪಂಚಾಯಿತಿಯನ್ನು ಮಾಡಿದ್ದಾರೆ. ಈವತ್ತು ಶಿರೂರು ಗ್ರಾಮದ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಶಿರೂರು ಗ್ರಾಮವೇ ಸ್ವತಂತ್ರವಾಗಿ ಪಟ್ಟಣ ಪಂಚಾಯಿತಿಯಾಗಿ ಮಾಡಬಹುದಾಗಿದೆ. ೨೦೧೦-೧೧ನೇ ಸಾಲಿನಲ್ಲಿ ಮಾಡಿರುವ ಜನಗಣತಿಯನ್ನು ಇವರು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ, ಆದರೆ ಇವತ್ತಿನ ಜನಸಂಖ್ಯೆಯನ್ನು ನೋಡಿದರೆ ಶಿರೂರು ಗ್ರಾಮವನ್ನೆ ಪಟ್ಟಣ ಪಂಚಾಯಿತಿ ಮಾಡಬಹುದಾಗಿದೆ. ನಾವು ನೀರಾನಗರಕ್ಕೆ ಹೋದಾಗ ಅಲ್ಲಿಯ ಎಲ್ಲ ಜನರು ಸೇರಿ ನಮಗೆ ಪಟ್ಟಣ ಪಂಚಾಯಿತಿ ಮಾಡುವುದು ಬೇಡ ಎಂದು ಹೇಳಿದ್ದಾರೆ. ಇದನ್ನು ಪಟ್ಟಣ ಪಂಚಾಯಿತಿಯಾಗಿ ಮಾಡಿದರೆ ನರೇಗಾ ( ರಾಷ್ಟ್ರೀಯ ಮಹಾತ್ಮಾಗಾಂಧಿ ಉದ್ಯೋಗ ಯೋಜನೆ) ಯಿಂದ ನಾವು ವಂಚಿತರಾಗುತ್ತೇವೆ. ನಾವೆಲ್ಲರೂ ಗುಳೆ ಹೋಗುವಂತಹ ಪರಿಸ್ಥಿತಿ ಬರುತ್ತದೆ ಎಂದು ಹೇಳಿದ್ದಾರೆ. ಅಲ್ಲಿಯವರ ಮಕ್ಕಳ ಸರ್ಕಾರಿ ನೌಕರಿಯನ್ನು ಪಡೆಯುವ ಸಂದರ್ಭದಲ್ಲಿ ಗ್ರಾಮೀಣ ಅಬ್ಯರ್ಥಿ ಅಂಕಗಳು ಸಿಗುತ್ತವೆ. ಪಟ್ಟಣ ಪಂಚಾಯಿತಿಯಾದರೆ ಅದರಿಂದ ವಂಚಿತರಾಗುತ್ತಾರೆ. ಆ ನೀಲಾನಗರದಲ್ಲಿ ಎಸ್.ಸಿ ಜನರು ಹೆಚ್ಚು ಇದ್ದಾರೆ. ಎಲ್ಲರೂ Below Poverty Line ನಲ್ಲಿದ್ದವರು. ಅವರಿಗೆ ಉದ್ಯೋಗ ಸಿಗುತ್ತದೆ, ಗ್ರಾಮ ಪಂಚಾಯಿತಿಯು ಮುಂದುವರೆಯುತ್ತದೆ, ಅವರಿಗೆ ಎಲ್ಲ ಸೌಲಭ್ಯಗಳು ಸಿಗುತ್ತವೆ. ಅವರು ಎಲ್ಲ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಹೀಗಾಗಿ ನೀಲಾನಗರ ಗ್ರಾಮ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿಯಾಗಿಯೇ ಉಳಿಯಬೇಕು. ಅದನ್ನು ಪಟ್ಟಣ ಪಂಚಾಯಿತಿಗೆ ಸೇರಿಸಬಾರದು ಎನ್ನುವುದು ನಮ್ಮ ಆಗ್ರಹ.

**ಶ್ರೀ ಎನ್.ನಾಗರಾಜು ಎಂ.ಟಿ.ಬಿ**:- ಮಾನ್ಯ ಸಭಾಪತಿಗಳೆ, ಹೊಳಲ್ಕೆರೆಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬಾರದು ಎಂದು ಗ್ರಾಮದವರು ವಿರೋಧ ಮಾಡಿದ್ದಾರೆ. ಸದರಿ ಗ್ರಾಮದವರ ಆಕ್ಷೇಪಣೆ ಮತ್ತು ಜಿಲ್ಲಾಧಿಕಾರಿಗಳ ವರದಿಯನ್ನು ಪರಿಶೀಲಿಸಿ ಆ ಸಮಸ್ಯೆಯನ್ನು ಇತ್ಯರ್ಥಗೊಳಿಸಿ ದಿನಾಂಕ: ೨೩-೩-೨೦೨೧ರಂದು ಅದನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲಾಗಿದೆ.

(ಮುಂದು)

(845) 11.40 21-09-2021 CS/ RN

**ಶ್ರೀ ಎನ್.ನಾಗರಾಜು ಎಂ.ಟಿ.ಬಿ (ಮುಂದು) :--**

ಮಾನ್ಯ ಸದಸ್ಯರು ಕೇಳುತ್ತಿರುವ 5 ಗ್ರಾಮಗಳು 0 ಕಿ.ಮೀ ನಿಂದ 2.5 ಕಿ.ಮೀ ವಿಸ್ತೀರ್ಣದಲ್ಲಿದ್ದು, ಹೊಳಲ್ಕೆರೆ ಗ್ರಾಮ ಪಂಚಾಯಿತಿ, ಗುಂಡೇರಿ ಗ್ರಾಮ ಪಂಚಾಯಿತಿ, ಶಿವಗಂಗ ಗ್ರಾಮ ಪಂಚಾಯಿತಿ, ಮದ್ದೇರು ಗ್ರಾಮ ಪಂಚಾಯಿತಿ, ಅರೇಹಳ್ಳಿ ಗ್ರಾಮ ಪಂಚಾಯಿತಿ, ಆಡನೂರು ಗಾಮಪಂಚಾಯಿತಿ ಈ ೫ ಗ್ರಾಮ ಪಂಚಾಯಿತಿಗಳನ್ನು ಜನಸಂಖ್ಯಾಗೆ ಮತ್ತು ವಿಸ್ತೀರ್ಣಕ್ಕೆ ಅನುಗುಣವಾಗಿ ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಮಾನ್ಯ ಸದಸ್ಯರು ಇನ್ನೂ ಹತ್ತಿರದಲ್ಲಿರುವ ಗ್ರಾಮಗಳು ಬಿಟ್ಟು ಹೋಗಿವೆ, ಎಂದು ತಿಳಿಸಿದ್ದಾರೆ. ಅದಕ್ಕಾಗಿ ಗ್ರಾಮದವರು ಕೂಡ ವಿರೋಧವನ್ನು ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಗ್ರಾಮಸ್ಥರ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಧಿಕಾರಿಗಳು ನೀಡಿದ ವರದಿಯನ್ನು ಪರಿಶೀಲಿಸಿ, ಅಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿ, ಈ ಆದೇಶವನ್ನು ಮಾಡಿಲಾಗಿದೆ.

**ಶ್ರೀ ಪ್ರಕಾಶ್ ಕೆ ರಾಥೋಡ್:-** ಮಾನ್ಯ ಸಭಾಪತಿಗಳೇ, 0 ಕಿ.ಮೀ ನಿಂದ 2.5 ಕಿ.ಮೀ ವಿಸ್ತೀರ್ಣದಲ್ಲಿರುವ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಗಳೆಂದು ಮೇಲ್ದರ್ಜೆಗೇರಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಮದ್ದೇರು ಗ್ರಾಮ ಪಂಚಾಯಿತಿ 5 ಕಿ.ಮೀ ವ್ಯಾಪ್ತಿಯಲ್ಲಿದೆ, ಅರೇಹಳ್ಳಿ ಗ್ರಾಮ ಪಂಚಾಯಿತಿ 5 ಕಿ.ಮೀ ವ್ಯಾಪ್ತಿಯಲ್ಲಿದೆ. ಮತ್ತು ಆಡನೂರು ಗ್ರಾಮ ಪಂಚಾಯಿತಿ 2.5 ಕಿ.ಮೀ ವಿಸ್ತೀರ್ಣದಲ್ಲಿದೆ. ೫ ಕಿ.ಮೀ ವಿಸ್ತೀರ್ಣದಲ್ಲಿರುವ 2 ಗ್ರಾಮಗಳನ್ನು ಮೇಲ್ದರ್ಜೆಗೇರಿಸಿದ್ದಾರೆ. ಆದರೆ ಅರ್ಧ ಕಿ.ಮೀ ಇರುವ

ಗ್ರಾಮ ಪಂಚಾಯಿತಿಯನ್ನು ಮಾಡಿರುವುದಿಲ್ಲ. ದಯಮಾಡಿ ಸರ್ಕಾರ ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕು. ಈ ಗ್ರಾಮಗಳನ್ನು ಮೇಲ್ದರ್ಜೆಗೇರಿಸುವುದರಿಂದ ಲಂಬಾಣಿ ಜನಾಂಗಕ್ಕೆ ಅನ್ಯಾಯವಾಗಿದೆ. ಅಲ್ಲಿನ ಜನರಿಗೆ ಬಹಳ ತೊಂದರೆಯಾಗಿದ್ದು, ಅವರೆಲ್ಲರೂ ಈಗಾಗಲೇ ಇದರ ವಿರುದ್ಧ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ. ಈ ಆದೇಶವನ್ನು ಹಿಂದಕ್ಕೆ ಪಡೆಯದಿದ್ದರೆ ನಾನು ಕೂಡ ಇಲ್ಲಿ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸದ್ಯ ನನಗೆ ಮಾನ್ಯ ಸಚಿವರು ಈ ಆದೇಶವನ್ನು ಹಿಂದಕ್ಕೆ ಪಡೆಯುತ್ತೇನೆಂದು ಆಶ್ವಾಸನೆಯನ್ನು ನೀಡಬೇಕು.

**ಶ್ರೀ ಎಸ್. ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಶಿರೂರು ಪಟ್ಟಣ ಪಂಚಾಯಿತಿಯಲ್ಲಿ ನೀಲ ನಗರವನ್ನು ಪುರಸಭೆಯಿಂದ ಹೊರಗಿಡಬೇಕೆಂದು ಕೇಳಿದೆ. ೬ ಕಿ.ಮೀ ದೂರ ಇರುವ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮಾಡಿದರೆ ಅವರೆಲ್ಲರೂ ನರೇಗ ಯೋಜನೆಯಿಂದ ವಂಚಿತರಾಗುತ್ತಾರೆ. ಮಕ್ಕಳು ಗ್ರಾಮೀಣ ಕೃಪಾಂಕ ಪಡೆಯುವುದರಿಂದ ವಂಚಿತರಾಗುತ್ತಾರೆ. ಹತ್ತಿರ ಇದ್ದಲ್ಲಿ ಸದರಿ ಗ್ರಾಮವನ್ನು ಸೇರಿಸಿಕೊಳ್ಳಬೇಕಿತ್ತು, ಆದರೆ 6 ಕಿ.ಮೀ ದೂರ ಇರುವ ಲಂಬಾಣಿ ಜನಾಂಗದವರು, ಇರುವ, ಆ ಪ್ರದೇಶವನ್ನು ಪಟ್ಟಣ ಪಂಚಾಯಿತಿ ಮಾಡುವುದರಿಂದ ಅವರಿಗೆ ಅನ್ಯಾಯ ಮಾಡಿದಂತಾಗುವುದಲ್ಲವೇ?

**ಸಭಾಪತಿಯವರು:-** ನನಗೂ ಸಹ ಮುಖ್ಯ ಸ್ಥಳದಿಂದ 6 ಕಿ.ಮೀ ದೂರದಲ್ಲಿರುವ ಶಿರೂರು ಗ್ರಾಮ ಪಂಚಾಯಿತಿಯ ಬಗ್ಗೆ ಗೊತ್ತಿದೆ. ಅದನ್ನು ಪುರಸಭೆಗೆ ಸೇರಿಸಿ, ಅಲ್ಲಿನ ಜನರಿಗೆ ಸಿಗುವ ಸವಲತ್ತುಗಳನ್ನು ಹಾಳ ಮಾಡಬಾರದೆನ್ನುವುದು ಎಲ್ಲರ ಕಾಳಜಿ. ಇದರ ಬಗ್ಗೆ ಉತ್ತರ ಕೊಡಿ. ನಿಯಮದ ಪ್ರಕಾರ ಏನಿದೆ ಅದನ್ನು ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಶಿರೂರಿನಲ್ಲಿರುವ ನೀಲನಗರವನ್ನು ಹೊರತುಪಡಿಸಿ, ಉಳಿದ ಗ್ರಾಮಗಳನ್ನು ಪಟ್ಟಣ ಪಂಚಾಯಿತಿ ಆದರೂ ಮಾಡಿ, ಮಹಾನಗರ ಪಾಲಿಕೆಯನ್ನಾದರೂ ಮಾಡಿ ನಮಗೇನು ಅಭ್ಯಂತರವಿಲ್ಲ.

**ಶ್ರೀ ಪ್ರಕಾಶ್ ಕೆ ರಾಥೋಡ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಹೊಳಲ್ಕೆರೆ ಮತ್ತು ಶಿರೂರು ಗ್ರಾಮ ಪಂಚಾಯಿತಿಯವರು ತಮ್ಮ ಆಕ್ಷೇಪಣೆಗಳನ್ನು ತಹಶೀಲ್ದಾರರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರಗೇಶ್ ನಿರಾಣಿ(ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಪ್ರಕಾಶ್ ಕೆ ರಾಥೋಡ್‌ರವರು ನೀಲನಗರ ಗ್ರಾಮವನ್ನು ಹೊರಗಿಡಬೇಕೆಂದು ಹೇಳುತ್ತಿದ್ದಾರೆ, ನಾನು ಸಹ ಅದೇ ಜಿಲ್ಲೆಯವನಾದ್ದರಿಂದ ಅದು ಸರಿ ಎಂದು ನನಗೂ ಸಹ ಅನಿಸುತ್ತಿದೆ. ಇದನ್ನು ಪುರಸಭೆ ಸಚಿವರು ಪುನರ್ ಪರಿಶೀಲಿಸುವುದು ಸೂಕ್ತ ಎಂದು ನನಗನಿಸುತ್ತಿದೆ.

**ಶ್ರೀ ಎನ್.ನಾಗರಾಜು:-** ಮಾನ್ಯ ಸಭಾಪತಿಗಳೇ, ಗ್ರಾಮಸ್ಥರ ಆಕ್ಷೇಪಣೆ ಮತ್ತು ಜಿಲ್ಲಾಧಿಕಾರಿಗಳ ಅಭಿಪ್ರಾಯವನ್ನು ಸಂಗ್ರಹ ಮಾಡಲಾಗಿದೆ. ಮುಖ್ಯಸ್ಥಳಕ್ಕೆ ಬಹಳ ಹತ್ತಿರವಾಗಿರುವ ಗ್ರಾಮಗಳನ್ನು ಕೂಡ ಕೈ ಬಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಕಾನೂನಿನಲ್ಲಿ ಅವಕಾಶ ಇದ್ದರೆ ಅದನ್ನು ಸರಿಪಡಿಸುತ್ತೇನೆ.

**ಸಭಾಪತಿಯವರು:-** ನಾನು ಸಹ ಅದನ್ನೇ ಹೇಳುತ್ತಿರುವುದು, ಮಾನ್ಯ ಸದಸ್ಯರುಗಳು ಹೇಳುತ್ತಿರುವುದೇನೆಂದರೆ 2.5 ಕಿ.ಮೀ ದೂರದಲ್ಲಿರುವ ಗ್ರಾಮವನ್ನು ಬಿಟ್ಟು, 5 ಕಿ.ಮೀ ದೂರದ ಗ್ರಾಮವನ್ನು ಆರಿಸಿರುವುದು ಸರಿಯಲ್ಲ. ತಪ್ಪಾಗಿದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು, ಸರಿಪಡಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ.

**ಶ್ರೀ ಎನ್.ನಾಗರಾಜು**:- ಮಾನ್ಯ ಸಭಾಪತಿಗಳೇ, 0 ಕಿ.ಮೀ ನಿಂದ 5 ಕಿ.ಮೀ ದೂರದವರೆಗಿನ 5 ಗ್ರಾಮಗಳನ್ನು ಪುರಸಭೆಗೆ ಸೇರಿಸಿಕೊಳ್ಳಲಾಗಿದೆ. ಇನ್ನೂ ಹತ್ತಿರದಲ್ಲಿರುವ ತಾಂಡಗಳನ್ನು ಕೈ ಬಿಟ್ಟಿದೆ ಎಂದು ಹೇಳುತ್ತಿದ್ದಾರೆ. . ಕಾನೂನಿನಲ್ಲಿ ಅವಕಾಶ ಇದ್ದರೆ ಅದನ್ನು ಮರುಪರಿಶೀಲಿಸಿ ಸರಿಪಡಿಸುತ್ತೇನೆ.

**ಶ್ರೀ.ಪ್ರಕಾಶ್ ಕೆ ರಾಥೋಡ್**:- ಮಾನ್ಯ ಸಭಾಪತಿಯವರೆ, ಈ ಸದನದ ಸಚಿವರೇ ಈ ನೀಲನಗರವನ್ನು ಪುರಸಭೆಯಿಂದ ಹೊರಗಿಡಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾವು ಕೇಳುತ್ತಿರುವುದು ಮಾನ್ಯ ಸಚಿವರಿಗೆ ಅರ್ಥವೇ ಆಗುತ್ತಿಲ್ಲ. ಕ್ಯಾಬಿನೆಟ್ colleague ರವರೆ ನೀಲನಗರ ಹೊರಗಿಡಬೇಕೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು**:- ಮಾನ್ಯ ಸದಸ್ಯರುಗಳ ಬೇಡಿಕೆ. Genuine ಇದೆ. ಅದನ್ನು ಪುನರ್ ಪರಿಶೀಲಿಸಿ. ಸರಿಪಡಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ನೀಲನಗರವನ್ನು ಮಾತ್ರ ಪುರಸಭೆಯಿಂದ ಹೊರಗಿಡಿ.

**ಶ್ರೀ ಎನ್.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಮತ್ತೆ ಅದನ್ನು ಪುನರ್ ಪರಶೀಲಿಸಿ, ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1032 + 1073**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆಯಲ್ಲಿ ಕಳೆದ 5 ವರ್ಷದಲ್ಲಿ ಎಷಷ್ಟು ಸಾರ್ವಜನಿಕ ಶಕ್ತಿಯ ತೆರಿಗೆ ಸಂಗ್ರಹ ಆಗಿದೆ ಅದರ ಮಾಹಿತಿಯನ್ನು ನೀಡಬೇಕೆಂದು ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಉತ್ತರವಾಗಿ ಅನುಬಂಧ-1ರಲ್ಲಿ ಉತ್ತರ ನೀಡಿರುವುದಾಗಿ ಉತ್ತರದಲ್ಲಿ ಹೇಳಿದ್ದಾರೆ. ಆದರೆ ನಮಗೆ ಅನುಬಂಧ ಬಂದಿರುವುದಿಲ್ಲ. ಸಚಿವರಿಗೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅನುಬಂಧ ಮಿಸ್ ಆಗಿದ್ದಲ್ಲಿ ಅಧಿಕಾರಿಗಳು ಒದಗಿಸಿಕೊಡಬೇಕು.

ನಾನು ಪ್ರಶ್ನೆಯನ್ನು ಕೇಳಿದ ಮೂಲ ಉದ್ದೇಶ ಏನೆಂದರೆ ಪತ್ರಿಕೆಗಳಲ್ಲಿ **"ನಗರ ಸಭೆ ಗೋಲ್‌ಮಾಲ್, ಕೋಟ್ಯಂತರ ರೂಪಾಯಿ ಗುಳುಂ"** ಎನ್ನುವ ಸುದ್ದಿ ಪ್ರಕಟವಾಗಿದೆ. ಬೀದರ್ ಜಿಲ್ಲೆಯಲ್ಲಿನ ಸಾರ್ವಜನಿಕರು ನಗರಸಭೆಗೆ ಕಟ್ಟಬೇಕಾದ ತೆರಿಗೆಯನ್ನು ಕಟ್ಟಿದ್ದಾರೆ. ಆದರೆ ಈ ಹಣವನ್ನು ಸಂಗ್ರಹ ಮಾಡಿರುವ ಅಧಿಕಾರಿಗಳು ಈ ಹಣವನ್ನು ಬ್ಯಾಂಕಿಗೆ ಕಟ್ಟದೇ, ಬ್ಯಾಂಕಿನ ನಕಲಿ ಸೀಲನ್ನು ಬಳಸಿ, ಈ ತೆರಿಗೆಯ ಹಣವನ್ನು ಗುಳುಂ ಮಾಡಿದ್ದಾರೆ. ಮಾಧ್ಯಮಗಳಲ್ಲಿ ಕೋಟಿಗಟ್ಟಲೆ ಹಣ ಗುಳುಂ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅಧಿಕಾರಿಗಳು 3,85,118 ರೂಪಾಯಿಗಳು ಎಂದು ವರದಿ ಮಾಡಿದ್ದಾರೆ. ಆ ಅಧಿಕಾರಿಗಳ ಮೇಲೆ ಎಫ್.ಐ.ಆರ್ ಕೂಡ ದಾಖಲು ಮಾಡಲಾಗಿದೆ. ಮೊದಲೇ ನಮ್ಮ ಭಾಗ ಬಹಳ ಹಿಂದುಳಿದ ಪ್ರದೇಶ. ಇಲ್ಲಿ ಜನರು ಸರಿಯಾಗಿ ತೆರಿಗೆಯನ್ನು ಕಟ್ಟುವುದಿಲ್ಲ. ಅದರಲ್ಲೂ ತೆರಿಗೆ ಕಟ್ಟಿದವರದ್ದು ಸರ್ಕಾರಕ್ಕೆ ಸರಿಯಾಗಿ ಜಮಾ ಆಗುತ್ತಿಲ್ಲವೆಂದರೆ ಉಳಿದವರು ಹೇಗೆ ತೆರಿಗೆಯನ್ನು ಕಟ್ಟಬೇಕು? ಈಗಾಗಲೇ ತೆರಿಗೆ ಕಟ್ಟಿರುವವರು ನಮ್ಮ ಹಣ ತೆರಿಗೆಗೆ ಜಮಾ ಆಗಿದೆಯೋ ಇಲ್ಲವೋ ಎಂದು ಭಯಭೀತರಾಗಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಆದಷ್ಟು ಬೇಗ ಒಂದು ತನಿಖೆಯನ್ನು ಮಾಡಿಸಿ, ಯಾರು ಯಾರು ತೆರಿಗೆಯನ್ನು ಪಾವತಿ ಮಾಡಿದ್ದಾರೆ, ಆ ಹಣವನ್ನು ದುರುಪಯೋಗ ಮಾಡಿಕೊಂಡಿದ್ದರೆ ಅವರಿಂದ ವಸೂಲಿ ಮಾಡಿ, ಆಸ್ತಿ ತೆರಿಗೆ ಪಾವತಿ ಮಾಡಿದವರಿಗೆ ದೃಢೀಕರಣ ನೀಡಿ ಉಳಿದವರಿಗೂ ಕೂಡ ತೆರಿಗೆ ಕಟ್ಟಲು ಅನುವು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ತೆರಿಗೆ ಪಾವತಿಸುವುದನ್ನು "ಆನ್‌ಲೈನ್" ಏಕೆ ಮಾಡಬಾರದೆಂದು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರಿಂದ ಅಧಿಕಾರಿಗಳು ಮಧ್ಯೆದಲ್ಲಿ ತೆರಿಗೆ ಹಣವನ್ನು ಏನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಇದನ್ನೆಲ್ಲಾ ತಪ್ಪಿಸಬಹುದು. ಆದ್ದರಿಂದ ದಯಮಾಡಿ ಈ ತೆರಿಗೆ ಪಾವತಿಸುವುದನ್ನು "ಆನ್‌ಲೈನ್" ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜು:-** ಮಾನ್ಯ ಸಭಾಪತಿಯವರೆ, ಪ್ರಸಕ್ತ ಸಾಲಿನಲ್ಲಿ 3,85,118 ರೂಪಾಯಿಗಳ ದುರುಪಯೋಗ ಆಗಿದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ. ಈ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿದ ಬೀದರ್ ಜಿಲ್ಲಾ ನಗರ ಸಭೆಯ ಶ್ರೀ ಮೊಹಮ್ಮದ್ ನಾಸಿರ್ ಖಾನ್, ಶ್ರೀ ಲೋಕೇಶ್, ಶ್ರೀ ಸಯ್ಯದ್ ಬಾಬು ಮತ್ತು ಶ್ರೀ ಬಸವರಾಜ ಬೊರೆ ಎನ್ನುವ 4 ಜನ ಸಿಬ್ಬಂದಿಯನ್ನು ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಬೀದರ್ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆ. ಇದಲ್ಲದೆ ತೆರದಾಳ ನಗರಸಭೆ, ಬಳ್ಳಾರಿ ಮಹಾನಗರ ಪಾಲಿಕೆ ಮತ್ತು ಚಿಕ್ಕಮಗಳೂರು ನಗರಸಭೆ ಈ 3 ಸ್ಥಳೀಯ ನಗರ ಸಭೆಗಳಲ್ಲಿ ಈ ರೀತಿಯ ಅನ್ಯಾಯ ಆಗಿದೆ. ಇಲ್ಲಿಯೂ ಕೂಡ ಸಂಬಂಧಪಟ್ಟ ಸಿಬ್ಬಂದಿಯನ್ನು ಅಮಾನತ್ತಿನಲ್ಲಟ್ಟು ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆ. ಹಾಗೂ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೂ ಸಹ ಸೂಚನೆಯನ್ನು ನೀಡಲಾಗಿದೆ.

ಇನ್ನೂ ಹೆಚ್ಚಿನ ಅವ್ಯವಹಾರಗಳು ನಡೆದಿದ್ದಲ್ಲಿ, ಅದರ ಬಗ್ಗೆ ಮಾಹಿತಿಯನ್ನು ನೀಡಿದರೆ ಅವರ ಮೇಲೆ ಕಠಿಣ ಕ್ರಮ ಜರುಗಿಸುತ್ತೇವೆ.

(ಮುಂದು)

(846)/21-9-2021/11-50/ಎಲ್‌ಎಂ/ವಿಕೆ

**ಸಭಾಪತಿಯವರು**:- ಈಗ suspend ಮಾಡಿದ್ದಾರೆ. ಮುಂದೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಸಚಿವರು ಹೇಳಬೇಕು.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಗಳೆ, ಬೇರೆ ಮುನ್ಸಿಪಾಲಿಟಿಯಲ್ಲಿ ಆನ್‌ಲೈನ್ ತೆರಿಗೆ ಕಟ್ಟುವಂತಹ ವ್ಯವಸ್ಥೆಯಾಗಿದೆ. ಅದನ್ನು ಬೀದರ್ ಜಿಲ್ಲೆಯಲ್ಲಿಯು ಮಾಡಬೇಕು ಎನ್ನುವುದು ನನ್ನ ಮನವಿ. ಎರಡು-ಮೂರು ಜನರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಸ್ಪಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಈ ರೀತಿ ನಡೆಯುತ್ತಿರುವುದು ಮೊದಲನೆಯ ಬಾರಿಯಲ್ಲ, ೫ ವರ್ಷಗಳ ಹಿಂದೆಯು ಇದೇ ರೀತಿಯ scandal ಬೀದರ್ ಮುನ್ಸಿಪಾಲಿಟಿಯಲ್ಲಿ ನಡೆದಿದೆ. ಇನ್ನು ಮುಂದೆ ಈ ರೀತಿಯಾಗದಂತೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಮಂತ್ರಿಗಳು ತಿಳಿಸಬೇಕು.

**ಸಭಾಪತಿಯವರು**:- ಮಂತ್ರಿಗಳೆ ಈ ರೀತಿಯಾಗುತ್ತಿರುವುದು ಇದು ಎರಡನೆಯ ಬಾರಿ. ಇನ್ನು ಮುಂದೆ ಹೀಗೆ ಆಗದಂತೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

**ಶ್ರೀ ಎನ್.ನಾಗರಾಜು ಎಂಟಿಬಿ**:- ಮಾನ್ಯ ಸಭಾಪತಿಗಳೆ, ಕಾನೂನು ಪ್ರಕಾರ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಿ ಸಂಬಂಧಪಟ್ಟವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಅನುಬಂಧವನ್ನು ಕೊಡಬೇಕು.

**ಶ್ರೀ ಎನ್.ನಾಗರಾಜು ಎಂಟಿಬಿ**:- ಅನುಬಂದವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಅರವಿಂದ ಅರಳಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ರಘುನಾಥ್‌ರಾವ್ ಮಲ್ಕಾಪೂರೆಯವರು ಹೇಳಿದಂತೆ, ೫ ವರ್ಷಗಳ ಹಿಂದೆ ಇದೇ ರೀತಿ ಪ್ರಕರಣವಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಇನ್ನು ಅದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಅವರು ಕೂಡಾ ಭಾಗಿಗಳಾಗಿದ್ದಾರೆ. ಅವರ ಮೇಲೆ ಬರಿ ಎಫ್‌ಐಆರ್ ಹಾಕಿದ್ದರೆ ಸಾಲದು, ಅವರಿಂದ ಹಣವನ್ನು ವಸೂಲಿ ಮಾಡಬೇಕು ಮತ್ತು ಅವರನ್ನು ಬಂದಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಎನ್.ನಾಗರಾಜು ಎಂಟಿಬಿ**:- ಮಾನ್ಯ ಸಭಾಪತಿಗಳೆ, ಅವರನ್ನು suspend ಮಾಡಿದ್ದೇವೆ. ಕ್ರಿಮಿನಲ್ ಕೇಸ್‌ನ್ನು ಹಾಕಲಾಗಿದೆ. ಸಂಬಂಧಪಟ್ಟವರು ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ನಮಗೆ ಬಂದರೆ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಾಯಿಸಲಾಗುತ್ತದೆ. ಹಿಂದೆ ಅವರು ಕೋರ್ಟ್‌ಗೆ ಹೋಗಿ ಬೆಲ್ ತಂದಿದ್ದಾರೆ.

**ಸಭಾಪತಿಯವರು**:- ಮಾನ್ಯ ಸದಸ್ಯರು ಹೇಳುವುದು, ಹಿಂದಿನ ಪ್ರಕರಣದಲ್ಲಿ ಭಾಗಿಯಾದವರೇ ಇಂದು ಮತ್ತೆ ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ನಾಗರಾಜು ಎಂಟಿಬಿ**:- ಮಾನ್ಯ ಸಭಾಪತಿಗಳೆ, ಅವರು ಅಲ್ಲಿಯೇ ಕೆಲಸ ಮಾಡುತ್ತಿದ್ದರೆ, ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದು ಅಥವಾ suspend ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಅರವಿಂದ ಅರಳಿ**:- ಅವರು ಬೇರೆ ಜಿಲ್ಲೆಗೆ ವರ್ಗಾಯಿಸಿ ಬಿಡಿ.

**ಸಭಾಪತಿಯವರು**:- ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಂತ್ರಿಗಳು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1063**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಗಳೆ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ(ಪ್ಯಾಕ್ಸ್) ರೈತರು RTC ನೀಡುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ಪಡೆಯಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಆದರೆ ಕೆಲವು ಬ್ಯಾಂಕ್‌ಗಳಲ್ಲಿ ೧೦% ೯% ಬಡ್ಡಿಯನ್ನು ನಿಗದಿಪಡಿಸುತ್ತಿದ್ದಾರೆ. ಆದರೆ ಅವಧಿಗೆ ಮೊದಲೇ ಸಾಲವನ್ನು ತೀರಿಸಿ ಒಡವೆಗಳನ್ನು ಬಿಡಿಸಿಕೊಳ್ಳುವವರಿಗೆ commercial bank ನವರು ಕೊಡುವಂತೆ ೩% ಪ್ರೋತ್ಸಾಹ ಧನವನ್ನು ಕೊಡುತ್ತಾಯೇ ಎನ್ನುವುದಕ್ಕೆ ಸಾಧ್ಯವಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಸರ್ಕಾರ ತನ್ನ ಉತ್ತರದಲ್ಲಿ ಕೇಂದ್ರ ಸರ್ಕಾರದ ಪತ್ರ ದಿನಾಂಕ: ೨೩-೧-೨೦೨೦ರಲ್ಲಿ ದಿನಾಂಕ: ೧-೪-೨೦೨೦ರಿಂದ ಅನ್ವಯವಾಗುವಂತೆ ವಾಣಿಜ್ಯ ಬ್ಯಾಂಕುಗಳು ಒಳಗೊಂಡಂತೆ ಎಲ್ಲಾ ಬ್ಯಾಂಕುಗಳು ರೈತರಿಗೆ ನೀಡುವ ಚಿನ್ನಾಭರಣ ಸಾಲದ ಖಾತೆಗಳನ್ನು Kisan Credit Card ಖಾತೆಗಳಾಗಿ ಪರಿವರ್ತಿಸಿ ಅಂತಹ ಸಾಲಗಳಿಗೆ ಮಾತ್ರ ೨% ಬಡ್ಡಿ subvention ಮತ್ತು ೩%ರ ಪ್ರೋತ್ಸಾಹಧನ ಕ್ಲೇಮು ಮಾಡಲು ಕಡ್ಡಾಯಗೊಳಿಸಿರುತ್ತದೆ ಎಂದು ಹೇಳಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಕೇಳಿರುವುದು, ೨೧ ಡಿಸಿಸಿ ಬ್ಯಾಂಕ್‌ಗಳಲ್ಲಿ ಕೊಡಗು, ಬೀದರ್ ಮತ್ತು ಚಿತ್ರದುರ್ಗ ಈ ಮೂರು ಡಿಸಿಸಿ ಬ್ಯಾಂಕ್‌ಗಳಲ್ಲಿ ಮಾತ್ರ ಪಹಣಿಯನ್ನು ಕೊಟ್ಟರೆ ಮಾತ್ರ ೧% ಬಡ್ಡಿಯನ್ನು ಕಡಿಮೆ ಮಾಡುತ್ತಾರೆ. ಮಿಕ್ಕ ೧೮ ಡಿಸಿಸಿ ಬ್ಯಾಂಕ್‌ಗಳಲ್ಲಿ ಆ ರೀತಿಯ ವ್ಯವಸ್ಥೆ ಇಲ್ಲ. ೧೮ ಬ್ಯಾಂಕ್‌ಗಳಲ್ಲಿ ತಮ್ಮದೆ ಆದ ಬಡ್ಡಿದರವನ್ನು ನಿಗದಿಪಡಿಸಿಕೊಂಡು ಒಡವೆ ಸಾಲವನ್ನು ಕೊಡುತ್ತಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಶೇಕಡಾ ಎಂಟುವರೆ ಬಡ್ಡಿಯನ್ನು ನಿಗದಿಪಡಿಸಿಕೊಂಡಿದ್ದಾರೆ ಆದರೆ ೧% ಆರ್‌ಟಿಸಿ ಇದ್ದರೆ ಮಾತ್ರ. ಬೀದರ್ ೧೦% ಇರುವುದು ೯% ಬಡ್ಡಿ ನಿಗದಿಪಡಿಸಿಕೊಂಡಿದ್ದಾರೆ. ಚಿತ್ರದುರ್ಗ ೧೦% ಇರುವುದನ್ನು ೯% ಗೆ ನಿಗದಿಪಡಿಸಿಕೊಂಡಿದ್ದಾರೆ. ಕೆಲವು ಬ್ಯಾಂಕ್‌ನವರು ೬ ತಿಂಗಳ ಅವಧಿಯನ್ನು ಕೊಡುತ್ತಾರೆ, ಕೆಲವು ಬ್ಯಾಂಕ್‌ಗಳು ೯ ತಿಂಗಳ ಅವಧಿಯನ್ನು ಕೊಡುತ್ತಾರೆ. ಅದರ ಒಳಗೆ ಸಾಲವನ್ನು ತೀರಿಸಿಕೊಂಡವರಿಗೆ ರಿಯಾಯಿತಿ ಕೊಡುವುದು ಡಿಸಿಸಿ ಬ್ಯಾಂಕ್‌ಗಳಲ್ಲಿ ವ್ಯವಸ್ಥೆ ಇಲ್ಲ. ಕೇಂದ್ರ ಸರ್ಕಾರದ Kisan Credit Card ಹೊಂದಿದವರು ಒಡವೆ ಸಾಲಕ್ಕೂ ೦% ಬಡ್ಡಿಗೆ ಅರ್ಹತೆಯನ್ನು ಹೊಂದಿದ್ದಾರೆ. ಅವರು ಯಾವುದಾದರೂ ಸಾಲವನ್ನು ಪಡೆಯಬಹುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ ಒಡವೆ ಸಾಲಕ್ಕೆ ಡಿಸಿಸಿ ಬ್ಯಾಂಕ್‌ನವರು ಜಾಮೀನು ಏನು ಕೇಳುವುದಿಲ್ಲ. ೦% ಗೆ ಮೂರು ಲಕ್ಷದವರೆಗೆ ಸಾಲವನ್ನು ಕೊಡುವ ರೀತಿಯಲ್ಲಿಯೇ ಒಡವೆ ಸಾಲಕ್ಕೆ ಜಾಮೀನನ್ನು ಕೇಳುವುದಿಲ್ಲ. ಆರ್‌ಟಿಸಿ ಮತ್ತು revenue records ಏನು ಇರುತ್ತದೆ ಅದಕ್ಕೆ ಮಾತ್ರ ಮಾಡಲಾಗಿದೆ.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಗಳೆ, ಬೀದರ್ ಡಿಸಿಸಿ ಬ್ಯಾಂಕ್‌ನಲ್ಲಿ ೧% ಕಡಿಮೆ ಮಾಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ೮.೫% ಬಡ್ಡಿ ಇದ. ಚಿತ್ರದುರ್ಗದಲ್ಲಿ ೧೦% ಇರುವುದನ್ನು ೯% ಮಾಡಿದ್ದಾರೆ. ಮಂಡ್ಯ ಜಿಲ್ಲಾ ಸಹಕಾರಿ ೯% ಬಡ್ಡಿ ದರಕ್ಕೆ ಒಡವೆ ಸಾಲವನ್ನು ಕೊಡುತ್ತಾರೆ. ಸಹಕಾರಿ ಬ್ಯಾಂಕ್ ಎಂದರೆ ರೈತರ ಬ್ಯಾಂಕ್. ಆರ್‌ಟಿಸಿ ಕೊಟ್ಟು ಒಡವೆ ಸಾಲವನ್ನು ಪಡೆಯುವ ರೈತರಿಗೆ ಎಲ್ಲಾ ಬ್ಯಾಂಕ್‌ಗಳಲ್ಲಿ ಒಂದೇ ಮಾನದಂಡವನ್ನು ಅನುಸರಿಸಬೇಕು ಎನ್ನುವ ನಿಯಮವನ್ನು ತರಬೇಕು. ಕೇಂದ್ರ ಸರ್ಕಾರ Kisan Credit Card ಎಂದು ಮಾಡಿರುವುದರ ವ್ಯಾಪ್ತಿಯ ಒಳಗಡೆಯೇ ಒಡವೆ ಸಾಲ ತೆಗೆದುಕೊಳ್ಳುವವರ ಖಾತೆಯನ್ನು open ಮಾಡಿ. ಸಹಕಾರಿ ಬ್ಯಾಂಕ್‌ಗಳಲ್ಲಿ ಯಾರು ಅವಧಿಯೊಳಗೆ ಸರಿಯಾಗಿ ಸಾಲವನ್ನು ತಿರುವಳಿ ಮಾಡುತ್ತಾರೆ ಅವರಿಗೆ ೩% ರಿಯಾಯಿತಿ ಕೊಡುವುದನ್ನು ಜಾರಿ ಮಾಡಿ. ಇದರ ಬಗ್ಗೆ ದಯಮಾಡಿ ಚಿಂತನೆ ಮಾಡಬೇಕು. ಏಕೆಂದರೆ ರೈತರು ತಮ್ಮ ಒಡವೆಯನ್ನು ಮಾರ್ವಾಡಿ ಅಂಗಡಿಯಲ್ಲಿಟ್ಟು ಅವರಿಗೆ ಕೊಡಬೇಕಾದ ಬಡ್ಡಿಯನ್ನು ಕೊಟ್ಟು ಹಣ ತಂದು ಬೇಸಾಯ ಮಾಡುತ್ತಿದ್ದಾರೆ, ರೈತರ ಬ್ಯಾಂಕು ಎಂದರೆ ಸಹಕಾರಿ ಬ್ಯಾಂಕ್. ಅದರಿಂದ ದಯಮಾಡಿ ಪರಿಶೀಲನೆ ಮಾಡಿ. ಇದರ ಬಗ್ಗೆ uniformity ಇರಲಿ. ಎಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ಚಿನ್ನದ ಮೇಲಿನ ಸಾಲಕ್ಕೆ ಒಂದೇ ಮಾದರಿಯ ಬಡ್ಡಿದರವನ್ನು ನಿಗದಿಗೊಳಿಸಿ. ರೈತರಿಗೆ ೩% ಗೆ ಬೆಳೆ ಸಾಲವನ್ನು ಕೊಡುತ್ತಾರೆ ಮಹಿಳಾ ಸ್ವಸಹಾಯ ಗುಂಪುಗಳಿಗೆ ೪% ಬಡ್ಡಿದರಕ್ಕೆ ಯಾವುದೇ ಆಧಾರದವಿಲ್ಲದೆ ಸಾಲವನ್ನು ಕೊಡಲಾಗುತ್ತದೆ. ಬಹಳ ಪ್ರೀತಿಯಿಂದ ಅಚ್ಚು-ಮೆಚ್ಚಿನಿಂದ ಇಟ್ಟುಕೊಂಡಿರುವ ಒಡವೆಯನ್ನೆ ಇಟ್ಟು ರೈತರು ಸಾಲವನ್ನು ತೆಗೆದುಕೊಳ್ಳುತ್ತಾರೆ. ಆರ್‌ಟಿಸಿ ಮೇಲೆ ೨ ರಿಂದ ೩ ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುತ್ತಾರೆ. ಎರಡು ದಿನಗಳ ಹಿಂದೆ ಪತ್ರಿಯಲ್ಲಿ ತಮಿಳನಾಡು ಸರ್ಕಾರ ಎರಡು ಲಕ್ಷ ರೂಪಾಯಿಗಳ ಒಳಗೆ ಯಾರು ಚಿನ್ನಾಭರಣ ಸಾಲವನ್ನು ತೆಗೆದುಕೊಂಡಿದ್ದಾರೆ ಅಂತಹ ರೈತರ ಎಲ್ಲ ಸಾಲವನ್ನು ಸಹಕಾರಿ ಇಲಾಖೆ ವತಿಯಿಂದ ಮನ್ನಾ ಮಾಡಲಾಗಿದೆ ಎನ್ನುವುದನ್ನು ಪತ್ರಿಕೆಯಲ್ಲಿ ಓದಿದೆ. ಇನ್ನು ಮುಂದಾದರೂ ಸಹಕಾರಿ ಇಲಾಖೆಯಿಂದ ರೈತರು ಇಟ್ಟಿರುವ ಚಿನ್ನಾಭರಣ ಸಾಲಕ್ಕೆ ೩% ರಿಯಾಯಿತಿ ನೀಡುವಂತೆ ಮಾಡಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್**:-ಮಾನ್ಯ ಸಭಾಪತಿಗಳೆ, ೨೧ ಡಿಸಿಸಿ ಬ್ಯಾಂಕ್‌ಗಳಲ್ಲಿ ಶೇಕಡಾ ೧ ರಷ್ಟು, ಶೇಕಡಾ ಅರ್ಧದಷ್ಟು, ಮುಕ್ಕಾಲು ಶೇಕಡಾ ಹೀಗೆ ವ್ಯತ್ಯಾಸವಿದೆ. ಮಾನ್ಯ ಸದಸ್ಯರು ಹೇಳುವ ಹಾಗೆ ಎಲ್ಲಾ ಡಿಸಿಸಿ ಬ್ಯಾಂಕ್‌ಗಳಲ್ಲಿ ಒಂದೇ ರೀತಿ ತರಲು ಎಲ್ಲಾ ಡಿಸಿಸಿ ಬ್ಯಾಂಕ್‌ಗಳ ಸಭೆಯನ್ನು ಕರೆದು ಚರ್ಚೆ ಮಾಡುತ್ತೇವೆ. ೧% ಆರ್‌ಟಿಸಿ ಇಟ್ಟರೆ ೩% ರಿಯಾಯಿತಿ ಕೊಡುವ ಬಗ್ಗೆ ಚರ್ಚಿಸಲು ಸಭೆಯನ್ನು ಕರೆಯುತ್ತೇನೆ.

(ಮುಂದು)

(847)21-09-2021(12-00)bsd-vk

**ಶ್ರೀ ಎಸ್.ಟಿ. ಸೋಮಶೇಖರ್ (ಮುಂದು)**

ಜೊತೆಗೆ ೨೧ DCC Bank ಗಳು ಕೂಡ ಒಂದೇ interest rate ಮಾಡುವ ಬಗ್ಗೆ ಮಾಡುತ್ತೇವೆ. ಇನ್ನೂ ಎರಡ್ಮೂರು ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಮಾನ್ಯ ಮರಿತಿಬ್ಬೇಗೌಡರನ್ನು ಸಭೆಗೆ ಆಹ್ವಾನಿಸಿ ,, ಮಾನ್ಯ ಮರಿತಿಬ್ಬೇಗೌಡರು ಹೇಳಿದಂತ ವಿಚಾರಗಳನ್ನು implement ಮಾಡುವ ಕೆಲಸ ಮಾಡುತ್ತೇನೆ.

**ಸಭಾಪತಿಯವರುಃ-** ನಂತರ ಮಾನ್ಯ ರಮೇಶ್ ಗೌಡರು ನೇರವಾಗಿ ಪ್ರಶ್ನೆ ಕೇಳಿ, ಮಾನ್ಯ ಸಚಿವರು ನೇರವಾಗಿ ಉತ್ತರ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 1008**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಇದರಲ್ಲಿ ಕೆಲವು ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದೇನೆ. ಉತ್ತರದಲ್ಲಿ ಯಾವ ಕಾಮಗಾರಿಯೂ ಕಳಪೆ ಗುಣಮಟ್ಟದ್ದಾಗಿಲ್ಲ, ಎಲ್ಲವೂ No. 1 ಕಾಮಗಾರಿ ಎಂದು ಹೇಳಿದ್ದಾರೆ. Project Management Consultants ಬಗ್ಗೆ ಹೇಳಿದ್ದು, ಎಲ್ಲವೂ ಸರಿಯಿದ್ದರೆ ೨೪ ಕಾಮಗಾರಿಗಳು ಏಕೆ ವಿಳಂಬವಾದವು ಎಂಬುದನ್ನು ತಿಳಿಸಬೇಕಾಗುತ್ತದೆ.

**ಶ್ರೀ ಮುರುಗೇಶ್ ನಿರಾಣಿಃ-** ಮಾನ್ಯ ಸಭಾಪತಿಯವರೇ, ಕೋವಿಡ್-19 ವ್ಯಾಧಿ ಬಂದಿರುವ ಸಮಯದಲ್ಲಿ ಕೆಲಸದಲ್ಲಿ ಸ್ವಲ್ಪ delay ಆಗಿದೆ. ಎರಡನೆಯದಾಗಿ ರೈತರಿಂದ ಭೂಮಿ ಖರೀದಿ ಮಾಡುವ ಸಂದರ್ಭದಲ್ಲಿ ಕೆಲವೊಂದು ಬಾರಿ Department ಗೆ ಮತ್ತು ರೈತರಿಗೆ dispute ಬಂದಿರುವುದು, ಬೆಲೆ ನಿಗದಿ ಮಾಡುವುದರಲ್ಲಿ ತಡವಾಗಿರುವುದು, ಅವರವರ ಅಣ್ಣ-ತಮ್ಮಂದಿರಲ್ಲಿ ಜಗಳ ಆಗಿ ಭೂಮಿಯನ್ನು ಸಕಾಲಕ್ಕೆ ಕೊಡದೇ ಇರುವುದರಿಂದ ಕೆಲಸದಲ್ಲಿ delay ಆಗಿದೆ. ಅದನ್ನು one-to-one discussion ಮಾಡಿ, ಸಮಸ್ಯೆ ಇತ್ಯರ್ಥ್ಯ ಮಾಡಿದ್ದಾರೆ. Major about more than 95 per cent solve ಇದೆ. ಅಲ್ಲೊಂದು ಇಲ್ಲೊಂದು ಎನ್ನುವಂತೆ less than 5 per cent problem ಇದೆ.

**ಶ್ರೀ ಹೆಚ್.ಎಂ. ರಮೇಶ್ ಗೌಡಃ-** ಮಾನ್ಯ ಸಭಾಪತಿಯವರೇ, ಈಗಾಗಲೇ ಒಂದೊಂದು ಕಾಮಗಾರಿಯನ್ನು ಒಬ್ಬೊಬ್ಬರಿಗೆ ರೂ.೬ ರಿಂದ ೧೦ ಕೋಟಿಗಳವರೆಗೆ ಕೊಟ್ಟಿದ್ದಾರೆ. ಇದರಲ್ಲಿ water ಸಹ ಇದೆ. ಉತ್ತರದಲ್ಲಿ ಎಲ್ಲವೂ ಸರಿ ಇದೆ ಎಂದು ಹೇಳಿಬಿಡುತ್ತಾರೆ. ಹಾಗಾದರೆ ಕೋವಿಡ್-19 ಬಂದಿರುವುದು ನಿಜ. ಅವರ expert committee ಇದೆ. ಅವರ engineer ಗಳು ಇದ್ದಾರೆ. Project Management Consultants ರವರು ಇದ್ದಾರೆ. ಆದರೆ ಎಲ್ಲದ್ದಕ್ಕೂ ಕೋವಿಡ್-19 ಕಾರಣವನ್ನು ನೀಡುತ್ತಿದ್ದಾರೆ. ಅಧಿಕಾರಿಗಳು ಎಲ್ಲದ್ದಕ್ಕೂ ಕೋವಿಡ್-19 ನೆಪ ಹೇಳುವುದಾದರೆ tender ಕರೆಯಬೇಕಾದರೆ.... ಉತ್ತದಲ್ಲಿ ' ಭೂ ತಕರಾರಿನಿಂದ ಹಾಗೂ ಕೋವಿಡ್-೧೯ ರ ಸಾಂಕ್ರಾಮಿಕ ರೋಗದ ಕಾರಣ lockdown ನಿಂದ ಕಾಮಗಾರಿಗಳಿಗೆ ಅವಶ್ಯವಿರುವ ಕಚ್ಚಾ ಸಾಮಾಗ್ರಿಗಳು, ನುರಿತ ಕಾರ್ಮಿಕರ ಲಭ್ಯತೆ ಇಲ್ಲದಿದ್ದರಿಂದ ಕಳೆದ ೩ ವರ್ಷಗಳಲ್ಲಿ ೨೪ ಕಾಮಗಾರಿಗಳು ವಿಳಂಬವಾಗಿವೆ' ಎಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದ್ದಾರೆ. ಕೆಲಸಗಾರರೇ ಇಲ್ಲದೇ ಇರುವಂತಹವರಿಗೆ tender ಅನ್ನು ಏಕೆ ಕೊಡುತ್ತಾರೆ? ಹಾಗಾದರೆ ಇದು engineer ಗಳ adjustment ಆಗಿದೆಯೇ? ಅವರು ಯಾರಿಗೆ ಹೇಳುತ್ತಾರೋ, ಅವರಿಗೆ ಕೊಡುತ್ತಾರೆಯೇ? ಅವರ ಹತ್ತಿರ ನುರಿತ ಕೆಲಸಗಾರರು ಇಲ್ಲವೆಂದರೆ ಕಾಮಗಾರಿಗಳನ್ನು ಅಂತಹವರಿಗೆ ಏಕೆ ಕೊಡುತ್ತಾರೆ? ಅಂತಹವರನ್ನು ದಯಮಾಡಿ ಕಪ್ಪು ಪಟ್ಟಿಗೆ ಸೇರಿಸಬೇಕು.

**ಶ್ರೀ ಮುರುಗೇಶ್ ನಿರಾಣಿಃ-** ಕಾಮಗಾರಿ contractor ನಿಂದ delay ಆಗಿಲ್ಲ.

ಸಭಾಪತಿಯವರುಃ- ಮಾನ್ಯ ಸದಸ್ಯರು ತಪ್ಪು ಇರುವುದರಿಂದ ಕ್ರಮ ತೆಗೆದುಕೊಳ್ಳಿ, eligibility ಬಗ್ಗೆ ಮಾಡಿ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಮುರುಗೇಶ್ ನಿರಾಣಿಃ-** ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ. Particular ಆಗಿ ಯಾವ place ನಲ್ಲಿ ಆಗಿದೆ ಎಂಬ detail ಕೊಡಲಿ. ಆ industrial layout ಗೆ ನಾನೂ ಹೋಗುತ್ತೇನೆ ಮತ್ತು ಮಾನ್ಯ ಸದಸ್ಯರನ್ನು ಕರೆಯುತ್ತೇನೆ, ಅಲ್ಲಿ ತಪ್ಪಾಗಿದ್ದರೆ ಕ್ರಮ ಕೈಗೊಂಡು ಸರಿಪಡಿಸುವ ಕೆಲಸ ಮಾಡುತ್ತೇನೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ಮಾನ್ಯ ಸಭಾಪತಿಯವರೇ, ಬಾಗಲೂರು....

**ಸಭಾಪತಿಯವರುಃ-** ಇಲ್ಲ, ಮಾನ್ಯ ಸಚಿವರೇ, ಉತ್ತರ ಹೇಳಬೇಡಿ. ಮಾನ್ಯ ರವಿಕುಮಾರ್ ಪ್ರಶ್ನೆ ಕೇಳಿ.

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ಅಲ್ಲಿ water ಬರುತ್ತಿಲ್ಲ, ಅದನ್ನು ಯಾರೂ check ಮಾಡುತ್ತಿಲ್ಲ.

**ಸಭಾಪತಿಯವರುಃ-** ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ.

**ಶ್ರೀ ಹೆಚ್.ಎಂ. ರಮೇಶ್‌ಗೌಡಃ-** ನನ್ನ ಪ್ರಶ್ನೆ ಪೂರ್ತಿಯಾಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 1010**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ನನಗೆ ಸಮಾಧಾನ ತಂದಿಲ್ಲ, ಕಾರಣವೇನೆಂದರೆ CAG (*Comptroller and Auditor General)* ವರದಿಯಲ್ಲಿ '೨೦೧೪-೧೫ ರಿಂದ ೨೦೧೭-೧೮ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ರೂ.೯೮ ಕೋಟಿಗಳನ್ನು ಪೂರ್ಣವಾಗಿ ಬಳಸಿಕೊಂಡಿಲ್ಲ' ಎಂದು ಇದೆ. ಅದಕ್ಕೆ ಗೃಹ ನಿರ್ಮಾಣ ಮಾಡುವುದರಲ್ಲಿ ವಿಳಂಬವಾಗಿದೆ. ಈ ಹಣವನ್ನು ಖಾಸಗಿ bank ಗಳಲ್ಲಿ ಠೇವಣಿಯಾಗಿ deposit ಮಾಡಿದ್ದಾರೆ. ಸಾಮಾನ್ಯವಾಗಿ treasury bank ನಲ್ಲಿ ಇಡುತ್ತಾರೆ. ಆದರೆ ಸರ್ಕಾರದ ಹಣವನ್ನು ಖಾಸಗಿ bank ನಲ್ಲಿಟ್ಟಿದ್ದಾರೆ. ಅಲ್ಲದೇ ವಿಳಂಬ ಸಹ ಆಗಿದೆ. ಖಾಸಗಿ bank ನಲ್ಲಿ ಇಡುವುದಕ್ಕೆ ಕಾರಣ ಏನು? ಇದರಲ್ಲಿ ಅವ್ಯವಹಾರ ನಡೆದಿದೆಯೇ? ಖಾಸಗಿ bank ನಲ್ಲಿ ಹಣ ಇಡುವುದಕ್ಕೆ ಸರ್ಕಾರದ ಅನುಮತಿ ಇದೆಯೇ? ಅನುಮತಿ ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ತೆಗೆದುಕೊಳ್ಳುವ ಕ್ರಮಗಳೇನು ಹಾಗೂ ವಿಳಂಬ ಆಗಿರುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಬೇಕು.

**ಶ್ರೀ ಎನ್ ನಾಗರಾಜ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ೧೦೮.೮೭ ಕೋಟಿ ಅನುದಾನವನ್ನು ಖಜಾನೆಯಲ್ಲಿ ಇಡಬೇಕು ಎಂಬುದು ಮಾನ್ಯ ಸದಸ್ಯರ ಮೂಲ ಪ್ರಶ್ನೆಯಾಗಿದೆ. ಆ ಹಣವನ್ನು ಖಜಾನೆಯಲ್ಲಿ ಜಮಾ ಮಾಡುವುದರಿಂದ ಯಾವುದೇ ಬಡ್ಡಿ ಶೇಖರಣೆ ಆಗುವುದಿಲ್ಲ. ಆ ಉದ್ದೇಶದಿಂದ bank ನಲ್ಲಿ ಜಮಾ ಮಾಡಿದ್ದೇವೆ. ಆ ಕಾಮಗಾರಿಗೆ ಪ್ರಗತಿ ಆಧರಿಸಿ ಅನುದಾನವನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು. ೨೦೧೪-೧೫ ರಿಂದ ೨೦೧೮-೧೯ ರವರೆಗೂ ರೂ.೬೫೩.೨೮ ಲಕ್ಷಗಳ ಹಣ ಈಗಾಗಲೇ ಬಡ್ಡಿ ರೂಪದಲ್ಲಿ ಜಮಾ ಆಗಿರುತ್ತದೆ. ಆ ಬಡ್ಡಿಯನ್ನು ಹೆಚ್ಚುವರಿ ಕಾಮಗಾರಿಗಳಿಗೆ ಉಪಯೋಗ ಮಾಡಲು ಅವಕಾಶವಿದೆ. ಮಾನ್ಯ ಸದಸ್ಯರು treasury ಯಲ್ಲಿ ಹಣ ಜಮಾ ಮಾಡಲಿಲ್ಲ ಎಂಬುದು ಮೂಲ ಪ್ರಶ್ನೆಯಾಗಿದೆ. ಆದರೆ ಬಡ್ಡಿಯಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಡ್ಡಿ ಹಣವನ್ನು ಯಾವ ರೀತಿ ಉಪಯೋಗಿಸಬಹುದೆಂಬ ನಿರ್ದಿಷ್ಟವಾದ ಸೂಚನೆ ಕಾರಣ ಬಡ್ಡಿ ಹಣವನ್ನು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಅನುದಾನವನ್ನು ಹೆಚ್ಚಿಸಲು ಸಾಧ್ಯವಾಗದಿದ್ದಲ್ಲಿ ಪೌರ ಕಾರ್ಮಿಕರ ಗೃಹಭಾಗ್ಯ ಅನುಷ್ಠಾನ ಸಂದರ್ಭದಲ್ಲಿ ಒಂದು ವೇಳೆ ನಿಗದಿತ ಮಟ್ಟಕ್ಕೆ ಹೆಚ್ಚಿಸಲು ಅವಶ್ಯಕತೆ ಬಂದಲ್ಲಿ......

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ-** ನೀವು ಉತ್ತರ ಕೊಡಿ, ಓದಬೇಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದು, CAG report ನಲ್ಲಿ ಇರುವಂತೆ ಖಾಸಗಿ bank ನ account ನಲ್ಲಿ ಇಟ್ಟಿರುವ ಬಗ್ಗೆ ಹೇಳಿದ್ದು, ಸರ್ಕಾರದ ಹೆಸರಿನಲ್ಲಿ ಇಲ್ಲ. ಖಾಸಗಿ ಹೆಸರಿನಲ್ಲಿ ಇಟ್ಟಿದ್ದಾರೆ ಎಂದು ಇದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ. ವಿಳಂಬ ಆಗಲು ಕಾರಣ ಏನು? ಹಣ ಇದ್ದರೂ ಸರಿಯಾದ ಸಮಯಕ್ಕೆ ಗೃಹ ನಿರ್ಮಾಣ ಮಾಡಲು ಏಕೆ ಯಶಸ್ವಿಯಾಗಲಿಲ್ಲ? ಖಾಸಗಿ ಅಂದರೆ ಅವರ ಹೆಸರಿನಲ್ಲಿ ಹಣವನ್ನು ಏಕೆ ಇಟ್ಟರು?

**ಶ್ರೀ ಎನ್ ನಾಗರಾಜ (ಎಂ.ಟಿ.ಬಿ):-** ಖಾಸಗಿಯಾಗಿ ಇಟ್ಟಿರುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆಃ 1045**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಗೋವಿಂದರಾಜುಃ-** ಮಾನ್ಯ ಸಭಾಪತಿಯವರೇ, ಕೋಲಾರ ನಗರದಲ್ಲಿರುವ APMC ಮಾರುಕಟ್ಟೆಯ ವಿಸ್ತೀರ್ಣದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಉತ್ತರದಲ್ಲಿ ೧೮ ಎಕರೆ ೩೧ ಗುಂಟೆ ಎಂದು ಹೇಳಿದ್ದಾರೆ. ೧೮ ಎಕರೆ ೩೧ ಗುಂಟೆ ಜಮೀನು original ಆಗಿ allot ಆಗಿರುವುದು ನಿಜ. ಅದರಲ್ಲಿ ೪ ಎಕರೆ ಜಮೀನನ್ನು Karnataka Marketing Federation ಗೆ ೧೯೯೧ರಲ್ಲಿ ಕಡಿಮೆ ಇತ್ತೆಂದು allot ಮಾಡಿದ್ದಾರೆ. ಅದರ ಬಗ್ಗೆ ನಂತರ ಹೇಳುತ್ತೇನೆ. ಈ APMC ಮಾರುಕಟ್ಟೆ ತುಂಬಾ ಚಿಕ್ಕದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಟೊಮೊಟೋ ಸುಮಾರು ೪೦೦೦೦ ಕ್ವಿಂಟಾಲ್‌ಗೂ ಹೆಚ್ಚು ಮಾರುಕಟ್ಟೆಗೆ ಬರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಮುಂದುವರೆದು ಈ ಮಾರುಕಟ್ಟೆಯಲ್ಲಿ ವ್ಯವಹರಿಸುವುದರಿಂದ loading, unloading ಹಾಗೂ grading ಗೆ ಸಮಸ್ಯೆ ಆಗಿರುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಅದಕ್ಕೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ನಾನು ಕೇಳಿದ್ದೇನೆ. ಕೋಲಾರದ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ APMC Yard ನಿಂದ ಸುಮಾರು ಒಂದೂವರೆ ಕಿ.ಮೀ ಮುಂದೆ ಅರಣ್ಯ ಭೂಮಿ ಇದ್ದು, ಈ ಅರಣ್ಯ ಭೂಮಿಯನ್ನು ಹೊಸಪೇಟೆಯಲ್ಲಿನ ಯಾವುದೋ ಒಂದು ಜಾಗಕ್ಕೆ ಈ ಜಾಗವನ್ನು compensation ಆಗಿ allot ಮಾಡಲಾಗಿತ್ತು. ಅದರಲ್ಲಿ ೩೦ ಎಕರೆ ಜಾಗವನ್ನು ಗುರುತಿಸಿ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯಾಧಿಕಾರಿಗಳ ಸಮಕ್ಷಮದಲ್ಲಿ ಆ ಜಾಗವನ್ನು APMC ಗೆ ಕೊಡಲು ಪತ್ರ ವ್ಯವಹಾರ ಮಾಡಿದ್ದೇವೆ. ದಿನಾಂಕ ೩೦-೭-೨೦೨೧ರಲ್ಲಿ ಇದಕ್ಕೆ ಪತ್ರವನ್ನು ಬರೆದಿದ್ದು, ಈವರೆಗೂ ಅರಣ್ಯ ಇಲಾಖೆಯವರು ಅವರಿಗೆ ಬೇಕಾದಂತಹ query ಗಳನ್ನೇ ಹಾಕಿಕೊಂಡಿದ್ದಾರೆ.

(ಮುಂದು)

(848)/21.09.2021/12.10/ಹೆಚ್‌ವಿ:ಬಿಎನ್‌ಎಸ್

( ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದರಾಜು (ಮುಂದು...):-**

ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ನನ್ನ ಮನವಿ ಏನೆಂದರೆ, ಅರಣ್ಯ ಸಚಿವರು ಮತ್ತು ಸಹಕಾರ ಸಚಿವರು ಇಬ್ಬರು ಸೇರಿ ಜಂಟಿಯಾಗಿ ಚರ್ಚೆ ಮಾಡಿ ಈ ಜಾಗದ ವರ್ಗಾವಣೆಗೆ ಸಂಬಂಧಪಟ್ಟಂತೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಾನು ನಿನ್ನೆಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಇದರ ಬಗ್ಗೆ ಮಾನ್ಯ ಅರಣ್ಯ ಸಚಿವರಿಗೊಂದು ಮನವಿಯನ್ನು ಕೊಟ್ಟಿದ್ದೇನೆ. ತುರ್ತಾಗಿ 18 ಎಕರೆ ಜಾಗವನ್ನು ಎ.ಪಿ.ಎಂ.ಸಿ.ಗೆ ಕೊಟ್ಟರೇ ನಾಯಕರಹಳ್ಳಿಯಲ್ಲಿರುವ ಸುಮಾರು 45 ಎಕರೆ ಜಾಗವನ್ನು ಕಂದಾಯ ಇಲಾಖೆಗೆ ಅದಕ್ಕೆ ಬದಲಿಯಾಗಿ ಕೊಡಲಾಗುತ್ತದೆ ಎನ್ನುವುದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ಅರಣ್ಯ ಸಚಿವರು ಮತ್ತು ಕಂದಾಯ ಸಚಿವರು ಜಂಟಿಯಾಗಿ ಒಂದು ಸಭೆ ನಡೆಸಿ ಶೀಘ್ರವೇ ಎ.ಪಿ.ಎಂ.ಸಿ.ಗೆ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ನಾನು ಕೋಲಾರ ಜಿಲ್ಲೆಗೆ ಭೇಟಿ ನೀಡಿದ್ದಂತಹ ಸಂದರ್ಭದಲ್ಲಿ ಎರಡು ಮೂರು ಬಾರಿ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅಷ್ಟೇ ಅಲ್ಲದೇ 3-4 ಬಾರಿ ನನ್ನ ಕಛೇರಿಗೂ ಬಂದು ಇದರ ಬಗ್ಗೆ ಚರ್ಚೆ ನಡೆಸಿದ್ದಾರೆ. ನಾನು ಎ.ಪಿ.ಎಂ.ಸಿ. ನಿರ್ದೇಶಕರೊಂದಿಗೆ ಸಭೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿದ್ದೇನೆ. ಅರಣ್ಯ ಇಲಾಖೆಯವರು ನಮಗೆ ಭೂಮಿಯನ್ನು ನೀಡಿದರೆ, ಅದರ ಎರಡು ಪಟ್ಟು ಕಂದಾಯ ಭೂಮಿಯನ್ನು ನಾವು ಅವರಿಗೆ ವಾಪಸ್ಸು ಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಕೋಲಾರ ನಗರದಲ್ಲಿರುವ ಎ.ಪಿ.ಎಂ.ಸಿ. ಮಾರುಕಟ್ಟೆ ಸುಮಾರು 18 ಎಕರೆ ವಿಸ್ತೀರ್ಣದಲ್ಲಿ ಇದೆ. ಈ ಮಾರುಕಟ್ಟೆಗೆ ಜೂನ್‌ನಿಂದ ಡಿಸೆಂಬರ್‌ವರೆಗಿನ ಸುಗ್ಗಿ ಸಮಯದಲ್ಲಿ ಸುಮಾರು 40 ಸಾವಿರ ಕ್ವಿಂಟಾಲ್‌ನಷ್ಟು ಟೊಮೊಟೋ ಬರುತ್ತದೆ. ನೂರಾರು ಟ್ರಕ್‌ಗಳ ಓಡಾಟ, ರೈತರು ಮತ್ತು ಹಮಾಲರು ಹೀಗೆ 3 ಸಾವಿರಕ್ಕೂ ಹೆಚ್ಚು ಜನರು ಓಡಾಡುವುದರಿಂದ ಅವರಿಗೆ ಸ್ಥಳಾವಕಾಶ ಸಾಕಾಗದೇ ಸಮಸ್ಯೆಯುಂಟಾಗಿದೆ. ನಿನ್ನೆಯ ದಿವಸ ಕಂದಾಯ ಇಲಾಖೆಯ ಕಾರ್ಯದರ್ಶಿಗಳನ್ನು ನನ್ನ ಛೇಂಬರ್‌ಗೆ ಕರೆಯಿಸಿಕೊಂಡು ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇನೆ. ಅಧಿವೇಶನ ಮುಗಿದ ಮೇಲೆ ಮಾನ್ಯ ಅರಣ್ಯ ಸಚಿವರಿಗೆ ಈ ಮಾಹಿತಿಯನ್ನು ಕೊಟ್ಟು, ಮಾನ್ಯ ಅರಣ್ಯ ಸಚಿವರು, ಮಾನ್ಯ ಕಂದಾಯ ಸಚಿವರು ಮತ್ತು ನಾನು ಮೂರು ಜನರು ಸೇರಿ ಮಾನ್ಯ ಸದಸ್ಯರನ್ನು ಕರೆಯಿಸಿ ಒಂದು ಸಭೆಯನ್ನು ನಡೆಸುತ್ತೇವೆ. ಅರಣ್ಯ ಇಲಾಖೆಗೆ ನೀಡಲು ಜಿಲ್ಲಾಧಿಕಾರಿಗಳು ಗುರುತುಪಡಿಸಿರುವ ಜಾಗವನ್ನು ಕೊಟ್ಟರೇ, ಇಡೀ ಭಾರತದಲ್ಲಿಯೇ ನಂಬರ್ ಒನ್ ಟೊಮೊಟೊ ಮಾರುಕಟ್ಟೆಯನ್ನಾಗಿ ಮಾರ್ಪಡಿಸುವುದಕ್ಕೆ ಕೋಲಾರ ಜಿಲ್ಲೆಯ ಜನರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಸಕ್ತಿಯನ್ನು ವಹಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜುರವರು ನಿರಂತರವಾಗಿ ಈ ವಿಚಾರದ ಬೆನ್ನು ಹತ್ತಿದ್ದಾರೆ. ಆ ಕಾರಣದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಈ ಪ್ರಸ್ತಾವನೆಯನ್ನು ಕಂದಾಯ ಇಲಾಖೆಗೆ ಕಳುಹಿಸಿಕೊಡುತ್ತಿದ್ದಾರೆ. ಅಧಿವೇಶನ ಮುಗಿದ ಕೂಡಲೇ ನಾವು ಮೂರೂ ಜನ ಸಚಿವರು ಸೇರಿ ಸಭೆ ನಡೆಸಿ ಈ ಜಾಗವನ್ನು ಕೊಡಿಸುವಂತಹ ವ್ಯವಸ್ಥೆ ಮಾಡಲಾಗುತ್ತದೆ.

**ಶ್ರೀ ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಎ.ಪಿ.ಎಂ.ಸಿ.ಗೆ ಕೊಡಬೇಕಾಗಿರುವ 18 ಎಕರೆಗೆ ಬದಲಾಗಿ 45 ಎಕರೆ ಕಂದಾಯ ಜಮೀನನ್ನು ಅರಣ್ಯ ಇಲಾಖೆಯವರಿಗೆ ಕೊಡಲು ಈಗಾಗಲೇ ಸ್ಕೆಚ್ ಮಾಡಿ ಕಳುಹಿಸಿಕೊಡಲಾಗಿದೆ. ಇದಲ್ಲದೇ ಕರ್ನಾಟಕ ಮಾರುಕಟ್ಟೆ ಫೆಡರೇಶನ್‌ಗೆ ಬಹಳ ಹಿಂದೆಯೇ 4 ಎಕರೆ ಭೂಮಿಯನ್ನು ಕೇವಲ 20 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದರು. ಇದರ ಬಗ್ಗೆ ನನ್ನ ಬಳಿ ಸಾಕಷ್ಟು ಮಾಹಿತಿ ಲಭ್ಯವಿರುವುದರಿಂದ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ತಾವು ಅರ್ಧಗಂಟೆ ಕಾಲಾವಧಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** **ಈ ವಿಚಾರವನ್ನು ಅರ್ಧ ಗಂಟೆ ಕಾಲಾವಧಿಗೆ ಪರಿವರ್ತಿಸುವ ಬಗ್ಗೆ ನನಗೊಂದು ಪತ್ರವನ್ನು ಬರೆದು ಕಳುಹಿಸಿಕೊಡಿ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1126**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿವರವಾಗಿರುವ ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ರಾಜ್ಯದಲ್ಲಿರುವ ಒಟ್ಟು 87 ಸಕ್ಕರೆ ಕಾರ್ಖಾನೆಗಳ ಪೈಕಿ 55 ಖಾಸಗಿ ವಲಯದ ಸಕ್ಕರೆ ಕಾರ್ಖಾನೆಗಳು ಮತ್ತು ಕೇವಲ 2 ಸರ್ಕಾರಿ ವಲಯದ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಇದಕ್ಕೆ ಕಾರಣವೇನು ಎನ್ನುವುದು ನನ್ನ ಉಪ ಪ್ರಶ್ನೆಯಾಗಿದೆ. ಈ ಅಧಿವೇಶನದಲ್ಲಿ ಮೊನ್ನೆಯಷ್ಟೇ ಮಂಡ್ಯ ಸಕ್ಕರೆ ಕಾರ್ಖಾನೆಯ ಬಗ್ಗೆ ಸುದೀರ್ಘವಾದ ಚರ್ಚೆ ನಡೆದಿತ್ತು. ಮಾನ್ಯ ಸಚಿವರು ಈ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವುದಕ್ಕೆ ಸೂಕ್ತ ಕ್ರಮಗಳನ್ನು ಜರುಗಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಶಂಕರ ಬ.ಪಾಟೀಲ.ಮುನೇನಕೊಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಈಗಾಗಲೇ ಸವಿಸ್ತಾರವಾದ ಉತ್ತರವನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಉಪ ಪ್ರಶ್ನೆಯ ಬಗ್ಗೆ ಗಮನಹರಿಸಲಾಗುತ್ತದೆ. ಮಂಡ್ಯ ಸಕ್ಕರೆ ಕಾರ್ಖಾನೆ ಮಾತ್ರವಲ್ಲ ರಾಜ್ಯದಲ್ಲಿ ಈ ರೀತಿ ಸಮಸ್ಯೆಗೊಳಗಾಗಿರುವ ಕಾರ್ಖಾನೆಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1089**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಸನ್ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಎಂ-ಸ್ಯಾಂಡ್ ಘಟಕಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು, ' ಎಂ ಸ್ಯಾಂಡ್‌ನ ಕೊರತೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಮುಂದುವರೆದು ಪ್ರಸ್ತುತ ಕೊಡುಗು ಜಿಲ್ಲೆಯಲ್ಲಿ 4 ಎಂ-ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಕೊಡುಗು ಜಿಲ್ಲೆಯಲ್ಲಿ ಅಧಿಕೃತವಾಗಿ 2 ಎಂ-ಸ್ಯಾಂಡ್ ಘಟಕಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಹೂಳು ಎತ್ತುವ ವಿಚಾರದ ಬಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಬ್ಲಾಕ್ ಅನ್ನು ಗುರುತು ಮಾಡುವಂತಹ ಸಂದರ್ಭದಲ್ಲಿ ಬೇರೆ ಜಿಲ್ಲೆಗಳಿಗಿಂತ ಪ್ರತ್ಯೇಕವಾಗಿ ಗುರುತು ಮಾಡಬೇಕಾಗುತ್ತದೆ. ಸರ್ಕಾರದ ಸುತ್ತೋಲೆ ಮತ್ತು ನಿಯಮಗಳ ಪ್ರಕಾರ ಅಲ್ಲಿ ಮರಳಿನ ಬ್ಲಾಕ್‌ಗಳನ್ನು ಗುರುತು ಮಾಡಿ ಅಧಿಕೃತವಾಗಿ ಮರಳು ತೆಗೆಯುವ ರೀತಿಯಲ್ಲಿ ನೋಡಿಕೊಳ್ಳಬೇಕಾಗಿದೆ. ಏಕೆಂದರೆ ಅನಧಿಕೃತವಾಗಿ ಮರಳು ಕಳ್ಳಸಾಗಾಣಿಕೆ ಆಗುತ್ತಿದೆ. ಆಶ್ರಯ ಮನೆ ಕಟ್ಟುವುದಕ್ಕೆ ಕೆಲವರು ಪಿಕ್‌ಅಪ್‌ನಲ್ಲಿ ಮರಳು ತೆಗೆದುಕೊಂಡು ಹೋದರೂ ಸಹ ಅಧಿಕಾರಿಗಳು ಅದನ್ನು ಹಿಡಿದು ಅದಕ್ಕೆ ದಂಡವನ್ನು ವಿಧಿಸುತ್ತಾರೆ ಮತ್ತು ಗಾಡಿಯನ್ನು ಸೀಸ್ ಮಾಡುವಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಕಾಳಸಂತೆಯಲ್ಲಿ ಮರಳು ಸಾಗಾಣಿಕೆ ಮಾಡುವುದನ್ನು ತಪ್ಪಿಸುವುದಕ್ಕಾಗಿ ಸರ್ಕಾರವೇ ಎಚ್ಚೆತ್ತುಕೊಂಡು ಅಧಿಕೃತವಾಗಿ ಮರಳು ತೆಗೆಯಲು ಬ್ಲಾಕ್‌ಗಳನ್ನು ಗುರುತು ಮಾಡಬೇಕಾಗಿದೆ. ಪಿಕ್‌ಅಪ್‌ನಲ್ಲಿ ಮರಳು ತೆಗೆದುಕೊಂಡು ಹೋಗುವವರನ್ನು ಹಿಡಿದರೆ ನಮಗೂ ಸಹ ತೊಂದರೆಯಾಗುತ್ತದೆ. ಎಲ್ಲರಿಗೂ ಸರಾಗವಾಗಿ ಮರಳು ದೊರೆಯುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆ ಭೌಗೋಳಿಕವಾಗಿ ಸೂಕ್ಷ್ಮ ಪರಿಸರವನ್ನು ಹೊಂದಿರುವುದರಿಂದ ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದಾಗ ಅಲ್ಲಿ ಬಹಳಷ್ಟು ಕ್ರಷರ್‌ಗಳು ಇಲ್ಲ. ಕೇವಲ 04 ಕ್ರಷರ್‌ಗಳು ಮಾತ್ರ ಕೆಲಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿವೆ. ಮಾನ್ಯ ಸದಸ್ಯರು ಹೇಳಿದಂತೆ ಅದರಲ್ಲಿ 02 ಕ್ರಷರ್‌ಗಳು ಮಾತ್ರ ಚಾಲ್ತಿಯಲ್ಲಿವೆ. 2020 ಮತ್ತು 2021ನೇ ಸಾಲಿನಲ್ಲಿ ಎಂ-ಸ್ಯಾಂಡ್ ಉತ್ಪಾದಿಸಲು ಸ್ಟೋನ್ ಕ್ರಷರ್ ಘಟಕವನ್ನು ಸ್ಥಾಪನೆ ಮಾಡಲು ಅನುಮತಿಯನ್ನು ಕೋರಿ 03 ಅರ್ಜಿಗಳು ಬಂದಿವೆ. ಜಿಲ್ಲಾ ಪ್ರಾಧಿಕಾರದ ವತಿಯಿಂದ ಅವರಿಗೆ ಬಿ ಫಾರಂ ಅನ್ನು ಕೊಟ್ಟಿದ್ದೇವೆ ಮತ್ತು ಅವರಿಗೆ ಬೇಕಾದ ಅನುಕೂಲತೆಗಳನ್ನು ಮಾಡಿ ಕೊಟ್ಟಿದ್ದೇವೆ. ಕೊಡುಗು ಜಿಲ್ಲೆಯಲ್ಲಿರುವ ಎಂ-ಸ್ಯಾಂಡ್ ಘಟಕಗಳು ಪ್ರತಿ ವರ್ಷ ಸುಮಾರು 6250 ಮೆಟ್ರಿಕ್ ಟನ್‌ಗಳಷ್ಟು ಮರಳನ್ನು ಉತ್ಪಾದನೆ ಮಾಡುತ್ತವೆ. ಪ್ರಸ್ತುತ 04 ಕ್ರಷರ್‌ಗಳ ಪೈಕಿ 02 ಕ್ರಷರ್‌ಗಳು ಮಾತ್ರ ಚಾಲ್ತಿಯಲ್ಲಿವೆ ಇವುಗಳ ಜೊತೆಗೆ ಇನ್ನೂ 03 ಕ್ರಷರ್‌ಗಳಿಗೆ ಅನುಮತಿಯನ್ನು ನೀಡಿದರೆ, ಹೆಚ್ಚು ಮರಳು ಉತ್ಪಾದನೆಯಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಅಲ್ಲಿ ಸ್ವಾಭಾವಿಕವಾಗಿ ಸಿಗುವಂತಹ ಮರಳಿಗಾಗಿ ಸರ್ಕಾರ ಈಗಾಗಲೇ 17 ನದಿ ಮರಳು ಬ್ಲಾಕ್‌ಗಳನ್ನು ಗುರುತಿಸಿ, ಅವುಗಳಿಗೆ ಪರವಾನಗಿಯನ್ನು ಸಹ ನೀಡಲಾಗಿದೆ. ಇದರ ಜೊತೆಗೆ 68650 ಮೆಟ್ರಿಕ್ ಟನ್ ಪ್ರಮಾಣದ ನದಿ ಮರಳನ್ನು ತೆಗೆಯಲು ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಅನುಮತಿಯನ್ನು ಸಹ ಪಡೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರು ಪ್ರತಿದಿನ ಎಷ್ಟು ಮರಳು ಲಭ್ಯವಾಗುತ್ತದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದರು. ಪ್ರತಿದಿನ ಸುಮಾರು 150 ಮೆಟ್ರಿಕ್ ಟನ್ ಮರಳು ಸಿಗುತ್ತದೆ. ಇದರ ಜೊತೆಗೆ ಬೇರೆ ಜಿಲ್ಲೆಗಳಾದ ಹಾಸನ, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಿಂದ ಕೊಡುಗು ಜಿಲ್ಲೆಗೆ ಸುಮಾರು 1,02,185 ಮೆಟ್ರಿಕ್ ಟನ್‌ನಷ್ಟು ಪ್ರಮಾಣದ ಎಂ-ಸ್ಯಾಂಡ್ ಕೊಡಗಿಗೆ ಬರುತ್ತದೆ. ಸ್ಥಳೀಯ ಕ್ರಷರ್‌ಗಳಿಂದ 75 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಮರಳು ದೊರೆಯುತ್ತದೆ. ಬೇರೆ ಜಿಲ್ಲೆಗಳಿಂದ ಸುಮಾರು 1,02,185 ಮೆಟ್ರಿಕ್ ಟನ್‌ನಷ್ಟು ಪ್ರಮಾಣದ ಎಂ-ಸ್ಯಾಂಡ್ ಕೊಡಗಿಗೆ ಬರುತ್ತದೆ. ನದಿಮೂಲಗಳಿಂದ 68,650 ಮೆಟ್ರಿಕ್ ಟನ್ ಮರಳು ಅಲ್ಲಿಗೆ ಬರುತ್ತದೆ. ಒಟ್ಟಾರೆಯಾಗಿ 2,43,835 ಮೆಟ್ರಿಕ್ ಟನ್‌ಗಳು ಎಂ-ಸ್ಯಾಂಡ್ ಕೊಡುಗು ಜಿಲ್ಲೆಗೆ ಲಭ್ಯವಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಕೊಡುಗು ಜಿಲ್ಲೆಯಲ್ಲಿ ಸ್ವಾಭಾವಿಕವಾಗಿ ಸಿಗುವಂತಹ ಮರಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ, ಇದನ್ನು ಸರಿಪಡಿಸಿದರೆ ಸರ್ಕಾರಕ್ಕೆ ಹಣ ಬರುತ್ತದೆ ಎನ್ನುವ ವಿಚಾರವನ್ನು ಶ್ರೀಮತಿ ವೀಣಾ ಅಚ್ಚಯ್ಯನವರು ನಿನ್ನೆಯಿಂದ ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಸನ್ಮಾನ್ಯ ಸಭಾಪತಿಯವರೇ, ಇದಕ್ಕಾಗಿ ಒಂದು ಹೊಸ ಮರಳು ನೀತಿಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ಆ ಚೌಕಟ್ಟಿನಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಸನ್ಮಾನ್ಯ ಸಭಾಪತಿಯವರೇ, ಕೊಡಗಿನಲ್ಲಿ ದೊರೆಯುತ್ತಿರುವ ಮರಳಿನ ಬಗ್ಗೆ ವಿವರವಾಗಿ ಬರೆದುಕೊಂಡು ಬಂದಿದ್ದೇನೆ ಅದನ್ನು ಮಾನ್ಯ ಸಚಿವರಿಗೆ ತಮ್ಮ ಮೂಲಕ ನೀಡುತ್ತಿದ್ದೇನೆ.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಕೊಡಿ. ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(849) 21.9.2021 12.20 ಪಿಕೆ:ಬಿಎನ್‌ಎಸ್

**ಪ್ರಶ್ನೆ ಸಂಖ್ಯೆ: 1019**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಿಗೆ ನಾನು ನೇರವಾಗಿ ಎರಡು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಕಚೇರಿ ಬೆಂಗಳೂರಿನಲ್ಲಿದೆ. ಅದನ್ನು ಸ್ಥಳಾಂತರ ಮಾಡಲಾಗುತ್ತದೆಯೇ ಎಂದು ಕೇಳಿರುವ ಪ್ರಶ್ನೆಗೆ, ಹೌದು, ಬೆಳಗಾವಿಗೆ ಸ್ಥಳಾಂತರ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ. ಇನ್ನೊಂದು, ಕಬ್ಬು ಸಂಶೋಧನಾ ಕೇಂದ್ರ ಏನು ಡಾ: ಸರ್.ಎಂ. ವಿಶ್ವೇಶ್ವರಯ್ಯ ಅವರ ಹೆಸರಿನಲ್ಲಿದೆಯೋ ಅದು ಮಂಡ್ಯದಲ್ಲಿದೆ. ಅದನ್ನೂ ಕೂಡ ಬೆಳಗಾವಿಗೆ, ಅಲ್ಲಿರುವ ಸಂಶೋಧನಾ ಕೇಂದ್ರಕ್ಕೆ ವಿಲೀನ ಮಾಡುವ ನಿರ್ಣಯ ತೆಗೆದುಕೊಂಡಿದ್ದೇವೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಸಕ್ಕರೆ ನಿರ್ದೇಶಕರ ಕಚೇರಿ ಇವತ್ತು ಬೆಂಗಳೂರಿನಲ್ಲಿದೆ. ಅದಕ್ಕೆ ಹೊಂದುಕೊಂಡಂತಹ ಹಣಕಾಸು ಇಲಾಖೆ, ಕೃಷಿ ಇಲಾಖೆ, ಅಬಕಾರಿ ಇಲಾಖೆ, ತೂಕ ಅಳತೆ ಇಲಾಖೆ ಮತ್ತು ಇಂಧನ ಇಲಾಖೆಗಳು ಬೆಂಗಳೂರಿನಲ್ಲಿವೆ. ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಇಲಾಖೆಗಳು ಬೆಂಗಳೂರಿನಲ್ಲಿವೆ. ಇದೊಂದು ನಿರ್ದೇಶಕರ ಕಚೇರಿಯನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಏನು ಮಾಡುತ್ತೀರಿ? ಅವರು ದಿನಾಗಲೂ ಅಲ್ಲಿಂದ ಬೆಂಗಳೂರಿಗೆ ಬರಬೇಕಾಗುತ್ತದೆ. ಒಂದು ಹೆಚ್ಚುವರಿ ನಿರ್ದೇಶಕರ ಹುದ್ದೆಯನ್ನು ಕೊಟ್ಟು ಬೆಳಗಾವಿಯಲ್ಲಿ ಹೆಚ್ಚುವರಿ ನಿರ್ದೇಶಕರ ಕಚೇರಿ ಮಾಡಿ ಕೊಡಿ. ಅದಕ್ಕೆ ನಮ್ಮ ಅಡ್ಡಿ ಇಲ್ಲ. ಎಲ್ಲಾ ಇಲಾಖೆಗಳು ಇಲ್ಲೇ ಇರುವುದರಿಂದ ಇಲ್ಲಿಯೇ ನಿರ್ದೇಶಕರ ಕಚೇರಿ ಇರಲಿ; ಬೆಳಗಾವಿಗೆ ಹೆಚ್ಚುವರಿ ನಿರ್ದೇಶಕರ ಕಚೇರಿಯನ್ನು ಕೊಡಿ.

ಬಹಳ ವರ್ಷಗಳಿಂದ ಸರ್.ಎಂ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಸಂಶೋಧನ ಕೇಂದ್ರ ಮಂಡ್ಯ ಜಿಲ್ಲೆಯಲ್ಲಿದೆ. ಬೆಳಗಾವಿಯಲ್ಲೂ ಒಂದಿದೆ. ಇದನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಏಕೆ ವಿಲೀನ ಮಾಡುತ್ತೀರಿ? ನನಗೆ ಅರ್ಥವಾಗುತ್ತಿಲ್ಲ. ಇಲ್ಲೂ 17-18 ಸಕ್ಕರೆ ಕಾರ್ಖಾನೆಗಳಿವೆ. ಒಂದೇ ಕಡೆ ಸಂಶೋಧನಾ ಕೇಂದ್ರವನ್ನು ಮಾಡಿದರೆ, ಹೊಸ ತಳಿಗಳನ್ನು ಹೇಗೆ ಮಾಡುಬೇಕು? ಅದನ್ನು ರೈತರಿಗೆ ಹೇಗೆ ಪರಿಚಯ ಮಾಡಿಕೊಡಬೇಕು? ಮುಖ್ಯಮಂತ್ರಿಗಳ ಜೊತೆ ನಮ್ಮ ನಿಯೋಗ ಭೇಟಿ ಮಾಡಿದಾಗ, ಅದನ್ನು ಇಲ್ಲೇ ಉಳಿಸಲಿಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಈಗ ಅದನ್ನು ಪ್ರಕಟ ಮಾಡಬೇಕು. ಮಾನ್ಯ ಸಭಾಪತಿಗಳೆ, ಕಳೆದ

15 ದಿನಗಳಿಂದ ಜನ ಧರಣಿ ಕುಳಿತುಕೊಂಡಿದ್ದಾರೆ. ಮೈಶುಗರ್ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಜವಾಬ್ದಾರಿಯಲ್ಲಿ ನಡೆಸಬೇಕು, ಸಂಶೋಧನಾ ಕೇಂದ್ರವನ್ನು ಅಲ್ಲೇ ಉಳಿಸಬೇಕು, ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಲ್ಲಿಯೇ ಉಳಿಸಿ ಬೆಳಗಾವಿಯಲ್ಲಿ ಹೆಚ್ಚುವರಿ ನಿರ್ದೇಶಕರ ಕಚೇರಿ ಆಗಲಿ ಎಂದು ದೊಡ್ಡ ಪ್ರಮಾಣದಲ್ಲಿ ಚಳುವಳಿ ನಡೆಯುತ್ತಿದೆ. ಪ್ರತಿನಿತ್ಯ ಸಾವಿರಾರು ಜನ ರೈತರು ಬರುತ್ತಿದ್ದಾರೆ. ಮುಖ್ಯಮಂತ್ರಿಗಳು ಹೇಳಿದ ಹಾಗೆ ನಮಗೆ ಮಾತು ಕೊಟ್ಟು, ಆ ಸಂಶೋದನಾ ಕೇಂದ್ರ ಅಲ್ಲೇ ಉಳ್ಳಿಯುವ ಹಾಗೆ ಮತ್ತು ನಿರ್ದೇಶಕರ ಕಚೇರಿ ಇಲ್ಲೇ ಉಳಿಯುವಂತಾಗಬೇಕು.

**ಶ್ರೀ ಶಂಕರ್ ಬ.ಪಾಟೀಲ ಮುನೇನಕೊಪ್ಪ**:- ಮಾನ್ಯ ಸಭಾಪತಿಗಳೆ, ಈಗಾಗಲೇ ನಿರ್ದೇಶಕರ ಕಚೇರಿಯ ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಒಬ್ಬರು ದಾವೆ ಹೂಡಿದ್ದಾರೆ. ಈ ನಿಟ್ಟಿನಲ್ಲಿ ಏನು ತೀರ್ಮಾನ ಬರುತ್ತದೆ ಎನ್ನುವುದನ್ನು ನೋಡಿ ಮುಂದುವರೆಯುತ್ತೇವೆ. ಎಸ್. ನಿಜಲಿಂಗಪ್ಪ ಸಕ್ಕರೆ ಕಾರ್ಖಾನೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಸಂಶೋಧನಾ ಕೇಂದ್ರವನ್ನು ವಿಲೀನಗೊಳಿಸುವ ಕ್ರಮ ಈಗಾಗಲೇ ಆಗಿ ಹೋಗಿದೆ. ಯಾವುದೇ ರೀತಿಯಲ್ಲಿ ರೈತನಿಗೆ ಸಮಸ್ಯೆ ಆಗದ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮಂಡ್ಯ ಜಿಲ್ಲೆ ಇರಬಹುದು ಅಥವಾ ಉತ್ತರ ಕರ್ನಾಟಕ ಭಾಗ ಇರಬಹುದು. ಯಾವುದೇ ಕಚೇರಿಗಳು ಸ್ಥಳಾಂತರವಾದರೆ ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ. ಮಂಡ್ಯ ಜಿಲ್ಲೆಯ ಯಾವುದೇ ಕಬ್ಬು ಬೆಳೆಯುವ ರೈತರಿಗೆ ಸಮಸ್ಯೆ ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕು. ಮಂಡ್ಯದಲ್ಲಿ ಒಂದು ಸಂಶೋಧನಾ ಕೇಂದ್ರ ಇದೆ, ಬೆಳಗಾವಿಯಲ್ಲಿ ಒಂದಿದೆ.

**ಸಭಾಪತಿಯವರು:-** ಇದು ಸ್ವಲ್ಪ ಗೊಂದಲದ ವಿಷಯವಾಗಿದೆ. ಇದು ಮುಗಿದ ಮೇಲೆ ನಿಮ್ಮನ್ನು ಮತ್ತು ಮಾನ್ಯ ಸಚಿವರನ್ನು ನನ್ನ ಚೇಂಬರ್‌ನಲ್ಲಿ ಕರೆಸುತ್ತೇನೆ. ಅಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನ ಮಾಡಬಹುದು.

**ಶ್ರೀ ಶಂಕರ್ ಬ.ಪಾಟೀಲ ಮುನೇನಕೊಪ್ಪ**:- ಖಂಡಿತವಾಗಿ ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ. ಶ್ರೀಕಂಠೇಗೌಡ:**- ಮಾನ್ಯ ಸಭಾಪತಿಯವರ ಕಚೇರಿಯಲ್ಲಿ ಚರ್ಚೆ ಮಾಡಿ ನಮಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕು. ಏಕೆಂದರೆ ಜಿಲ್ಲೆಯ ಜನ ದೊಡ್ಡ ಪ್ರಮಾಣದಲ್ಲಿ ಗಲಾಟೆ ಮಾಡುತ್ತಿದ್ದಾರೆ. ದಯವಿಟ್ಟು ನ್ಯಾಯ ಕೊಡಿಸುವ ಕೆಲಸ ಆಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ 21ನೇ ಸೆಪ್ಟೆಂಬರ್ 2021ರ ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 121 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

(ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, 121 ಪ್ರಶ್ನೆಗಳಿಗೆ ಕೇವಲ 65 ಉತ್ತರಗಳನ್ನು ಮಾತ್ರ ಮಂಡಿಸುತ್ತಿದ್ದೀರಿ. ಇದೇರೀತಿ ಇತರ ದಿನಗಳಿಗೆ ಸಂಬಂಧಪಟ್ಟಂತೆ ಭಾಗಶಃ ಉತ್ತರಗಳನ್ನು ಮಂಡಿಸುವುದು ಬಾಕಿ ಉಳಿಯುತ್ತಿದೆ. ಅಧಿವೇಶನ ಮುಗಿಯುವುದರೊಳಗಾಗಿ ಎಲ್ಲಾ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಒದಗಿಸಿ ಕೊಡುವ ವ್ಯವಸ್ಥೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಒದಗಿಸಿ ಕೊಡುವ ವ್ಯವಸ್ಥೆ ಮಾಡುತ್ತೇನೆ.

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ವಿಷಯ: ಕೋವಿಡ್-19 ವಾರಿಯರ್ಸ್‌ಗಳಾಗಿ ಕಾರ್ಯನಿರ್ವಹಿಸಿ ಮೃತಪಟ್ಟವರ ಅವಲಂಬಿತರಿಗೆ ಸರ್ಕಾರದ ಘೋಷಣೆಯಂತೆ ಪರಿಹಾರ ನೀಡುವ ಬಗ್ಗೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಕೋವಿಡ್ ಸಾಂಕ್ರಾಮಿಕ ರೋಗದಿಂದ ಇದುವರೆವಿಗೂ ತಂದೆ-ತಾಯಿ, ಪೋಷಕರನ್ನು ಕಳೆದುಕೊಂಡು ಅನಾಥ ಮಕ್ಕಳು, ಅವಲಂಬಿತರನ್ನು ಕಳೆದುಕೊಂಡ ವಿಶೇಷ ಚೇತನರು ಹಾಗೂ ವಯೋವೃದ್ಧರು ಶೋಚನೀಯ ಬದುಕನ್ನು ಸಾಗಿಸುತ್ತಿದ್ದಾರೆ. ತುತ್ತು ಊಟಕ್ಕೂ ಪರದಾಡುವಂತಾಗಿದೆ. ಸೂರಿಲ್ಲದೇ ಬೇರೊಬ್ಬರನ್ನು ಅವಲಂಬಿಸುವಂತಾಗಿದೆ. ಅವರ ಬಾಳು ಚಿಂತಾಜನಕವಾಗಿದೆ. ಅವಲಂಬಿತರನ್ನು ಕಳೆದುಕೊಂಡು, ಮಾನಸಿಕವಾಗಿ ಚಿಂತೆಗೀಡಾಗಿದ್ದಾರೆ. ವಯೋವೃದ್ಧರಿಗೆ ಆಶ್ರಯದಾತರಿಲ್ಲದೆ ತುಂಬಾ ಕಂಗಾಲಾಗಿದ್ದಾರೆ. ದಿನನಿತ್ಯದ ಔಷಧೋಪಚಾರಗಳಿಗೆ ಹಣವಿಲ್ಲದೇ ಬೇರೆಯವರನ್ನು ಅಂಗಲಾಚುತ್ತಿರುವ ದಯನೀಯ ಸ್ಥಿತಿ ಉಂಟಾಗಿದೆ. ಜೀವನ ಸಾಗಿಸುವುದೇ ದುಸ್ತರವಾಗಿದೆ. ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ದಿನನಿತ್ಯ ಪ್ರಸಾರವಾಗುತ್ತಿದ್ದರೂ ಇವರುಗಳ ಸಂಬಂಧ ಸರ್ಕಾರ ಇದುವರೆವಿಗೂ ಯಾವುದೇ ವಿಶೇಷ ಯೋಜನೆಯನ್ನು ರೂಪಿಸದೇ ಇರುವುದು ತೀರಾ ಶೋಚನೀಯ ಸಂಗತಿ. ಈ ಹಿನ್ನೆಲೆಯಲ್ಲಿ ಕಂದಾಯ ಮತ್ತು ಆರೋಗ್ಯ ಇಲಾಖೆ ಮೂಲಕ ಜಿಲ್ಲಾವಾರು, ಗ್ರಾಮ ಮಟ್ಟದಿಂದ ಸಮೀಕ್ಷೆ ನಡೆಸಿ, ನೈಜ ನಿರಾಶ್ರಿತರನ್ನು ಗುರ್ತಿಸಿ, ಅವರುಗಳಿಗೆ ಸೂಕ್ತ ಶಿಕ್ಷಣ, ಊಟೋಪಚಾರ, ವಸತಿ, ವೈದ್ಯಕೀಯ ಸವಲತ್ತು, ಆರ್ಥಿಕ ನೆರವು ಹಾಗೂ ಇನ್ನಿತರೇ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ವಿಶೇಷ ಯೋಜನೆಯನ್ನು ರೂಪಿಸುವ ಈ ಮೂಲಕ ಕತ್ತಲೆಯ ಬದುಕಿಗೆ ಬೆಳಕಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆದು, ಕೋವಿಡ್ ವಾರಿಯರ್ಸ್‌ಗಳಾಗಿ ಕಾರ್ಯನಿರ್ವಹಿಸಿ, ಮೃತಪಟ್ಟ ಕಾರ್ಯನಿರತ ವೈದ್ಯರು, ವೈದ್ಯಕೀಯೇತರ ಸಿಬ್ಬಂದಿ ಹಾಗೂ ಇತರೇ ಅಧಿಕಾರಿ/ನೌಕರರಿಗೆ ಸರ್ಕಾರದ ಘೋಷಣೆಯಂತೆ ಅವರ ಅವಲಂಬಿತರಿಗೆ ಸೂಕ್ತ ಪರಿಹಾರವನ್ನು ಕೂಡಲೇ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಆ) ವಿಷಯ: ವಾರಾಹಿ ಬಲದಂಡೆ ಕಾಲುವೆ ಯೋಜನೆಯನ್ನು ಮೂಲ ಯೋಜನೆಯ ಕಾಮಗಾರಿಯನ್ನು ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳಿಸುವ ಬಗ್ಗೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):**- ಮಾನ್ಯ ಸಭಾಪತಿಗಳೆ, ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸುತ್ತಿರುವ ವಾರಾಹಿ ನೀರಾವರಿ ಯೋಜನೆಯು 41 ವರ್ಷ ಪೂರೈಸಿದ್ದು, ರೈತರ ವಾರಾಹಿ ನೀರಾವರಿ ಕಾಲುವೆಯಲ್ಲಿ ನೀರು ಹರಿದರೆ ಖಾಸಗಿ ವಿದ್ಯುತ್ ಉತ್ಪಾದನಾ ಕಂಪೆನಿಯವರಿಗೆ ವಿದ್ಯುತ್ ಉತ್ಪಾದನೆಗೆ ನೀರು ಸಾಕಾಗುವುದಿಲ್ಲ. ಆದರೆ ವಿದ್ಯುತ್ ಉತ್ಪಾದನೆಗಾಗಿ ವಾರಾಹಿ ನೀರನ್ನು ಹೊಳೆಗೆ ಹರಿಸಿದರೆ ರೈತರ ಕಾಲುವೆಯಲ್ಲಿ ನೀರು ಹರಿಯದಿರುವ ಕಾರಣದಿಂದ ನೂರೆಂಟು ವಿಘ್ನವನ್ನು ಎದುರಿಸುತ್ತಿದ್ದಾರೆ. ರೈತರಿಗಾಗಿ ಸರಕಾರ ಕೊಟ್ಟ ನೀರು, ನೆಲ, ಡ್ಯಾಮ್‌ಗಳನ್ನು ಸರಕಾರವೇ ಖಾಸಗಿಯವರಿಗೆ ವಿದ್ಯುತ್ ಉತ್ಪಾದನೆಗೆ ನೀಡಿ, ಸರ್ಕಾರವೇ ವಿದ್ಯುತ್ ಖರೀದಿ ಮಾಡುತ್ತಿರುವುದರಿಂದ ಖಾಸಗಿಯವರು ಕೋಟ್ಯಂತರ ರೂಪಾಯಿಗಳ ಲಾಭ ಮಾಡಿಕೊಳ್ಳಲು ವಾರಾಹಿ ಮೂಲ ನೀರಾವರಿ ಯೋಜನೆಯನ್ನೇ ಸರ್ಕಾರ ವಿಳಂಬ ಮಾಡುತ್ತಿರುವುದು ವಿಪರ್ಯಾಸ. ವಾರಾಹಿ ಬಲದಂಡೆ ಕಾಲುವೆ ಹಾದು ಹೋಗುವ ಶಂಕರನಾರಾಯಣ, ಅಂಪಾರು, ಕಾವ್ರಾಡಿ ಮತ್ತು ಹಳ್ನಾಡು ಗ್ರಾಮದಲ್ಲಿನ ಸುರಕ್ಷಿತ ಅರಣ್ಯ ಪ್ರದೇಶ ಮತ್ತು ಡೀಮ್ಡ್ ಫಾರೆಸ್ಟ್‌ಗಳನ್ನು ಬಹಳಷ್ಟು ತಪ್ಪಿಸಿ, ಮೂಲ ಯೋಜನೆಯಷ್ಟೇ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಒದಗಿಸುವ ಡಿ.ಪಿ.ಆರ್ ರಚಿಸಿ ಅನುಮೋದನೆ ದೊರೆತಲ್ಲಿ ಒಂದುವರೆ ವರ್ಷದಲ್ಲಿ ಅನುಷ್ಠಾನಗೊಳಿಸಿ ಪೂರ್ಣಗೊಳಿಸುವ ಭರವಸೆ ಕೊಟ್ಟ ಇಲಾಖೆಯು ಈಗ ಮೀನಾ-ಮೇಷ ಎಣಿಸಿ ಬದಲಾವಣೆ ಮಾಡುತ್ತಿರುವುದು 24 x 7 ಖಾಸಗಿ ವಿದ್ಯುತ್ ಉತ್ಪಾದನೆಯ ಭಾಗವೇ ಆಗಿದೆ. ಆದ್ದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರಿಗಾಗಿ ಯೋಜಿಸಿದ ವಾರಾಹಿ ನೀರಾವರಿ ಯೋಜನೆಯನ್ನು ಒಬ್ಬ ವ್ಯಕ್ತಿಗಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡದೇ ತಯಾರಾಗಿರುವ ವಾರಾಹಿ ಬಲದಂಡೆ ಕಾಲುವೆ ಯೋಜನೆಯ ಡಿ.ಪಿ.ಆರ್ ಗೆ ಅನುಮೋದನೆಯನ್ನು ನೀಡಿ, ಮೂಲ ಯೋಜನೆಯಂತೆ ಬಲದಂಡೆ ಕಾಮಗಾರಿಯನ್ನು ಪ್ರಾರಂಭಿಸಿ, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ಪ್ರಸ್ತಾಪಿಸಲಿಚ್ಛಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)** :- ಮಾನ್ಯ ಸಭಾಪತಿಗಳೆ, ಇದಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಯ ಸಚಿವರಿಂದ ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ಇ) ವಿಷಯ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಸಿಬ್ಬಂದಿ ಮೇಲೆ ಹಲ್ಲೆ ನಡೆಸುತ್ತಿರುವ ಬಗ್ಗೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಪ್ರಧಾನ ಮಂತ್ರಿಗಳ ಜನ್ಮ ದಿನದಂದು (17.9.2021 ) ಬೃಹತ್ ಲಸಿಕಾ ಮೇಳವನ್ನು ಹಮ್ಮಿಕೊಂಡಾಗ ಹುಬ್ಬಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಣಂತಿಕಟ್ಟದಲ್ಲಿ ಎನ್‌ಹೆಚ್‌ಎಂ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಸುರಕ್ಷಾ ಅಧಿಕಾರಿಯಾದ ನಂದಿನಿ ಚುಂಚರವರ ಮೇಲೆ ಹಲ್ಲೆ ಆಗಿರುತ್ತದೆ.

ಹಳೆ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲ್‌ನಲ್ಲಿ ಲಸಿಕಾಕರಣ ಕಾರ್ಯಕ್ರಮ ನಡೆಸುತ್ತಿರುವಾಗ ಸ್ಥಳೀಯ ಮಹಿಳೆ ಅಂಭಿಕಾ ನಾರಾಯಣ ಜರತಾರಘರ್ ಎನ್ನುವ ಮಹಿಳೆ ಒಂದು ಕ್ಷುಲ್ಲಕ ಕಾರಣಕ್ಕಾಗಿ, ಅವಾಚ್ಯವಾಗಿ ಬೈದು ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಮೊಬೈಲ್‌ನಿಂದ ಹೊಡೆದುದರ ಪರಿಣಾಮ ಅವರ ಮೇಲ್ತುಟಿ ಹರಿದು ಬಹು ದೊಡ್ಡ ಗಾಯವಾಗಿ ಮುಖ ಊದಿಕೊಂಡಿರುತ್ತದೆ.

ಹಲ್ಲೆಗೊಳಗಾದ ಸಿಬ್ಬಂದಿಯು ಮಾನಸಿಕವಾಗಿ ಘಾಸಿಗೊಳಗಾಗಿದ್ದು, ಸಿಬ್ಬಂದಿಗೆ ಎರಡು ಮಕ್ಕಳು ಇದ್ದು ಒಂದು ಮಗು ಕೇವಲ 8 ತಿಂಗಳದ್ದಾಗಿದೆ. ಇನ್ನೂ ಹಾಲು ಕುಡಿಯುವ ಪುಟ್ಟ ಕಂದಮ್ಮವಿದ್ದು ಮತ್ತು ಈ ಸಿಬ್ಬಂದಿಯು ಕೋವಿಡ್ ಸಂದರ್ಭದಲ್ಲಿ ತುಂಬು ಗರ್ಭಿಣಿಯಾಗಿದ್ದರೂ ಲೆಕ್ಕಿಸದೇ ಹಾಗೂ ಕುಟುಂಬ ವರ್ಗದವರಿಗೂ ಸೋಂಕು ತಗಲುವ ಭಯ ಇದ್ದರೂ ಒತ್ತಡದಲ್ಲಿಯೂ ಕೂಡ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಹಲ್ಲೆಗೊಳಗಾದ ಸಿಬ್ಬಂದಿಗೆ ಸರ್ಕಾರ ಯಾವರೀತಿ ಸುರಕ್ಷತೆ ನೀಡಿದೆ? ಸದರಿ ಸಿಬ್ಬಂದಿಯ ವೇತನದ ಬಗ್ಗೆ ಹೇಳುವುದಾದರೆ, ಕೇವಲ ರೂ. 10500 ಬಿಟ್ಟರೆ ಯಾವುದೇ ಸೌಲಭ್ಯ ಕೂಡ ಇಲ್ಲದೇ ಇರುವುದು ಅನ್ಯಾಯ ಮತ್ತು ಹಲ್ಲೆಗಳಿಗೊಳಗಾಗುವ ಸಂದರ್ಭದಲ್ಲೂ ಸರ್ಕಾರ ಅದಕ್ಕೆಂದು ಉಚಿತ ಚಿಕಿತ್ಸೆ ಕೊಡುವುದಿಲ್ಲ.

ಆರೋಗ್ಯ ಇಲಾಖೆಯಲ್ಲೇ ಇದ್ದರೂ ಬೇರೆಯವರ ಆರೋಗ್ಯ ನೋಡಿಕೊಳ್ಳುವವರ ಸ್ಥಿತಿ ಇಷ್ಟು ದಯನೀಯ ಹಾಗೂ ಶೋಚನೀಯವಾಗಿದೆ. ರಾಜ್ಯದಲ್ಲಿ ಇಂತಹ ಸುಮಾರು 30000 ಜನ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸೌಲಭ್ಯ ವಂಚಿತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಬಗ್ಗೆ ಸರ್ಕಾರ ಕಾಳಜಿಯನ್ನು ವಹಿಸಬೇಕು.

(ಮುಂದು . . .)

(850) 21-9-2021 12.30 DS-GR

**ಶ್ರೀ ಆಯನೂರು ಮಂಜುನಾಥ್(ಮುಂದು):-**

ಅವರ ವೇತನ ಸೌಲಭ್ಯದ ಬಗ್ಗೆ ನಿವೃತ್ತ ಅಧಿಕಾರಿಯಾಗಿರುವಂತಹ ಶ್ರೀ ಶ್ರೀನಿವಾಸ ಆಚಾರ್‌ರವರು ಕೊಟ್ಟ ವರದಿಯನ್ನು ಕೂಡಲೇ ಜಾರಿ ಮಾಡಬೇಕು. ಕೇವಲ ೧೦,೦೦೦-೧೨,೦೦೦ ರೂಪಾಯಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಲ್ಲೆ ಮಾಡಿದ ಮಹಿಳೆ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥರವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ಹಾಗೂ ಗೃಹ ಸಚಿವರಿಂದ ಉತ್ತರ ಒದಗಿಸಲಾಗುವುದು.

ಈ) ವಿಷಯ: ನೋಂದಣಿ ಕಛೇರಿಗಳಲ್ಲಿ ಇ-ತಂತ್ರಾಂಶಗಳ
ಸರ್ವರ್‌ನಲ್ಲಿ ತೊಂದರೆಯಾಗಿರುವ ಬಗ್ಗೆ.

--------

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ರಾಜ್ಯಾದ್ಯಂತ ಆಸ್ತಿ ನೋಂದಣಿ ಪ್ರಕ್ರಿಯೆಯು ಪಾರದರ್ಶಕತೆಯಿಂದ ನಡೆಯಬೇಕು ಎಂಬ ಉದ್ದೇಶದಿಂದಲೇ ಇ-ತಂತ್ರಾಂಶವನ್ನು ಜಾರಿಗೆ ತಂದಿರುವುದು ಸರಿಯಷ್ಟೇ. ಆದರೆ ಇ-ತಂತ್ರಾಂಶಗಳಿಗೆ ಸರ್ವರ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಟದಿಂದಾಗಿ ಜನರ ಸ್ಥಿತಿ ಪರದಾಡುವಂತಾಗಿದೆ. ನೋಂದಣಿ ಪ್ರಕ್ರಿಯೆಗೆ ಬಳಸಲಾಗುವ ಕಾವೇರಿ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪಾವತಿಗೆ ಬಳಸಲಾಗುವ ಕೆ-೨ ತಂತ್ರಾಂಶಗಳು ವಾರದಲ್ಲೆರಡು ದಿನ ಸರ್ವರ್ ಸಮಸ್ಯೆಯಿಂದಾಗಿ ವಿಳಂಬಗೊಳ್ಳುತ್ತಿದ್ದು, ಜನರು ಸರದಿ ಸಾಲಿನಲ್ಲಿ ನಿಂತರು ಅವರ ಗೋಳು ಕೇಳುವವರು ಯಾರು ಇಲ್ಲದಂತಾಗಿದೆ. ಇದರಿಂದ ಜನರು ನೋಂದಣಿ ಮತ್ತು ಮುದ್ರಾಂಕ ಕಛೇರಿಗೆ ಸತತವಾಗಿ ಅಲೆದಾಡುವಂತಾಗಿದ್ದು, ಅವರ ಕಷ್ಟ ಕಾರ್ಪಣ್ಯಗಳಿಗೆ ಮುಕ್ತಿ ದೊರಕಿಲ್ಲ ಹಾಗೂ ಇಲಾಖೆಯು ಅತ್ಯಂತ ಹೆಚ್ಚು ಆದಾಯವನ್ನು ಹೊಂದಿದ್ದರೂ ಸಹ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು ನಿಜಕ್ಕೂ ಆಶ್ಚರ್ಯವೇ ಸರಿ. ಆದ್ದರಿಂದ, ಇ-ತಂತ್ರಾಂಶಗಳ ಸರ್ವರ್ ಸಮಸ್ಯೆಯನ್ನು ತುರ್ತಾಗಿ ಬಗೆಹರಿಸಿ, ಪ್ರತಿ ಕಛೇರಿಗೆ ೨ ಹೆಚ್ಚುವರಿ ಕಂಪ್ಯೂಟರ್‌ಗಳನ್ನು ನೀಡಿ ಹಾಗೂ ಹಲವರು ರೈತರು ಮತ್ತು ಸಾರ್ವಜನಿಕರಲ್ಲಿ ಎ.ಟಿ.ಎಂ., ಕಾರ್ಡ್ ಇಲ್ಲದೇ ಇರುವುದರಿಂದ ಒಂದು ಸಾವಿರ ರೂಪಾಯಿಗಳವರೆಗೆ ನಗದನ್ನು ಪಡೆದು ತ್ವರಿತವಾಗಿ ಸಾರ್ವಜನಿಕರ ತೊಂದರೆಗಳನ್ನು ನೀಗಿಸುವಂತೆ ಕಂದಾಯ ಇಲಾಖೆಯ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಹೆಚ್ಚಿನ ಆದಾಯ ಹೊಂದಿರುವುದರಿಂದ ಮೂಲ ಸೌಕರ್ಯಗಳನ್ನು ಒದಗಿಸಬೇಕು ಹಾಗೂ ಒಂದು ಸಾವಿರ ರೂಪಾಯಿಗಳವರೆಗೆ ನಗದನ್ನು ಪಡೆದು ನೋಂದಣಿ ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರು ಶೂನ್ಯ ವೇಳೆಯಲ್ಲಿ ಸಬ್-ರಿಜಿಸ್ಟ್ರಾರ್ ಕಚೇರಿಗಳಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಕಾವೇರಿ ತಂತ್ರಾಂಶ ಏನಿದೆ ಅದರಲ್ಲಿ ಬಹಳಷ್ಟು ಬೇರೆ ಬೇರೆ ಇಲಾಖೆಯ ತಂತ್ರಾಂಶಗಳನ್ನು ಜೋಡಣೆ ಮಾಡಿರುವುದರಿಂದ ಲೋಡ್ ಜಾಸ್ತಿಯಾಗಿದೆ. ಅದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಈ ರೀತಿ ಬೇರೆ ಬೇರೆ ಇಲಾಖೆಯವರಿಗೆ ಸಂಬಂಧಿಸಿದ ಲೋಡ್ ಜಾಸ್ತಿಯಾಗಿರುವುದರಿಂದ ಅದು struck down ಆಗುತ್ತಿದೆ. ಆ ದೃಷ್ಟಿಯಿಂದ ನಾವು ಐಟಿ-ಬಿಟಿ ಇಲಾಖೆಗೆ ಸೂಚನೆ ಕೊಟ್ಟಿದ್ದೇವೆ. ಅವರು ಡಿಸೆಂಬರ್ ಒಳಗೆ ಹೊಸ ತಂತ್ರಾಂಶವನ್ನು ತಯಾರು ಮಾಡಿ ಕೊಡುತ್ತಾರೆ. ಅದು ಬಂದ ಮೇಲೆ ಯಾವುದೇ ರೀತಿಯ ಸಮಸ್ಯೆ ಆಗಲಾರದ ಹಾಗೆ ವ್ಯವಸ್ಥೆ ಆಗುತ್ತದೆ. ಇದು ಇವತ್ತಿನ ಸಮಸ್ಯೆಯಲ್ಲ, ಕಳೆದ ಆರು ತಿಂಗಳುಗಳಿಂದಲೂ ಈ ಸಮಸ್ಯೆ ಇದೆ. ೨೦೧೪ ರಲ್ಲೇ ವ್ಯವಸ್ಥೆಗಳೆಲ್ಲಾ ಬದಲಾವಣೆಯಾಗಬೇಕಾಗಿತ್ತು. ೨೦೧೪ ರಿಂದ ಯಾವ ಬದಲಾವಣೆಗಳು ಆಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿರುವಂತಹ ಪ್ರಸ್ತುತ 'ಕಾವೇರಿ' ತಂತ್ರಾಂಶ ಕೇಂದ್ರೀಕೃತ ಮತ್ತು ಲೋಕಲ್ ಸರ್ವರ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ U.P.S., ಮತ್ತು ಬ್ಯಾಟರಿಗಳು ಏಳು ವರ್ಷ ಹಳೆಯದಾಗಿದೆ. ಅದು ಕೂಡ ಒಂದು ಸಲ ನಿಂತು ಹೋದರೆ, ಆ ವ್ಯವಸ್ಥೆಯನ್ನು ಸರಿ ಮಾಡಬೇಕಾದರೆ ಮತ್ತೆ ಅದೆಲ್ಲಾ ರಿಪೇರಿಯಾಗಬೇಕಾಗುತ್ತದೆ. ಇದು ಕೂಡ ಸಮಸ್ಯೆಯಾಗಿದೆ. Data base crash ಆಗಿರುತ್ತದೆ. Data base crash ಆದರೆ ಮತ್ತೆ ರಿಪೇರಿ ಮಾಡಬೇಕಾಗುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮೊನ್ನೆ ೧೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಿದ್ದೇವೆ. ಅವರು ಬ್ಯಾಟರಿಗಳನ್ನು ತಕ್ಷಣವೇ ಬಿಡುಗಡೆ ಮಾಡಿದರೆ ಈ ವ್ಯವಸ್ಥೆಗಳಲ್ಲಿ ಬದಲಾವಣೆಗಳನ್ನು ತರುತ್ತೇವೆ. ಡಿಸೆಂಬರ್ ತಿಂಗಳಿನಲ್ಲಿ ಶೇಕಡ ನೂರರಷ್ಟುಈ ತಂತ್ರಾಂಶವನ್ನು ಪಕ್ಕಾ ಮಾಡುತ್ತೇವೆ. ಡಿಸೆಂಬರ್ ಆದ ಮೇಲೆ ಯಾವುದೇ ಸಮಸ್ಯೆ ಆಗಲಾರದ ಹಾಗೆ ವ್ಯವಸ್ಥೆ ಮಾಡುತ್ತೇನೆ. ಅದೇ ರೀತಿ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ Hardware Engineers, Data Entry Operators ಗಳಿಗೆ 'ಕಾವೇರಿ' ತಂತ್ರಾಂಶ ಮತ್ತು ಗಣಕೀಕರಣ ಸಂಬಂಧಿಸಿದ ವಿಷಯದಲ್ಲಿ ತರಬೇತಿ ನೀಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಈಗಾಗಲೇ ತರಬೇತಿ ಕೊಡುವುದಕ್ಕೆ ಮೂರು ಬ್ಯಾಚ್‌ಗಳನ್ನು ಮಾಡಿದ್ದೇವೆ. ಇನ್ನೂ ಏಳು ಬ್ಯಾಚ್‌ಗಳಲ್ಲಿ ಮಾಡಬೇಕಾಗಿದೆ. ಒಟ್ಟಾರೆ ಡಿಸೆಂಬರ್ ತಿಂಗಳಿನಲ್ಲಿ ವ್ಯವಸ್ಥೆ ಮಾಡುತ್ತೇವೆ. ಬ್ಯಾಟರಿ ಸಿಸ್ಟಮ್‌ನ್ನು ಸರಿ ಮಾಡುವುದರಿಂದ ಶೇಕಡ ೫೦ ರಷ್ಟು ಈ ವ್ಯವಸ್ಥೆ ಸರಿ ಹೋಗುತ್ತದೆ. ಸಾವಿರ ರೂಪಾಯಿ ಹಣ ಕಟ್ಟುವುದಕ್ಕೆ ಕ್ಯಾಶ್ ಇದ್ದು, ಏನಾಗಿದೆ ಎಂದರೆ ಕೆಲವು ಸಬ್-ರಿಜಿಸ್ಟ್ರಾರ್‌ಗಳು ವರ್ಷಾನುಗಟ್ಟಲೇ ಎರಡು ವರ್ಷ, ಮೂರು ವರ್ಷ ಹಣ ಹಾಗೆಯೇ ಇಟ್ಟುಕೊಂಡಿದ್ದಾರೆ. ಹಣವನ್ನು ಸಂದಾಯ ಮಾಡಿಲ್ಲ. ಆ ತರಹ ಐದಾರು ಪ್ರಕರಣಗಳಾಗಿರುವುದರಿಂದ ಈ ವ್ಯವಸ್ಥೆ ಸರಿಯಾಗ್ತುವುದಿಲ್ಲವೆಂದು ನಾವು ಬ್ಯಾಂಕ್ ಮುಖಾಂತರ ಹಣ ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಒಂದು ಸಲ ಬಿಟ್ಟರೆ ಮತ್ತೆ ಹಾಗೆಯೇ ಹಣ ಇಟ್ಟುಕೊಂಡಿರುತ್ತಾರೆ. ಇದಕ್ಕೆ ಬೇರೆ ದಾರಿಯನ್ನು ಹುಡುಕುತ್ತೇವೆ. ಡಿ.ಡಿ., ಯನ್ನು ಬ್ಯಾಂಕ್‌ಗೆ ಹಾಕಬೇಕು. ಆದರೆ ಅದನ್ನೂ ಹಾಕುವುದಿಲ್ಲ. ಈ ರೀತಿ ಇರುವುದರಿಂದ ಬ್ಯಾಂಕ್ ಮುಖಾಂತರ ಪಾವತಿಸುವಂತಹ ವ್ಯವಸ್ಥೆ ಮಾಡಿದ್ದೇವೆ. ಇನ್ನು ಅನುಕೂಲವಾದ ವ್ಯವಸ್ಥೆ ಏನಾದರೂ ಇದ್ದರೆ ಅದನ್ನು ಮಾಡಿಕೊಡುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಉ) ಬೆಂಗಳೂರು ನಗರದ ಬೀದಿ ದೀಪಗಳಿಗೆ ಎಲ್.ಇ.ಡಿ. ಬಲ್ಬ್ ಅಳವಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ

----------

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಗರ ಬೀದಿ ಬೀದಿಗಳ ಕತ್ತಲು ನಿವಾರಿಸುವುದಷ್ಟೇ ಅಲ್ಲ. ಸುರಕ್ಷತೆಗೆ ಸಂಬಂಧಿಸಿಯೂ ಅಮೂಲಾಗ್ರ ಬದಲಾವಣೆ ತರಬಲ್ಲ ಚತುರ ಎಲ್.ಇ.ಡಿ., ಬೀದಿ ದೀಪ ಯೋಜನೆ ಸಮರ್ಪಕವಾಗಿ ಅನುಷ್ಠಾನವಾದದ್ದೇ ಆದರೆ ಬಿ.ಬಿ.ಎಂ.ಪಿ., ಪಾಲಿಗೆ ವರ್ಷಕ್ಕೆ ನೂರಾರು ಕೋಟಿಗಳ ವಿದ್ಯುತ್ ಬಿಲ್ ಉಳಿಸಬಲ್ಲ ಮಹತ್ವಾಕಾಂಕ್ಷಿ ಯೋಜನೆ ಇದಾಗಲಿದೆ. ಈ ಯೋಜನೆಯ ಟೆಂಡರ್‌ಗೆ ಬಿ.ಬಿ.ಎಂ.ಪಿ., ಅನುಮೋದನೆ ನೀಡಿಯೇ ಮೂರು ವರ್ಷಗಳಾಗಿವೆ. ಆದರೂ ಈವರೆಗೂ ಒಂದು ಎಲ್.ಇ.ಡಿ., ಬೀದಿ ದೀಪ ಅಳವಡಿಸದಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಸರ್ಕಾರದ ಇಲಾಖೆಗಳಿಂದಲೇ ಈ ಯೋಜನೆ ವಿಳಂಬವಾಗುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಈ ಯೋಜನೆಯು ವಿನ್ಯಾಸ ರಚನೆ, ಹಣಕಾಸು ವ್ಯವಸ್ಥೆ, ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ ಮಾದರಿಯನ್ನು ಜಾರಿಗೆ ತರುವ ಉದ್ದೇಶ ಹೊಂದಲಾಗಿದೆ. ನಗರದಲ್ಲಿನ ೪.೮೫ ಲಕ್ಷ ಸಾಂಪ್ರದಾಯಿಕ ಬೀದಿ ದೀಪಗಳನ್ನು ಬದಲಿಸಿ ಎಲ್ಇಡಿ ಬೀದಿ ದೀಪಗಳನ್ನು ಈ ಗುತ್ತಿಗೆ ಸಂಸ್ಥೆಯೇ ಅಳವಡಿಸಬೇಕಾಗಿದೆ. ಹತ್ತು ವರ್ಷಗಳ ಕಾಲ ಅವುಗಳನ್ನು ನಿರ್ವಹಣೆ ಮಾಡಬೇಕಾಗಿದೆ. ಒಟ್ಟು ಐದು ಹಂತಗಳಲ್ಲಿ ಈ ಯೋಜನೆಯನ್ನು ಮುಕ್ತಾಯಗೊಳಿಸುವ ಉದ್ದೇಶವಿದ್ದಾಗ್ಯೂ ಹಲವು ಗಡುವುಗಳನ್ನು ವಿಧಿಸಿದರೂ ಈ ಯೋಜನೆ ಇನ್ನು ಟೇಕ್ ಆಫ್ ಆಗಿಲ್ಲ. ಬಿ.ಬಿ.ಎಂ.ಪಿ., ಯ ಹೂಡಿಕೆ ರಹಿತ ಈ ಯೋಜನೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕಾದ ಜವಾಬ್ದಾರಿ ಸರ್ಕಾರಕ್ಕೆ ಇದೆ. ಈ ಯೋಜನೆ ಪೂರ್ಣಗೊಂಡರೆ ತಿಂಗಳಿಗೆ ಅಂದಾಜು ೧೭ ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಉಳಿತಾಯವಾಗಲಿದೆ. ಈ ಯೋಜನೆ ನಿರೀಕ್ಷೆಯಂತೆ ಸಾಗುತ್ತಿಲ್ಲ ಎಂಬ ಬಗ್ಗೆ ಆಯುಕ್ತರು ಸಹ ಅಸಮಾಧಾನ ವ್ಯಕ್ತಪಡಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ದಯಮಾಡಿ ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗಮನ ನೀಡಿ ತಕ್ಷಣವೇ ಈ ಯೋಜನೆಗೆ ಇರಬಹುದಾದ ಅಡೆತಡೆಗಳನ್ನು ನಿವಾರಣೆ ಮಾಡಿ ಯೋಜನೆಯನ್ನು ಕಾರ್ಯಾರಂಭಿಸಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುತ್ತೇನೆ.

ಊ)ವಿಷಯ:- ಗದಗದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಇದೇ ವಿಷಯದಲ್ಲಿ ಎಂ.ಎ. ವ್ಯಾಸಂಗ ಮಾಡಿ ಉದ್ಯೋಗ ದೊರಕಿಲ್ಲದಿರುವ ಬಗ್ಗೆ.

--------

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಗದಗದಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವಿಶ್ವವಿದ್ಯಾಲಯ ಸ್ಥಾಪನೆಯಾಗಿ ನಾಲ್ಕು ವರ್ಷ ಗತಿಸಿದ್ದು, ಇದೇ ವಿಷಯದಲ್ಲಿ ಎಂ.ಎ. ಮಾಡಿದ ನೂರಾರು ವಿದ್ಯಾರ್ಥಿಗಳು ಪ್ರಮಾಣ ಪತ್ರ ಹಿಡಿದುಕೊಂಡು ಹೊರ ಬಂದಿದ್ದಾರೆ. ಆದರೆ ವಿಚಿತ್ರವೆಂದರೆ ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕೋರ್ಸ್ ಓದಿದ ಯಾವ ವಿದ್ಯಾರ್ಥಿಗಳಿಗೂ ಉದ್ಯೋಗವೇ ದೊರಕಿಲ್ಲ. ಅಲೆಯುವುದೇ ಅವರ ಪರಿಸ್ಥಿತಿಯಾಗಿದೆ.

ಇದರಿಂದಾಗಿ ಕೋರ್ಸ್ ಓದಿದರೂ ಉದ್ಯೋಗಾವಕಾಶಗಳು ಇಲ್ಲದಿದ್ದರಿಂದ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ಸೇರಲು ಹಿಂದೇಟು ಹಾಕುತ್ತಿದ್ದಾರೆ. ಪ್ರಾಧ್ಯಾಪಕರೂ ಸಹ ಈ ಕೋರ್ಸ್‌ಗಳನ್ನು ಉತ್ತೇಜಿಸುತ್ತಿಲ್ಲ. ಈ ವಿಶ್ವವಿದ್ಯಾಲಯದಲ್ಲಿ ಇರುವಂಥ ೧೦ ಕೋರ್ಸ್‌ಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ನಿರ್ವಹಣೆ ಕೋರ್ಸ್ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗಾವಕಾಶ ದೊರೆಯುತ್ತಿದೆ.

ಆದಕಾರಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕೋರ್ಸ್ ಓದಿದವರಿಗೆ ಆರ್‌ಡಿಪಿಆರ್ ಇಲಾಖೆಯಿಂದ ಭರ್ತಿಯಾಗುತ್ತಿರುವ ಗ್ರೇಡ್-೧ ಕಾರ್ಯದರ್ಶಿ, ಪಿಡಿಒ, ಸಹಾಯಕ ನಿರ್ದೇಶಕರು, ನರೇಗಾ ಹುದ್ದೆಗಳಿಗೆ ಅವಕಾಶ ಒದಗಿಸುವ ಮೂಲಕ ನೇರ ನೇಮಕಾತಿಗೆ ಅವಕಾಶ ಮಾಡಿಕೊಡಬೇಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

851/21-09-2021/12-40/bkp-gr

**(ಸಭಾಪತಿಯವರು ಪೀಠದಲ್ಲಿದ್ದರು)**

**ಖ) ವಿಷಯ:** ಮಡಿಕೇರಿಯ ಜನರಲ್ ತಿಮ್ಮಯ್ಯ ಕ್ರೀಡಾಂಗಣ ಆಟವಾಡಲು ಯೋಗ್ಯವಾಗದೇ ಇರುವ ಬಗ್ಗೆ.

-----

**ಶ್ರೀ ಸುನಿಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಜಯವಾಣಿ ದಿನ ಪತ್ರಿಕೆಯ ಸುದ್ದಿ " ಫುಟ್ಬಾಲ್ ಮೈದಾನ ಗುಂಡಿಮಯ" ಎಂಬ ಶೀರ್ಷಿಕೆಯ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಮಡಿಕೇರಿಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದ ಆವರಣದಲ್ಲಿ ಹುಲ್ಲುಗಾವಲಿನಂತೆ ಕಾಣುವ ಫುಟ್ಬಾಲ್ ಮೈದಾನ ಗುಂಡಿಮಯವಾಗಿದ್ದು ಆಟವಾಡಲು ಯೋಗ್ಯವಾಗಿಲ್ಲ. ವಿದೇಶಗಳ ಆಟದ ಮೈದಾನದಂತೆ ಹಸಿರಿನಿಂದ ಕಂಗೊಳಿಸಿದರೂ ಸಹ ಸಮೀಪ ಹೋಗಿ ನೋಡಿದಾಗಲೇ ತಿಳಿಯುವುದು ನಿರ್ವಹಣೆ ಇಲ್ಲದೆ ಹುಲ್ಲುಗಾವಲಿನಂತೆ ಇದೆ ಎಂದು. ಫುಟ್ಬಾಲ್ ಕ್ರೀಡೆ ಮೂಲಕ ಕೊಡಗಿನಲ್ಲಿ ಮ್ಯಾನ್ಸ್ ಕಾಂಪೌಂಡ್ (ಎಂಸಿಸಿ) ಖ್ಯಾತಿ ಹೊಂದಿದೆ, ಉತ್ತಮ ಹೆಸರಿರುವ ಈ ಜಿಲ್ಲಾ ಕ್ರೀಡಾಂಗಣವು ಪ್ರಸ್ತುತ ಹಲವು ವರ್ಷಗಳಿಂದ ನಿರ್ವಹಣೆ ಇಲ್ಲದೆ ಕಾಡು ಗಿಡ ಬೆಳೆದು ಆಟವಾಡಲು ಯೋಗ್ಯವಿಲ್ಲದ ಪರಿಸ್ಥಿತಿಯಲ್ಲಿದೆ. ಸ್ಥಳೀಯ ಆಟಗಾರರು ಸ್ವಪ್ರಯತ್ನದಿಂದ ಈ ಮೈದಾನದ ದುರಸ್ತಿಯನ್ನು ಮಾಡಲಾಗುತ್ತಿದೆ. ಅಲ್ಲದೆ ಈ ಮೈದಾನದ ಸಮೀಪವೆ ಇರುವ ಬ್ಯಾಸ್ಕೆಟ್‌ಬಾಲ್‌ಕೋರ್ಟ್ ಸಹ ಅವ್ಯವಸ್ಥೆಯಿಂದ ಕೂಡಿದೆ ಇಲ್ಲೂ ಸಹ ಕ್ರೀಡಾಪಟುಗಳೆ ವೈಯಕ್ತಿಕ ಆಸಕ್ತಿವಹಿಸಿ ಈ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ಗೆ ಕಾಯಕಲ್ಪ ನೀಡುವ ಪ್ರಯತ್ನವನ್ನು ಸಹ ಮಾಡಲಾಗುತ್ತಿದ್ದು, ಇದಕ್ಕೆ ಕ್ರೀಡಾ ಇಲಾಖೆಯ ಸೂಕ್ತ ಸ್ಪಂದನೆಯ ಅವಶ್ಯಕತೆ ಇದೆ. ಆದಕಾರಣ ಈ ವಿಷಯಗಳಲ್ಲಿ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಚಿವರ ಗಮನ ಸೆಳೆಯುತ್ತ ಈ ಬಗ್ಗೆ ಸೂಕ್ತ ಹಾಗೂ ಶೀಘ್ರ ಕ್ರಮಕೈಗೊಂಡು ಈ ಕ್ರೀಡಾಂಗಣಗಳ ದುರಸ್ಥಿ ಕಾರ್ಯವನ್ನು ನಡೆಸುವಂತೆ ಕೋರುತ್ತೇನೆ.

**ಡಾ|| ನಾರಾಯಣಗೌಡ(ಕ್ರೀಡೆ, ಯುವಜನ, ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾತನಾಡಿರುವಂತೆ ನಾನು ಸಹ ಈ ವಿಚಾರವಾಗಿ ಪತ್ರಿಕೆಯಲ್ಲಿ ನೋಡಿದ್ದೇನೆ. ಈಗಲೇ ನಮ್ಮ ಆಯುಕ್ತರನ್ನು ಮತ್ತು ನಮ್ಮ ಇಲಾಖೆಯ ಇತರ ಅಧಿಕಾರಿಗಳನ್ನು ಕರೆದು ನಿರ್ದೇಶನವನ್ನು ಕೊಟ್ಟಿದ್ದೇವೆ. ಏಕೆಂದರೆ, ಕೊಡಗಿನಲ್ಲಿ ನಮ್ಮ ಮಹಾಮಾರಿ ಕಾಯಿಲೆ ಕೇರಳಾ ರಾಜ್ಯದಿಂದ ಬಂದಿರುವುದರಿಂದ ಇದನ್ನು ನಾವು ಸ್ವಲ್ಪ ವಿಳಂಬವಾಗಿ ಕೆಲಸ ಪ್ರಾರಂಭ ಮಾಡಿರುವುದಿಲ್ಲ. ಈಗಾಗಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಏಕೆಂದರೆ, ಈ ಕ್ರೀಡಾಂಗಣ ಶಿಕ್ಷಣ ಇಲಾಖೆಯಲ್ಲಿ ಇತ್ತು. ಹೀಗಾಗಿ ನಾನು ಕೊಡಗಿಗೆ ಭೇಟಿ ನೀಡಿ ಅಲ್ಲಿನ ಎ.ಸಿ., ಮತ್ತು ಡಿ.ಸಿ., ಯವರನ್ನು ಕರೆದು ಈ ವಿಚಾರದಲ್ಲಿ ನಿರ್ದೇಶನ ಕೊಟ್ಟಿದ್ದೇನೆ. ಆದ್ದರಿಂದ ಶೀಘ್ರದಲ್ಲಿ ಈ ಕೆಲಸ ಪ್ರಾರಂಭವಾಗುತ್ತದೆ. ಕೊಡಗು ಜಿಲ್ಲೆ ಕ್ರೀಡೆಗೆ ಹೆಚ್ಚು ಶಕ್ತಿ ತುಂಬಿದಂತಹ ಜಿಲ್ಲೆಯಾಗಿದ್ದು, ಅದಕ್ಕೋಸ್ಕರ ಈ ನಿಟ್ಟಿನಲ್ಲಿ ಶೀಘ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲಿಕ್ಕೆ ಬಯಸುತ್ತೇನೆ.

**ಎ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ನೀಡುವ ವಿದ್ಯಾರ್ಥಿ ವೇತನ ಸ್ಥಗಿತಗೊಂಡಿರುವ ಬಗ್ಗೆ.**

-----

**ಶ್ರೀ ವಿಜಯ್ ಸಿಂಗ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ , ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದವರು ಸೇರಿದಂತೆ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಇಂಜಿನಿಯರಿಂಗ್ ಸ್ನಾತಕೋತ್ತರ ಡಿಪ್ಲೊಮಾ ಸೇರಿ ಎಲ್ಲಾ ವೃತ್ತಿಪರ ಕೋರ್ಸ್‌ಗಳಿಗೆ ಪದವಿ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ಪೇಮೆಂಟ್ ಸೀಟ್ ಪಡೆದ ವಿದ್ಯಾರ್ಥಿಗಳಿಗೆ ವೇತನ ಸ್ಥಗಿತಗೊಳಿಸುವ ಮೂಲಕ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಬೇಕೆನ್ನುವ ಬಡ ಸಮುದಾಯದ ವಿದ್ಯಾರ್ಥಿಗಳಿಗೆ ಕೊಡಲಿಪೆಟ್ಟು ನೀಡುವ ನಿರ್ಧಾರ ಸರ್ಕಾರ ಕೈಗೊಂಡಿದ್ದು ಅಘಾತ ತಂದಿದೆ.

ಈಗ ಸರ್ಕಾರ ವಿದ್ಯಾರ್ಥಿ ವೇತನ ಸ್ಥಗಿತ ಮಾಡಿರುವುದು ಭವಿಷ್ಯದಲ್ಲಿ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಯಾವ ರೀತಿ ಪಡೆಯಬೇಕೆಂಬ ಆತಂಕ ಉಂಟಾಗಿದೆ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ವೇತನ ನೀಡುವ ಮೂಲಕ ಮುಂದಿನ ಶಿಕ್ಷಣ ಪಡೆಯುವ ಅವಕಾಶ ನೀಡಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಶೂನ್ಯವೇಳೆಯಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್ ರವರು ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ನೀಡುವ ವಿದ್ಯಾರ್ಥಿ ವೇತನ ಸ್ಥಗಿತಗೊಂಡಿರುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಶ್ನೆಯನ್ನು ಕೇಳಿದ್ದಾರೆ. ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರ್ಥಿಕ ಕಾರಣಗಳಿಗೋಸ್ಕರ ಒಂದಿಷ್ಟು ಅನುದಾನಗಳು ಕಡಿಮೆ ಬಂದಿದ್ದು, ಅದನ್ನು ಈಗ ಪುನಃ ವಿಸ್ತರಿಸುವಂತಹ ಕೆಲಸಗಳನ್ನು ಮಾಡುತ್ತಿದ್ದೇವೆ. ಈ ಸಮಸ್ಯೆಯನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಪೂರ್ಣ ವಿವರವಾದ ಮಾಹಿತಿಯನ್ನು ಅವರಿಗೆ ಒದಗಿಸುತ್ತೇನೆ.

**ಏ) ವಿಷಯ:** ತಕರಾರು ಇರುವ ಸರ್ವೆ ನಂಬರ್ ಮತ್ತು ಪೋಡುಗಳ ರದ್ದತಿ ದುರಸ್ತಿ ಮೇಲ್ಮನವಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

-------

**ಶ್ರೀ ಎಸ್. ರುದ್ರೇಗೌಡ( ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದ ನಗರ ಮತ್ತು ಹಳ್ಳಿಗಳ ಗುಡ್ಡ ಪ್ರದೇಶ ಅಥವಾ ಯಾವುದಾದದರೂ ತಕರಾರು ಇರುವ ಸರ್ವೆ ನಂ ಸ್ಥಳದ ಸರ್ವೆ ಮತ್ತು ಪೋಡುಗಳ ರದ್ದತಿ ದುರಸ್ತಿ ಮಾಡಿದ ನಂತರ A.D.L.R., ಹೊರಡಿಸಿದ ಆದೇಶವನ್ನು Assistant Commissioner /D.D.L.R., ಅವರ ಮೇಲ್ಮನವಿ ಆದೇಶಗಳನ್ನು ಈವರಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿಗೆ ಅವಕಾಶ ಇತ್ತು. ಜಿಲ್ಲಾ ಮಟ್ಟದಲ್ಲಿ ಎಲ್ಲಾ ತಕರಾರುಗಳನ್ನು ಕಳೆದ ನಾಲ್ಕು ತಿಂಗಳಿಂದ ಈ ಎಲ್ಲಾ ಅಧಿಕಾರವನ್ನು ಆಯಾ ವಯಲದ Regional Joint Director of Land Records ಇವರಿಗೆ ಕೊಟ್ಟಿರುವುದರಿಂದ ಎಲ್ಲಾ ಜಿಲ್ಲೆಗಳಲ್ಲೂ ಪರಿಯಾದುದಾರರಿಗೆ ಬಹಳಷ್ಟು ವಿಳಂಬವಾಗುತ್ತಿದೆ ಮತ್ತು ತಕರಾರುಗಳನ್ನು ಪರಿಹರಿಸಿಕೊಳ್ಳಲು ಪರದಾಡುವಂತಾಗಿದೆ. ಆದಕಾರಣ ಪುನಃ ಹಿಂದಿನಂತೆ ಜಿಲ್ಲಾಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಲು ಅವಕಾಶ ಮಾಡಿಕೊಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರದ ಗಮನಸೆಳೆಯುತ್ತೇನೆ, ವಂದನೆಗಳು.

**ಶ್ರೀ ಆರ್. ಅಶೋಕ( ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಭೂಮಾಪನ ಇಲಾಖೆಯಲ್ಲಿ 2005 ರ ಇಸ್ವಿಯ ಹಿಂದೆ J.D.L.R., ಗಳೇ ಅಪೀಲ್‌ಗಳನ್ನು ಪರಿಶೀಲನೆ ಮಾಡುತ್ತಿದ್ದರು. ಈ ಕೆಲಸವನ್ನು ಜಿಲ್ಲಾ ಮಟ್ಟದಲ್ಲಿಯೇ ಮಾಡಬೇಕೆಂದು ಹೇಳಿ, 2005 ರಿಂದ ಡಿ.ಸಿ., ಗಳಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಆದರೆ, ಜಿಲ್ಲಾಧಿಕಾರಿಗಳು ಈ ಸಂಬಂಧದ ಅರ್ಜಿಗಳನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅವರು ತೆಗೆದುಕೊಳ್ಳಲಿಲ್ಲ. ಒಂದೊಂದು ವಿಭಾಗದಲ್ಲಿಯೂ ಕೂಡ ಉದಾಹರಣೆಗೆ ಮೈಸೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಭಾಗದಲ್ಲಿ 125, ಬೆಂಗಳೂರು ವಿಭಾಗದಲ್ಲಿ 113, ಬೆಳಗಾವಿ ವಿಭಾಗದಲ್ಲಿ 27 ಮತ್ತು ಗುಲ್ಬರ್ಗ ವಿಭಾಗದಲ್ಲಿ 16 ಹೀಗೆ ಒಟ್ಟು 381 ಅರ್ಜಿಗಳು ಸುಮಾರು 6-7 ವರ್ಷಗಳಿಂದ ಪೆಂಡಿಂಗ್ ಇವೆ. ವಾಸ್ತವವಾಗಿ ಈ ಕೆಲಸವನ್ನು J.D.L.R., ಗಳೇ ಮಾಡಬೇಕಾಗುತ್ತದೆ. ಜಿಲ್ಲಾಧಿಕಾರಿಗಳಿಗೆ ಒತ್ತಡ ಜಾಸ್ತಿ ಇರುವುದರಿಂದ ಅವರಿಗೆ ಈ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಈಗ ಯಾರು ಮಾನ್ಯ ಸದಸ್ಯರು Regional Officeಗೆ ಹೋಗಬೇಕೆಂದು ಏನು ಹೇಳಿದ್ದಾರೆ, ಅಲ್ಲಿಗೆ ಹೋಗಬೇಕಾಗಿಲ್ಲ. ಸಂಬಂಧಪಟ್ಟ ಜಿಲ್ಲೆಗೆ ಬಂದು J.D.L.R., ಗಳೇ ಬಂದಂತಹ ಅರ್ಜಿಗಳನ್ನು ಪರಿಶೀಲನೆ ಮಾಡಿ ಶೀಘ್ರವಾಗಿ ಅದಕ್ಕೆ ಪರಿಹಾರವನ್ನು ಒದಗಿಸಬೇಕೆಂದು ವ್ಯವಸ್ಥೆ ಮಾಡಿರುವುದರಿಂದ ಏನು 6-7 ವರ್ಷಗಳಿಂದ ಅರ್ಜಿಗಳು ಪೆಂಡಿಂಗ್ ಇವೆ, ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಮೊದಲು ಇದ್ದಂತಹ ವ್ಯವಸ್ಥೆಯಂತೆ J.D.L.R., ಗಳಿಗೆ ಅಧಿಕಾರವನ್ನು ಕೊಟ್ಟಿರುವುದರಿಂದ ಅವರುಗಳು ಜಿಲ್ಲೆಗಳಿಗೆ ಹೋಗಿ ಅಲ್ಲಿಯೇ ಅರ್ಜಿಗಳನ್ನು ಶೀಘ್ರವಾಗಿ ಪರಿಶೀಲನೆ ಮಾಡಿ ಕ್ಲಿಯರ್ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

**ಐ)ವಿಷಯ:** ಬಿ.ಎ.ಎಂ.ಎಲ್ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘ ತನ್ನ ನೌಕರರಿಗೆ ನಿವೇಶನ ಹಂಚಿಕೆ ಮಾಡದೇ ಖಾಸಗಿ ಅವ್ಯವಹಾರ ನಡೆಸಿರುವ ಬಗ್ಗೆ.

- - - - -

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆಯ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಬಿ.ಇ..ಎಂ.ಎಲ್ ಕಾರ್ಮಿಕರಿಗೆ ನಿವೇಶನವನ್ನು ಹಂಚಿಕೆ ಮಾಡಿರುವ ವಿಚಾರವನ್ನು ಸದನದಲ್ಲಿ ಶೂನ್ಯವೇಳೆಯ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿರುವುದಕ್ಕೆ ತಮಗೆ ವಂದಿಸುತ್ತೇನೆ. ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆಯ ಕಾರ್ಮಿಕ ಗೃಹ ನಿರ್ಮಾಣ ಸಹಕಾರ ಸಂಘ, ಇವರು ಕಳೆದ 50 ವರ್ಷಗಳಲ್ಲಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಸುಮಾರು 12 ಸಾವಿರ ಬಿ.ಇ.ಎಂ.ಎಲ್., ಕಾರ್ಮಿಕರಿಗೆ ನಿವೇಶನವನ್ನು ಹಂಚಿಕೆ ಮಾಡಿದೆ. ಆದರೆ, 2002-2003ನೇ ಸಾಲಿನಲ್ಲಿ ಸಂಘದ ಸದಸ್ಯರಿಗೆ ನಿವೇಶನವನ್ನು ಹಂಚಿಕೆ ಮಾಡಲು ಉದ್ದೇಶಿಸಿ, ಕೆ.ಆರ್.ಪುರಂ ನ ಥಣಿಸಂದ್ರ, ಗೆದ್ದಲಹಳ್ಳಿ ಹಾಗೂ ಭೈರತಿ ಅಮಾನಿ ಖಾನೆ ಪ್ರದೇಶಗಳಲ್ಲಿ ಒಟ್ಟು 78 ಎಕರೆ ಪ್ರದೇಶವನ್ನು ರೈತರಿಂದ ನೇರವಾಗಿ ಖರೀದಿ ಮಾಡಿ, ಅಂದಿನ ಸಂಘದ ನಿರ್ದೇಶಕರ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

/ಪದಾಧಿಕಾರಿಗಳ ಹೆಸರಿಗೆ ನೋಂದಣಿಯನ್ನು ಮಾಡಲಾಗಿದ್ದು ಈ ಜಮೀನನ್ನು ಸಂಘದ ಪದಾಧಿಕಾರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಶಾಮೀಲಾಗಿ ನೈಜ ಸದಸ್ಯರಿಗೆ ನಿವೇಶನವನ್ನು ನೀಡದೆ ಸದಸ್ಯರಲ್ಲದ ಖಾಸಗಿ ವ್ಯಕ್ತಿಗಳಿಗೆ ಮಾರಾಟವನ್ನು ಮಾಡಿ, ಸುಮಾರು 45 ರಿಂದ 50 ಕೋಟಿ ರೂ.ಗಳಷ್ಟು ಹಣವನ್ನು ಸಂಘದ ಮಾಜಿ ನಿರ್ದೇಶಕರಾದ ಶ್ರೀ ಮುನಿ ನಾಗಪ್ಪ ಎನ್ನುವವರು ಮೋಸವನ್ನು ಮಾಡಿ ಕಾರ್ಮಿಕರಿಗೆ ವಂಚನೆಯನ್ನು ಮಾಡಿರುತ್ತಾರೆ. ಸುಮಾರು 20 ವರ್ಷಗಳಿಂದ ನಿವೇಶನಕ್ಕಾಗಿ ಕಾಯುತ್ತಿದ್ದ ಸಂಘದ ನೈಜ ಸದಸ್ಯರಿಗೆ ವಂಚನೆಯನ್ನು ಮಾಡಿರುವುದರಿಂದ ನೈಜ ಸದಸ್ಯರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ರವರು ಸದನದಲ್ಲಿ ಶೂನ್ಯವೇಳೆಯ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಹಕಾರ ಸಚಿವರಿಂದ ಉತ್ತರ ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**05. ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ)** ರಾಜ್ಯದಲ್ಲಿರುವ ನೇಕಾರರಿಗೆ ಗುರುತಿನ ಚೀಟಿ ನೀಡುವ ಹಾಗೂ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಬಗ್ಗೆ.

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು, (ಕೈಮಗ್ಗ ಮತ್ತು ಜವಳಿ, ಕಬ್ಬುಅಭಿವೃದ್ಧಿ ಹಾಗೂ ಸಕ್ಕರೆ ಸಚಿವರ ಪರವಾಗಿ ):-** ಮಾನ್ಯ ಸಭಾಪತಿಯವರೆ, ದಿನಾಂಕ: 15- 09-2021 ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ,ರವರು ಪ್ರಸ್ತಾಪಿಸಿದ ಶೂನ್ಯವೇಳೆಯಲ್ಲಿನ ಪ್ರಸ್ತಾಪಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)** ನಾಗರಹೊಳೆ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಕ್ರಮ ಕೈಗೊಳ್ಳುವ ಬಗ್ಗೆ.

--- - - ---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು, (ಅರಣ್ಯ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ದಿನಾಂಕ:16-09-2021 ರಂದು ಮಾನ್ಯ ಸದಸ್ಯರಾದ ಶ್ರೀ ಸಂದೇಶ್ ನಾಗರಾಜ್ ರವರು ಪ್ರಸ್ತಾಪಿಸಿದ ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಇ)** ಕೇಂದ್ರ ಹಾಗೂ ರಾಜ್ಯದ ಪಾಲುದಾರಿಕೆಯ ಹಲವಾರು ಯೋಜನೆಗಳಿಗೆ ಅನುದಾನ ಬಿಡುಗಡೆಯಾಗದೆ ಯೋಜನೆಗಳು ಸ್ಥಗಿತಗೊಳ್ಳುವ ಸಂಭವವಿರುವುದರಿಂದ ಆತಂಕ ಉಂಟಾಗಿರುವ ಬಗ್ಗೆ.

--- ------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು, (ತೋಟಗಾರಿಕೆ ಮತ್ತು ಯೋಜನೆ ಹಾಗೂ ಸಾಂಖ್ಯಿಕ ಸಚಿವರ ಪರವಾಗಿ ):-** ಮಾನ್ಯ ಸಭಾಪತಿಯವ್ರರೆ, ದಿನಾಂಕ: 20-09-2021 ರಂದು ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ಪ್ರಸ್ತಾಪಿಸಿದ ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕವಿಪಸ:-** ಮಾನ್ಯ ಸಭಾಪತಿಯವರೆ,

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**7. ವರದಿಯನ್ನೊಪ್ಪಿಸುವುದು**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು):** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಮಂಡಲದ 2020-21ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಆರ್ಥಿಕ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಒಳಾಡಳಿತ ಇಲಾಖೆಗೆ ಸಂಬಂಧಿಸಿದ ನಿಯಮ, ವಿನಿಮಯ, ಬೈಲಗಳ ಕುರಿತು ಕೂಲಂಕಷವಾಗಿ ಚರ್ಚಿಸಿ, ಒಟ್ಟು 26 ಶಿಪಾರಸ್ಸುಗಳು, ಸಲಹೆ-ಸೂಚನೆ, ಅಭಿಪ್ರಾಯಗಳನ್ನೊಳಗೊಂಡ ಸಮಿತಿಯ 51ನೇ ವರದಿಯನ್ನು ಸಮಿತಿಯ ಪರವಾಗಿ ಸಮಿತಿಯ ಸದಸ್ಯನಾದ ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಮುಂದು.**

**(852) 21.08.2021 12.50 SV-MD**

**(ಸಭಾಪತಿಯವರ ಉಪಸ್ಥಿತಿ)**

**08.ಹಕ್ಕುಚ್ಯುತಿ ಪ್ರಸ್ತಾವ**

**ವಿಷಯ:- ವಿಧಾನ ಪರಿಷತ್ತಿನ ಸಭಾಂಗಣದ ಪಕ್ಕದಲ್ಲಿ ಶೌಚಾಲಯವನ್ನು ಪುನರ್ ಸ್ಥಾಪಿಸುವ ಬಗ್ಗೆ ಹಕ್ಕುಚ್ಯುತಿಯನ್ನು ಮಂಡಿಸುವ ಬಗ್ಗೆ**

***

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ವಿಧಾನಸೌಧದ ಒಂದನೇ ಮಹಡಿಯ ವಿಧಾನ ಪರಿಷತ್ತಿನ ಸಭಾಂಗಣದ ಪಕ್ಕದಲ್ಲಿ ಹಲವು ವರ್ಷಗಳಿಂದ ಇದ್ದ ಶೌಚಾಲಯವನ್ನು ಉಪಹಾರ ಗೃಹವನ್ನಾಗಿ ಪರಿವರ್ತಿಸಿದ್ದು, ಸದನದ ಗೌರವಾನ್ವಿತ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿಗಳಿಗೆ ಅಧಿವೇಶನದ ಸಮಯದಲ್ಲಿ ಸಾಕಷ್ಟು ಅನಾನುಕೂಲ ಆಗಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆಯೆಂದು ಭಾವಿಸುತ್ತೇನೆ. ಈ ಸಂಬಂಧ ಉಲ್ಲೇಖ (1)ರ ನಡವಳಿಕೆಯಲ್ಲಿ ಈ ಮನೆಯ ಹಿರಿಯ ಸದಸ್ಯರಾಗಿರುವ ಶ್ರೀ ಪುಟ್ಟಣ್ಣ ಅವರು ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಮಯದಲ್ಲಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ ಈ ಹಿಂದೆ ಇದ್ದಂತೆ ಶೌಚಾಲಯವನ್ನು ಪುನರ್ ಸ್ಥಾಪಿಸುವಂತೆ ಸರ್ಕಾರವನ್ನು ಆಗ್ರಹಿಸಿದ್ದರು. ತದನಂತರ ಉಲ್ಲೇಖ (2)ರ ನಡವಳಿಕೆಯಲ್ಲಿ ಪುನಃ ಈ ಮನೆಯ ಅನೇಕ ಹಿರಿಯ ಸದಸ್ಯರು ಪಕ್ಷಾತೀತವಾಗಿ ಇದೇ ವಿಷಯವನ್ನು ಪ್ರಸ್ತಾಪಿಸಿ ಉಪಹಾರ ಗೃಹವನ್ನು ಬೇರೆಡೆಗೆ ಸ್ಥಳಾಂತರಿಸಿ ಶೌಚಾಲಯವನ್ನು ಪುನರ್ ಸ್ಥಾಪಿಸುವ ಬಗ್ಗೆ ಆಗ್ರಹಿಸಿರುತ್ತಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಮಾನ್ಯ ಸಭಾನಾಯಕರು ಮುಂದಿನ ಅಧಿವೇಶನದ ಒಳಗೆ ಶೌಚಾಲಯವನ್ನು ಪುನರ್ ಸ್ಥಾಪಿಸುವುದಾಗಿ ಸದನಕ್ಕೆ ಭರವಸೆ ನೀಡಿರುವುದನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಈ ಸಂಬಂಧ ನಿಕಟಪೂರ್ವ ಸಭಾಪತಿಯವರು ಲೋಕೋಪಯೋಗಿ ಇಲಾಖೆ ಹಾಗೂ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳೊಂದಿಗೆ ಸಭೆಯನ್ನು ಸಹ ನಡೆಸಿದ್ದರು. ಬಾಡಿಗೆ ಕರಾರು ಅವಧಿಯು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಅದನ್ನು ನವೀಕರಿಸದೆ ಬಾಡಿಗೆದಾರರನ್ನು ತೆರವು ಸಹ ಮಾಡಿಸಿದ್ದರು. ಆದರೆ ಆಶ್ಚರ್ಯವೆಂಬಂತೆ ಇಡೀ ಸದನವು ಒಕ್ಕೊರಲಿನಿಂದ ಒತ್ತಾಯ ಮಾಡಿದ್ದು ಹಾಗೂ ಮಾನ್ಯ ಸಭಾನಾಯಕರು ಸದನಕ್ಕೆ ಭರವಸೆ ನೀಡಿದ ಅಂಶಗಳನ್ನು ಗಾಳಿಗೆ ತೂರಿ ಪರಿಷತ್ ಸಚಿವಾಲಯದ ಅಧಿಕಾರಿಗಳು ಉಪಾಹಾರ ಗೃಹದ ಕೊಠಡಿಯನ್ನು ಬಾಡಿಗೆಗೆ ನೀಡಿರುತ್ತಾರೆ. ಈ ನಡವಳಿಕೆಯು ಸದನಕ್ಕೆ ಮತ್ತು ಸದನದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಮಾಡಿರುವ ಅಗೌರವ ಎಂದು ಪರಿಗಣಿಸಬೇಕಾಗುತ್ತದೆ. ಎಲ್ಲಕ್ಕಿಂತಲೂ ಅಧಿವೇಶನದ ಸಮಯದಲ್ಲಿ ಮಾನ್ಯ ಶಾಸಕರು, ಆಪ್ತ ಸಿಬ್ಬಂದಿಗಳು, ಸರ್ಕಾರದ ಹಾಗೂ ಸಚಿವಾಲಯದ ಅಧಿಕಾರಿ/ಸಿಬ್ಬಂದಿಗಳಿಗೆ ಸೌಲಭ್ಯವುಳ್ಳ ಶೌಚಾಲಯ ಕೊರತೆಯಿಂದ ಸಾಕಷ್ಟು ಅನಾನುಕೂಲವಾಗಿರುತ್ತದೆ.

ಆದ್ದರಿಂದ ಸದನಕ್ಕೆ ನೀಡಿದ ಭರವಸೆಯನ್ನು ಅನುಷ್ಠಾನಗೊಳಿಸುವುದೂ ಸೇರಿದಂತೆ ಮಾನ್ಯ ಶಾಸಕರಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸಲು ವಿಫಲವಾದ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಗಳು ಮತ್ತು ಸದನಕ್ಕೆ ಸುಳ್ಳು ಭರವಸೆಯನ್ನು ನೀಡಿರುವಂತಹ ಮಾನ್ಯ ಸಭಾನಾಯಕರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಅನುಮತಿ ನೀಡುವಂತೆ ಕೋರುತ್ತೇನೆ. ಪ್ರಸ್ತುತ ಅಧಿವೇಶನ ನಡೆಯುತ್ತಿರುವುದರಿಂದ ಈ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಸದನದಲ್ಲಿ ಮಂಡಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಮಾತನಾಡಲು ಎದ್ದು ನಿಂತರು)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಹೇಳುತ್ತೇನೆ. ನೀವು ಕುಳಿತುಕೊಳ್ಳಿ.

ಮಾನ್ಯ ಶಾಸಕರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ವಿಧಾನ ಪರಿಷತ್ತಿನ ಸಭಾಂಗಣದ ಪಕ್ಕದಲ್ಲಿರುವ ಕೊಠಡಿ ಸಂಖ್ಯೆ 111 ಅನ್ನು ಶೌಚಾಲಯವಾಗಿ ಪುನರ್ ಸ್ಥಾಪಿಸುವ ಸಂಬಂಧ ಮಾನ್ಯ ಸಭಾನಾಯಕರ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆ ಸಂಬಂಧ ಈ ಕೆಳಗಿನ ನಿರ್ಣಯವನ್ನು ಮಂಡಿಸುತ್ತೇನೆ.

"Practice and Procedure of Parliament – M.N.Kaul and S.L.Shakdher ಪುಸ್ತಕದ ಪುಟ ಸಂಖ್ಯೆ 343ರಲ್ಲಿ ಉಲ್ಲೇಖಿಸಿದ ರೀತ್ಯಾ

*".....Members are not allowed to raise matters pertaining to Lok Sabha Secretariat and the functions of the Speaker on the Floor of the House"*

ಎಂಬುದಾಗಿರುತ್ತದೆ. ಮುಂದುವರೆದು ಪುಟ ಸಂಖ್ಯೆ 316ರಲ್ಲಿ

*"If any statement is made on the floor of the House by a member or Minister which another member believes to be untrue, incomplete or incorrect, it does not constitute a breach of privilege. If an incorrect statement is made, there are other remedies by which the issue can be decided."*

ಇನ್ನೊಂದು ಕಡೆ ಈ ರೀತಿ ಹೇಳಿದ್ದಾರೆ.

*"Non-implementation of assurance given by the Minister on the floor of the House is either breach of privilege or a contempt of the House"*

ಎಂಬುದಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳಿಗೆ ನಿಯಮ 306(9)ರ ರೀತ್ಯಾ ಸಭಾಪತಿಯವರ ಕಛೇರಿ ಅಥವಾ ವಿಧಾನ ಮಂಡಲ ಸಚಿವಾಲಯದ ಯಾವುದೇ ಉದ್ದೇಶವನ್ನು ಕುರಿತು ಆರೋಪಿಸತಕ್ಕದ್ದಲ್ಲ ಎಂದು ತಿಳಿಸಲಾಗಿರುತ್ತದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈವರೆವಿಗೂ ಪಾಲಿಸಿಕೊಂಡು ಬಂದಿರುವ ಸಂಸದೀಯ ಪದ್ಧತಿಗಳನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 374ರ ಮೇರೆಗೆ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಪ್ರಸ್ತಾಪಿಸಲು ಅನುಮತಿಯನ್ನು ನಿರಾಕರಿಸಿರುತ್ತೇನೆ.

**ಹಕ್ಕುಚ್ಯುತಿ ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ, ಶ್ರೀ ಎಂ.ನಾರಾಯಣಸ್ವಾಮಿ, ಶ್ರೀ ಬಿ.ಕೆ.ಹರಿಪ್ರಸಾದ್ ಇವರು ಮಾತನಾಡಲು ಎದ್ದು ನಿಂತರು. ಆಡಳಿತ ಪಕ್ಷದ ಸಾಲಿನಲ್ಲಿ ಸಭಾನಾಯಕರು ಎದ್ದು ನಿಂತರು)**

**ಸಭಾಪತಿಯವರು:-** ಸಾಕು. ಈ ವಿಷಯವನ್ನು ಮುಗಿಸಲಾಗಿದೆ. ಇನ್ನು ಯಾರೂ ಮಾತನಾಡುವಂತಿಲ್ಲ. ಮಾನ್ಯ ಸಭಾನಾಯಕರೇ, ನಾನು ತೀರ್ಮಾನ ಮಾಡಿದ್ದೇನೆ. ಏಕೆ ಮಾತನಾಡುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಆಯಿತು ಮಾನ್ಯ ಸಭಾಪತಿಯವರೇ.

**(ಈ ಹಂತದಲ್ಲಿ ಮಾನ್ಯ ಕೆ.ಪ್ರತಾಪ ಚಂದ್ರ ಶೆಟ್ಟಿಯವರು ಮಾತನಾಡಲು ಪ್ರಾರಂಭಿಸಿದರು)**

**ಸಭಾಪತಿಯವರು:-** ಯಾವುದೂ ದಾಖಲೆಗೆ ಹೋಗುವುದು ಬೇಡ. No discussion.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಎಷ್ಟು ಮಂದಿ ಎದ್ದು ನಿಂತು ಮಾತನಾಡುತ್ತೀರಿ? ನಾನು ನಿಮಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುವುದಿಲ್ಲ. ಒಬ್ಬರು ಮಾತನಾಡಿದ ನಂತರ ಮತ್ತೊಬ್ಬರಿಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವುದು ನನ್ನ ವೈಯಕ್ತಿಕವಲ್ಲ. ಇದು ಮೂಲಭೂತವಾದ ಅವಶ್ಯಕತೆ. ಇದನ್ನು ಪೂರೈಸಬೇಕಾದ ಜವಾಬ್ದಾರಿ ತಮ್ಮದು. ತಾವು ಸಹ ಅದರಲ್ಲಿ ಶಾಮೀಲಾಗಿ ಈ ಒಂದು ವ್ಯವಹಾರದಲ್ಲಿ ಭಾಗಿಯಾಗಿದ್ದೀರಿ. ಇದನ್ನು ಹೇಳಲು ನನಗೇನೂ ಹೆದರಿಕೆಯಿಲ್ಲ. ಇದು ವಾಸ್ತವಾಂಶ ಹೌದು. 30 ಜನ ಸದಸ್ಯರು ಸಹಿ ಮಾಡಿ ತಂದುಕೊಟ್ಟಿದ್ದಾರೆ. ಮಾನ್ಯ ಸಭಾನಾಯಕರು ಈ ಸದನದಲ್ಲಿ ಹೇಳಿದ್ದಾರೆ. ತಾವೂ ಹೇಳಿದ್ದೀರಿ. ತಮಗೆ ಏನು ಸಮಸ್ಯೆ ಬಂತು "Practice and Procedure of Parliament – M.N.Kaul and S.L.Shakdher ಪುಸ್ತಕದ ರಕ್ಷಣೆಯನ್ನು ತೆಗೆದುಕೊಂಡು ಹೇಳಿದರೆ, ತಾವು ಮಾಡುವುದನ್ನೆಲ್ಲಾ ಸರಿ ಎನ್ನುವುದಕ್ಕಾಗುತ್ತದೆಯೇ? ಒಂದು ನೀತಿ ಬೇಡವೇ? ಇಡೀ ಸದನಕ್ಕೆ ಒಂದು ಗೌರವ ಬೇಡವೇ? ಸದಸ್ಯರಿಗೆ ಒಂದು ಗೌರವ ಬೇಡವೇ? ಏನನ್ನು ನಾವು ಕೇಳಿದ್ದೇವೆ? ಶೌಚಾಲಯ ಮುಂಚೆ ಹೇಗೆ ಇತ್ತೋ ಹಾಗೆಯೇ ಇರಲಿ. ಇದನ್ನು ನಾನು ಹೇಳಿದ್ದಲ್ಲ. ಮಾನ್ಯ ಪುಟ್ಟಣ್ಣನವರು ಹೇಳಿದ್ದರು. ನಂತರ ಅದಕ್ಕೆ 30 ಜನ ಸದಸ್ಯರು ಸಹಿ ಮಾಡಿ ಕೊಟ್ಟರು. ತಾವು ಈಗ "Practice and Procedure of Parliament – M.N.Kaul and S.L.Shakdher ಪುಸ್ತಕದ ರಕ್ಷಣೆಯನ್ನು ತೆಗೆದುಕೊಂಡು ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ನಮ್ಮ ಬಾಯಿ ಮುಚ್ಚಿಸುವಂತಹ ಪ್ರಯತ್ನ ಏನಿದೆ, ಅದಕ್ಕೆ ನನ್ನ ಧಿಕ್ಕಾರವಿರಲಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಕಾನೂನು ಪುಸ್ತಕಗಳನ್ನು ಓದಿ ಎಲ್ಲವನ್ನೂ ಹೇಳಿದಿರಿ. ಅದನ್ನು ನಾವು ಒಪ್ಪುತ್ತೇವೆ. ಆದರೆ ಇಲ್ಲಿರುವಂತಹ ಸಾರ್ವಜನಿಕರಿಗೆ, ಶಾಸಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಎರಡೂ ಸದನಗಳಲ್ಲಿ ಅಧಿವೇಶನ ನಡೆಯುತ್ತಿರುವಾಗಲೇ ನಾವು ಮಾತನಾಡಿದ್ದೇವೆ. ಅಂದು ಇದೇ ಮಾನ್ಯ ಸಭಾನಾಯಕರು "ಮುಂದೆ ನಡೆಯುವ ಅಧಿವೇಶನದ ಒಳಗಾಗಿ ಉಪಹಾರ ಗೃಹವನ್ನು ತೆಗೆದು ಅದನ್ನು ಶೌಚಾಲಯವನ್ನಾಗಿ ಪರಿವರ್ತನೆ ಮಾಡಿಕೊಡಲಾಗುವುದು" ಎನ್ನುವ ಉತ್ತರವನ್ನು ಕೊಟ್ಟಿದ್ದರು. ಆದರೆ ಇಂದಿನವರೆವಿಗೂ ಮಾಡಿರುವುದಿಲ್ಲ. ಇಷ್ಟು ಜನ ಸದಸ್ಯರು ಸಹಿ ಮಾಡಿಕೊಟ್ಟು ಕೇಳಿದಾಗ ತಾವು 'ಮಾತನಾಡಬಾರದು' ಎಂದು ಹೇಳಿದರೆ ನಾನೇಕೆ ಮಾತನಾಡಬೇಕು? ನಮ್ಮ ಸ್ವಂತದ್ದೇನೂ ಕೇಳಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಎಲ್ಲರೂ ಕೂಡಿ ಮಾತನಾಡಬೇಡಿ ಎಂದು ಹೇಳಿದ್ದೇನೆ. ಒಬ್ಬೊಬ್ಬರಾಗಿ ಮಾತನಾಡಿ ಎಂದು ಹೇಳಿದೆ. ಈಗ ನಿಮಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಆ ಫೈಲ್ ಎತ್ತಿ ಪಕ್ಕಕೆ ಇಟ್ಟು ಇದರ ಬಗ್ಗೆ ಚರ್ಚೆಯೇ ಇಲ್ಲ ಎಂದು ಹೇಳಿಬಿಟ್ಟಿರಿ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಹೇಳುವುದು ನನ್ನ ಕರ್ತವ್ಯ. ನೀವು ಕೇಳುವುದಿಲ್ಲ ಎಂದರೆ ನಾನೇನು ಮಾಡಲಿ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಈ ವಿಷಯದಲ್ಲಿ intervene ಆಗಬೇಕು. ನೀವು ನಮಗೆ ಸಹಕಾರ ಕೊಡಬೇಕು. ಸದಸ್ಯರಿಗೆ ಆಗಿರುವ ಅನ್ಯಾಯದ ಪರವಾಗಿ ನೀವು ದನಿಯೆತ್ತಬೇಕು.

ಇದು ಸಾರ್ವಜನಿಕರಿಗೆ ಇದ್ದಂತಹ ಶೌಚಾಲಯ. ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ತಾವು ಒಂದು ನಿಮಿಷ ಆ ಕಡೆ ಹೋಗಿ ನೋಡಿ. ನಾವು ಕ್ಯಾಂಟೀನ್ ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಬೇರೆಡೆಗೆ ಸ್ಥಳಾಂತರಿಸಿ. ವಿಧಾನ ಪರಿಷತ್ತಿನ ಸಭಾಂಗಣದ ಪಕ್ಕದಲ್ಲಿರುವ ಈ ಕೊಠಡಿಯ ಬಳಿ ನೂರಾರು ಜನ ನಿಂತಿರುತ್ತಾರೆ. ನಾವು ನಡೆದುಕೊಂಡು ಹೋಗಲು ನಮಗೆ ಜಾಗ ಬಿಡುವುದಿಲ್ಲ. ಸಾರ್ವಜನಿಕರು ಬಂದು ತಿಂಡಿ ತಿನ್ನುತ್ತಾರೆ, ಕಾಫಿ ಕುಡಿಯುತ್ತಾರೆ. Corridor ನಲ್ಲಿ ನಿಂತಿರುತ್ತಾರೆ. ಒಂದು ವೇಳೆ ಮಾನ್ಯ ಸದಸ್ಯರು ಯಾರಾದರೂ urgent ಆಗಿ ಶೌಚಾಲಯವನ್ನು ಬಳಸಬೇಕೆಂದರೆ ತಮ್ಮ ಕಛೇರಿಗೆ ಹೋಗಬೇಕು ಇಲ್ಲವೇ ನನ್ನ ಕಛೇರಿಗೆ ಬರಬೇಕು.

ಇನ್ನು ಸಾರ್ವಜನಿಕರು, ಆಪ್ತ ಸಹಾಯಕರು, ಅಂಗರಕ್ಷಕರು ಅಥವಾ ಇಲಾಖಾ ಅಧಿಕಾರಿಗಳಿಗೆ ಎಲ್ಲಿಗೆ ಹೋಗಬೇಕೆಂದು ತಿಳಿಯುತ್ತಿಲ್ಲ. Sudden ಆಗಿ ಶೌಚಾಲಯಕ್ಕೆ ಹೋಗಬೇಕೆಂದರೆ ಎಲ್ಲಿಗೆ ಹೋಗುತ್ತಾರೆ? ಇದುವರೆವಿಗೂ ಇದ್ದಂತಹ ಶೌಚಾಲಯವನ್ನು ಏಕೆ ಮುಚ್ಚಿದ್ದಾರೆ? ಮಾನ್ಯ ಸಭಾನಾಯಕರು ಎರಡು ಬಾರಿ ಉತ್ತರವನ್ನು ಕೊಡುವಾಗ "ಮುಂದಿನ ಅಧಿವೇಶನದ ಒಳಗೆ ಕ್ಯಾಂಟೀನ್ ಅನ್ನು ಸ್ಥಳಾಂತರಗೊಳಿಸಿ, ಶೌಚಾಲಯವನ್ನು ಮಾಡಲಾಗುವುದು" ಎಂದು ಹೇಳಿದ್ದಾರೆ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(853) 21.09.2021, 1.00 KG, MD **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):-**

ಹಾಗಾದರೆ, ಇಷ್ಟು ಜನ ಗೌರವಾನ್ವಿತ ಸದಸ್ಯರು ಕೇಳುವಂತಹ ಪ್ರಶ್ನೆಗೆ ಅಥವಾ ಅವರು ಕೊಟ್ಟಿರುವಂತಹ ಉತ್ತರಕ್ಕೆ ಬೆಲೆ ಇಲ್ಲವೇ? ದಯಮಾಡಿ ಇದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದಂತಹ ಕೆ.ಪ್ರತಾಪಚಂದ್ರ ಶೆಟ್ಟಿರವರು ಮತ್ತು ಎಂ.ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿರುವಂತಹ ವಿಷಯಕ್ಕೆ ನಾನು ಸಹ ಧ್ವನಿಗೂಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸದನದಲ್ಲಿರುವಂತಹ ಎಲ್ಲಾ ಗೌರವಾನ್ವಿತ ಸದಸ್ಯರು ಸಹಿ ಮಾಡಿ ತಮಗೆ ಕೊಟ್ಟಿದ್ದಾರೆ ಎನ್ನುವುದು ಇಲ್ಲಿರುವಂತಹ ಪ್ರಶ್ನೆ. ಈ ವಿಷಯ ಸದನದಲ್ಲಿ ಚರ್ಚೆಯಾಗಿರುವಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಆಶ್ವಾಸನೆ ಕೊಟ್ಟಿದ್ದಾರೆ. M.N.Kaul and S.L.Shakdher ಪುಸ್ತಕದ ಪ್ರಶ್ನೆ ಬೇರೆ, 'Practice and Procedure' ಬೇರೆ. ಆದರೆ, ಒಂದು ಆಶ್ವಾಸನೆ ಕೊಟ್ಟಿರುವಂತಹ ಸಂದರ್ಭದಲ್ಲಿ ಆ ಆಶ್ವಾಸನೆಯನ್ನು ಅನುಷ್ಠಾನಕ್ಕೆ ತರುವುದಿಲ್ಲವೆಂದರೆ, ನಾವು ಸದನದಲ್ಲಿ ಸದಸ್ಯರಾಗಿ ಏಕೆ ಇರಬೇಕು ಎನ್ನುವಂತಹ ಪ್ರಶ್ನೆ ಬರುತ್ತದೆ. ಇದು ಗಂಭೀರವಾದಂತಹ ಅಪಾದನೆ. ಆದ್ದರಿಂದ, ತಾವು ದಯಮಾಡಿ ನಿರ್ದೇಶನ ಕೊಡಬೇಕು. ಮಾನ್ಯ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರೂ ತಮಲ್ಲಿ ಮನವಿ ಮಾಡಿದ್ದೇವೆ, ಅದನ್ನು ತತ್‌ಕ್ಷಣ ಅನುಷ್ಠಾನಕ್ಕೆ ತರುವುದಕ್ಕೆ ತಾವು ನಿರ್ದೇಶನ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಯಾರೋ ತಿಂದಿದ್ದನ್ನು ಮಾನ್ಯ ಸಭಾನಾಯಕರು ಅವರ ಬಾಯಿಂದ ಒರೆಸಿಕೊಳ್ಳಬಾರದು.

**ಸಭಾಪತಿಯವರು:-** ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ತಾವು ಈ ರೀತಿ ಮಾತನಾಡಬಾರದು. ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾರು ತಿನ್ನುತ್ತಾರೋ, ಯಾವ ಬಾಯಿಗೆ ಒರೆಸಿಕೊಳ್ಳುತ್ತಾರೋ, ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರು ಯಾರ ಯಾರ ಬಾಯಿಗೆ ಒರೆಸುತ್ತಾರೆಂದು ನನಗೆ ಗೊತ್ತಿಲ್ಲ. ಸ್ವಾಭಾವಿಕವಾಗಿ ನಡೆದಿದ್ದು ಏನೆಂದರೆ, ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು

ಸಭಾಪತಿಯವರಾಗಿದ್ದಂತಹ ಸಂದರ್ಭದಲ್ಲಿ ಈ ಶೌಚಾಲಯದ ಪ್ರಶ್ನೆ ಬಂದಿತ್ತು, ಆಗ ಕ್ಯಾಂಟೀನ್‌ನನ್ನು ಬದಲಿಸಿ ಶೌಚಾಲಯವನ್ನು ಮಾಡಬೇಕೆಂದು ಹೇಳುತ್ತಾರೆ ಮತ್ತು ಸರ್ಕಾರದ ಪರವಾಗಿ ಆಶ್ವಾಸನೆ ಕೊಡಬೇಕೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ನಾನು ಮೊದಲು ಶೌಚಾಲಯ ಇದ್ದಿದನ್ನು ಕ್ಯಾಂಟೀನ್ ಮಾಡಲಾಗಿದೆ. ಬರುವ ಅಧಿವೇಶನದೊಳಗೆ ಎಲ್ಲಾ ಸದಸ್ಯರ ಜೊತೆಗೆ ಮಾತನಾಡುತ್ತೇನೆ ಹಾಗೂ ಶೌಚಾಲಯದ ನಿರ್ಮಾಣಕ್ಕೆ ಕ್ರಮಕೈಗೊಳ್ಳುತ್ತೇನೆಂಬ ಮಾತನ್ನು ಸರ್ಕಾರದ ಪರವಾಗಿ ಹೇಳಿದ್ದೇನೆ. ಆಗ ಮತ್ತೆ ಚರ್ಚೆಗಳು ಮುಂದುವರಿಯುತ್ತವೆ. ಆಗ ನಾನು ಮತ್ತೆ ಮುಂದುವರಿದು ಮಾನ್ಯ ಸದಸ್ಯರು ಹೇಳಿದಂತೆ, ಶೌಚಾಲಯದ ಬಗ್ಗೆ ಆದಷ್ಟು ಬೇಗ ಕ್ರಮಕೈಗೊಳ್ಳುತ್ತೇವೆ ಮತ್ತು ಮಾನ್ಯ ಸದಸ್ಯರಾದ ಧರ್ಮಸೇನಾರವರು ಬೇರೆ ಏನೋ ಹೇಳಿದ್ದಾರೆ, ಅದಕ್ಕೆ ಉತ್ತರ ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೆ. ಇದು ಇಲ್ಲಿಗೆ ಮುಗಿದಿತ್ತು. ನಾನು ಸಾಮಾನ್ಯವಾಗಿ ಸರ್ಕಾರದ ಪರವಾಗಿ ಉತ್ತರ ಕೊಟ್ಟರೂ ಸಹ, ಈ ವ್ಯವಸ್ಥೆ ಮಾನ್ಯ ಸಭಾಪತಿಯವರ ಅಧೀನದಲ್ಲಿ ಬರುತ್ತದೆ. ನಾನು ಹೇಳಿದ್ದು ಹೌದು ಎಂದಾದರೆ, ಮಾನ್ಯ ಸದಸ್ಯರಾದ ಕೆ.ಪ್ರತಾಪ ಚಂದ್ರ ಶೆಟ್ಟಿಯವರು ಹೌದು ಎಂದು ಹೇಳಲಿ.

ಮಾನ್ಯ ಸಭಾಪತಿಯವರೇ, ಒಂದು ಶೌಚಾಲಯದ ಘಟನೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಚರ್ಚೆಗೆ ಬರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಆದರೆ, ಸರ್ಕಾರದ ಪರವಾಗಿ ಮಾನ್ಯ ಸಭಾಪತಿಯವರ ನಿರ್ದೇಶನ ಮತ್ತು ಆದೇಶದಂತೆ ನಾವು ಒಪ್ಪಿಕೊಂಡಿದ್ದೇವೆ ಮತ್ತು ಬರುವ ಸದನದಲ್ಲಿ ಇದನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇನೆ. ಮುಂದುವರಿದು, ಸಧ್ಯದಲ್ಲಿಯೇ ಎನ್ನುವಂತಹ ಶಬ್ದವನ್ನು ಸಹ ಬಳಸಿದ್ದೇನೆ. ಆದರೆ, ತಮ್ಮ ಗಮನದಲ್ಲಿ ಇರಲಿ ಎಂದು ಹೇಳುತ್ತೇನೆ. ನಾನು ಹೇಳಿರುವಂಥದ್ದು ಏನಾದರೂ ಹೆಚ್ಚು ಕಡಿಮೆ ಇದ್ದರೆ ಸರಿಪಡಿಸಿ. ಇಡೀ ಸದನದ ಪರಿವ್ಯಾಪ್ತಿಯ ಪರಮಾಧಿಕಾರಿಗಳು ಮಾನ್ಯ ಸಭಾಪತಿಯವರ ಅಧೀನದಲ್ಲಿ ಬಂದಿರುತ್ತವೆ. ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ನಂತರ ಕೆಲವು ದಿವಸಗಳಲ್ಲಿ ನಡೆದ ಬೇರೆ ಬೇರೆ ವಿದ್ಯಾಮಾನಗಳಲ್ಲಿ ಅದು ಮತ್ತೆ ಮುಂದುವರಿದಿದೆ ಎಂದಾಗುತ್ತದೆ. ಇದರಲ್ಲಿ ಸರ್ಕಾರದ ಯಾವುದೇ ಗೊಂದಲಗಳು ಇಲ್ಲ. ಇದರ ಬಗ್ಗೆ ಮಾನ್ಯ ಸಭಾಪತಿಯವರ ಬಳಿ ಮತ್ತೊಮ್ಮೆ ಮಾತನಾಡಿ ಇದನ್ನು ಸರಿಪಡಿಸಬಹುದೇ ಎಂಬುದನ್ನು ನೋಡುತ್ತೇನೆ. ನನಗೆ ನೋವು ಏನೆಂದರೆ, ಈ ಹಿಂದೆ ಸಭಾಪತಿಗಳಾಗಿದ್ದ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ನನ್ನನ್ನು ಕಂಡವರು. ಸುಳ್ಳು ಆರೋಪಗಳನ್ನು ಮಾಡಿದ್ದಾರೆಂದು ಇದು ಸಾರ್ವತ್ರಿಕವಾಗಿ ಓದಿ ಹೇಳುವಂತಹ ದೊಡ್ಡ ಘಟನೆಯಲ್ಲ. ಇದನ್ನು ಮಾಡಬೇಕು. ಇದರಲ್ಲಿ ಯಾವುದೇ ಅನುಮಾನಗಳಿಲ್ಲ. ಈ ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಗಳಾಗಿದ್ದ ಮತ್ತು ಸುದೀರ್ಘವಾಗಿ ರಾಜಕಾರಣವನ್ನು ಕಂಡ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಈ ಒಂದು ಸಣ್ಣ ಸಮಸ್ಯೆಗೆ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಆರೋಪ ಮಾಡುವುದು ನನಗೆ ನೋವು ತಂದಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ಸ್ವಲ್ಪ ಸಭಾಪತಿಯವರ ಕಡೆಗೆ ನೋಡುವುದನ್ನು ಕಲಿಯುತ್ತೀರಾ? ಈ ರೀತಿ ತಾವು ಎದ್ದು ಎದ್ದು ಮಾತನಾಡಿದರೆ ಹೇಗೆ? ತಾವು ಸಹ ಸಭಾಪತಿಯಾಗಿದ್ದವರು. ತಾವು ಸ್ವಲ್ಪ ನೋಡಿ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಆರೋಪ ಮಾಡಿರುವುದು ಅದು ತಮ್ಮ ಮೇಲೆ ಅಲ್ಲ, ಅದು ತಮ್ಮ ಪೀಠದ ಮೇಲೆ, ಇದು ಯಾವ ನ್ಯಾಯ. ಇದರ ಹಿಂದೆ ದೊಡ್ಡ ಸಮಸ್ಯೆಗಳು ಇಲ್ಲ. ಇದು ಸರಿಪಡಿಸಬಹುದಾಗಿರುವಂತಹ ಸಮಸ್ಯೆ. ಒಂದು ವೇಳೆ, ಅವರು ನಮ್ಮನ್ನು ಕರೆದು ಏಕೆ ಈ ರೀತಿ ಮಾಡಿದ್ದೀರಿ, ಏಕೆ ಮಾಡಿಲ್ಲವೆಂದು ಕೇಳಿದ್ದರೆ, ನಾನು ಅವರ ಜೊತೆಯಲ್ಲಿ ಮಾತನಾಡಿ ಸರಿಪಡಿಸುವಂತಹ ಈ ಘಟನೆಯನ್ನು ಬಹುದೊಡ್ಡದಾಗಿ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಮಾಡಿದ್ದಾರೆ. ಆದ್ದರಿಂದ, ಸರ್ಕಾರದ ಪರವಾಗಿ ಮತ್ತೊಮ್ಮೆ ಹೇಳುತ್ತೇನೆ. ಮಾನ್ಯ ಸಭಾಪತಿಗಳಾದ ತಮ್ಮ ವ್ಯಾಪ್ತಿಯಲ್ಲಿ ಇದು ಬರುವುದರಿಂದ ತಮ್ಮ ಜೊತೆಗೆ ಚರ್ಚೆ ಮಾಡಿ ಈ ಸಮಸ್ಯೆಯನ್ನು ಬೇಗ ಪರಿಹಾರಮಾಡಬಹುದೆಂದು ನಾನು ಭಾವಿಸಿದ್ದೇನೆ. ತಾವು ಈ ವಿಚಾರದಲ್ಲಿ ಅಧಿಕಾರವನ್ನು ಸ್ಪಷ್ಟಪಡಿಸಿ ಈ ಹಕ್ಕುಚ್ಯುತಿಯನ್ನು ತಿರಸ್ಕರಿಸಿದ್ದಕ್ಕಾಗಿ ನಾನು ಪೀಠಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇದು ಸೂಕ್ಷ್ಮವಾದಂತಹ ವಿಷಯ. ನಾನು ಇದನ್ನು ಒಪ್ಪುತ್ತೇನೆ. ಈ ಅಧಿವೇಶನ ಮುಗಿದ ನಂತರ, ತಮ್ಮೆಲ್ಲರನ್ನು ಕರೆದು ನಮ್ಮ ಕಛೇರಿಯಲ್ಲಿ ಸಭೆ ಕರೆಸಿ ಇದರ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ತೀರ್ಮಾನ ಮಾಡೋಣ.

**(ಹಕ್ಕುಚ್ಯುತಿ ಸೂಚನಾ ಪ್ರಸ್ತಾವನೆಗೆ ಅನುಮತಿಯನ್ನು ಮಾನ್ಯ ಸಭಾಪತಿಯವರು ನಿರಾಕರಿಸಿದರು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 09. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021

### ಪರ್ಯಾಲೋಚನ ಪ್ರಸ್ತಾವ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):** ಮಾನ್ಯ ಸಭಾಪತಿಯವರೇ, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021 ಅನ್ನು ಮಂಡಿಸುತ್ತಿದ್ದೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದು ಒಂದು ಸಣ್ಣ ತಿದ್ದುಪಡಿ. ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆಯ ಬಗ್ಗೆ ಈ ತಿದ್ದುಪಡಿಯಲ್ಲಿ ಉಲ್ಲೇಖ ಮಾಡಲಾಗಿದೆ. ಇಲ್ಲಿಯವರೆಗೆ, ಆರ್ಥಿಕ ಹೊಣೆಗಾರಿಕೆಯ ಪ್ರಾಧಿಕಾರದ ಜವಾಬ್ದಾರಿಯನ್ನು ಲೆಕ್ಕ ಪರಿಶೋಧನಾ ಇಲಾಖೆ ನಿರ್ವಹಿಸಿರುತ್ತದೆ. ಇನ್ನೂ ಮುಂದೆ ಈ ಎರಡು ಜವಾಬ್ದಾರಿಗಳನ್ನು ನಗರ ಹಾಗೂ ಗ್ರಾಮೀಣಾ ಭಾಗದ ಸ್ಥಳೀಯ ಸಂಸ್ಥೆಗಳಿಗೆ ಪಾರದರ್ಶಕತೆ ತರುವಂತಹ ಉದ್ದೇಶಕ್ಕಾಗಿ ಮತ್ತು ಆರ್ಥಿಕ ವಿಚಾರಗಳು ಪರಿಣಾಮಕಾರಿಯಾಗಿ ಮೇಲ್ವಿಚಾರಣೆಯಾಗಲಿ ಎನ್ನುವಂತಹ ಕಾರಣಕ್ಕಾಗಿ ಈ ಎರಡನ್ನೂ ಸಹ ನಗರ ಆಡಳಿತಕ್ಕೆ ಮತ್ತು ಗ್ರಾಮೀಣಾ ಭಾಗದಲ್ಲಿ ಗ್ರಾಮಾಡಳಿತಕ್ಕೆ ಬಿಟ್ಟುಕೊಡುವಂತಹ ಒಂದು ಸಣ್ಣ ತಿದ್ದುಪಡಿಯನ್ನು ತರಲಾಗಿದೆ. ದಯವಿಟ್ಟು, ಇದಕ್ಕೆ ಅನುಮೋದನೆ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ ೨೦೨೧ ಅನ್ನು ತಂದಿದ್ದಾರೆ. ಇದು ನೋಡುವುದಕ್ಕೆ ಬಹಳ ಸಣ್ಣದಾಗಿದೆ. ಆದರೆ, ಇದರ ಪರಿಣಾಮ ಮತ್ತು ಗಾತ್ರ ಎಷ್ಟು worst ಇದೆ ಎಂದರೆ, ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕದಲ್ಲಿ ಇರುವಂತಹ ಸ್ಥಳೀಯ ಸಂಸ್ಥೆಗಳನ್ನು ಮತ್ತು ಅದರ ಹಣಕಾಸಿನ ವ್ಯವಸ್ಥೆಯನ್ನು ಯಾರು ಕೇಳದಂತೆ ಮಾಡುವಂತಹ ಒಂದು ವ್ಯವಸ್ಥೆ ಆಗುತ್ತದೆ. ಇದು ಬಹಳ ದೊಡ್ಡ ತಪ್ಪು. ಹಾಗಾಗಿ, ದಯವಿಟ್ಟು ಇದರ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಮಾನ್ಯ ಸಭಾಪತಿಯವರೇ, ಇಲ್ಲಿ ತಂದಿರುವಂತಹ ಕಲಂ.6 ರಲ್ಲಿರುವಂತಹ 'measures to enforce compliance to this act'. ಇಡೀ act ಗೆ ಈ particularly, 'Fiscal Responsibility Act' ನ compliance ಮಾಡುವುದಕ್ಕೆ ಇರುವಂತಹ ಅಧಿಕಾರ State Accounts Department ಗೆ ಇತ್ತು, ಈ ಒಂದು ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಾದಂತಹ ಗ್ರಾಮೀಣಾ ಮತ್ತು ನಗರ ಪ್ರದೇಶಗಳು. ಅದು ಗ್ರಾಮಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿ ಇರಬಹುದು ಮತ್ತು ನಗರ ಪ್ರದೇಶಗಳಲ್ಲಿರುವಂತಹ ನಗರಸಭೆಗಳು ಇರಬಹುದು, ಪಟ್ಟಣ ಪಂಚಾಯಿತಿಗಳು ಇರಬಹುದು, Municipalities ಇರಬಹುದು ಅಥವಾ Corporations ಇರಬಹುದು. ಇವೆಲ್ಲವನ್ನು ಇನ್ನೂ ಮುಂದೆ Urban Department ನೋಡುವಂತೆ ಮಾಡಿದ್ದಾರೆ. ಇಲ್ಲವಾದರೆ, Panchayat Raj Secretariat ನೋಡುವಂತೆ ಮಾಡಿದ್ದಾರೆ. ಇದರ ಪರಿಣಾಮ ಏನಾಗುತ್ತದೆ ಎಂದರೆ, present act ನಲ್ಲಿ ಬೇಕಾದಷ್ಟು State Government ಗೆ ಅವಕಾಶ ಕೊಟ್ಟಿದ್ದಾರೆ. ತಾವು ಪ್ರತಿಯೊಂದು sub-sections ಗಳನ್ನು ನೋಡಿದಾಗ sub-section (8) the State Government may by notification constitute a local fund, audit, oversee authority comprising of such officers and having such powers as may be specified in the notification. The local fund, audit, oversee authority shall submit to the State Government. Periodically report on the compliance to audit report by the local fund authorities as may be prescribed. Sub-section 8 ನಲ್ಲಿ State Government ಗೆ ಇಲ್ಲಿ ಅವಕಾಶ ಇದೆ. ಆದರೆ, ಇಲ್ಲಿ ಇವರು ಈ section ಅನ್ನೇ dilute ಮಾಡುವುದಕ್ಕೆ ಹೊರಟ್ಟಿದ್ದಾರೆ. ಈ section ಏನು ಹೇಳುತ್ತದೆ ಎಂದರೆ, measure to enforce compliance to this act.

(ಮುಂದು.,)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(854) 21-09-2021 (1.10) ಎಂವಿ-ಎಕೆ**

**(ಉಪ ಸಭಾಪತಿಯವರ ಉಪಸ್ಥಿತಿ)**

**Sri P.R. RAMESH (contd.):-**

In Section 6 of this bill, it is stated as follows:-

> "**6. Measure to enforce compliance to this Act.-** (1) The State Accounts Department shall enforce compliance with the provisions of this Act and the rules made thereunder."

ಈ ಸಬ್-ಸೆಕ್ಷನ್ ಅನ್ನು ನೋಡಿದರೆ, ಈ ಒಂದು ರಾಜ್ಯ ಲೆಕ್ಕಪತ್ರ ಇಲಾಖೆ ಇರತಕ್ಕಂಥ ಅಧಿಕಾರವನ್ನು ಈ ಸೆಕ್ಷನ್‌ನಿಂದ ನೀಡಲಾಗಿದೆ. ಇವತ್ತು ಇವರು State Accounts Department ಗೆ ಸಂಬಂಧಪಟ್ಟ section ಅನ್ನು ತೆಗೆದು, ಅದನ್ನು Urban Development Department ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ replace ಮಾಡುತ್ತಿದ್ದಾರೆ. ಈ ರೀತಿಯ replace ಮಾಡುವುದರಿಂದ, ಈ ಒಂದು ಆಡಿಟ್ ಮಾಡುವಂಥದ್ದು ಅಥವಾ ಸಿ.ಎ.ಜಿ., ವರದಿ ತಯಾರು ಮಾಡುವಂಥದ್ದು ದುರುಪಯೋಗವಾಗುವುದರ ಜೊತೆಗೆ, ವ್ಯವಸ್ಥಿತವಾಗಿ ಲೂಟಿ ಮಾಡುವುದಕ್ಕೆ ಇರುವಂತಹ ಕಾನೂನು. ಇದನ್ನು ಯಾರೂ ಕೇಳುವವರಿಲ್ಲ ಮತ್ತು ಹೇಳುವವರಿಲ್ಲ. ಅಂದರೆ ಇದು ಬೀಗ ಮತ್ತು ಬಾಗಿಲು ಇಲ್ಲದೇ ಇರುವಂತಹ ಮನೆಯಂತೆ ಆಗುತ್ತದೆ. ಅದು ಏಕೆ ಮತ್ತು ಹೇಗೆ ಎಂದು ಹೇಳುತ್ತೇನೆ ಕೇಳಿ. ಇವತ್ತಿನ ದಿವಸ ಆಡಿಟ್ ಮಾಡುವಂಥದ್ದು State Accounts Department ನವರದ್ದು. ಅದನ್ನು parent department ಗಳಾದ Urban Development Department ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ನೀಡಿದರೆ, ಅದು ಮಾನ್ಯ ಮಂತ್ರಿಗಳ ಹತ್ತಿರ ಇರುತ್ತದೆ. ಅವರು ಏನು ಬೇಕಾದರೂ ಮಾಡಿಕೊಳ್ಳಬಹುದು. There is no autonomy. ಎಲ್ಲಾ ಸ್ಥಳೀಯ ಸಂಸ್ಥೆಗಳ ಇಲಾಖೆಗಳನ್ನು State Government ಗೆ ತೆಗೆದುಕೊಂಡ ಹಾಗೆ ಆಗುತ್ತದೆ. ಹಾಗಾಗಿ ಇದು ಒಂದು ಬಹಳ ದುರದೃಷ್ಟವಾದ ತಿದ್ದುಪಡಿ ಎಂದು ಹೇಳುತ್ತೇನೆ. ಇದರಿಂದ ಬಹಳ dangerous ಆಗುತ್ತದೆ. ಈಗ ಸಿ.ಎ.ಜಿ., ವರದಿ ಎಂದು ಬರುತ್ತದೆ. ಉದಾಹರಣೆಗೆ; ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಂದಾಯವನ್ನು 2015-16ರಲ್ಲಿ zonalisation ಮಾಡಿದರು. ಆ zonalisation ಮಾಡಿದಾಗ, ಸುಮಾರು 78 ಸಾವಿರ ಆಸ್ತಿಗಳನ್ನು, zone ಪ್ರಕಾರ ಮಾಡದೆ, ಸ್ವಲ್ಪ ಕಡಿಮೆ ಆಗಿಹೋಗಿದೆ ಎಂದು, ನಾಲ್ಕು ವರ್ಷವಾದ ಮೇಲೆ ಅದಕ್ಕೆ ನೋಟಿಸ್ ಕೊಟ್ಟಿದ್ದಾರೆ. ಆ ನೋಟಿಸ್ ಅನ್ನು ಏಕೆ ಕೊಡುತ್ತಾರೆಂದರೆ, ಆ ತಪ್ಪನ್ನು ಕಂಡು ಹಿಡಿದಿದ್ದು ಸಿ.ಎ.ಜಿ., ವರದಿ. ಈ ಸಿ.ಎ.ಜಿ., ವರದಿಯಲ್ಲಿ ತಪ್ಪನ್ನು ಕಂಡುಹಿಡಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಕ್ಷಣ ಕಾರ್ಪೋರೇಶನ್‌ನವರಿಗೆ ನೋಟಿಸ್ ಬರುತ್ತದೆ. ಕಾರ್ಪೋರೇಶನ್‌ನವರಿಗೆ ನೋಟಿಸ್ ಬಂದ ತಕ್ಷಣ, ಕಾರ್ಪೋರೇಶನ್‌ನವರಿಗೆ ಇದು accountability ಆಗುತ್ತದೆ. ಇವತ್ತು ಈ ರೀತಿಯ accountability ಆಗಬೇಕೆಂದು, ಕಾರ್ಪೋರೇಶನ್‌ನವರು ಸುಮಾರು 78 ಸಾವಿರ ಜನರಿಗೆ ನೋಟಿಸ್ ಕೊಡುತ್ತಾರೆ. ಇವತ್ತು ಸಿ.ಎ.ಜಿ., ಏನು ನೋಡಿದೆ, ಆ ರೀತಿ ಅದನ್ನು Urban Development Department ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೊಟ್ಟಾಗ, ಅದನ್ನು ಕೇಳುವವರು ಮತ್ತು ಹೇಳುವವರು ಇರುವುದಿಲ್ಲ. ಅದನ್ನು ಯಾರು ಕೇಳುತ್ತಾರೆ? ಇದರ accountability ಯಾರು ಇಡುತ್ತಾರೆ? ಮತ್ತು ಯಾರ ಮೇಲೆ ಇದರ responsibility ಯನ್ನು ಫಿಕ್ಸ್ ಮಾಡುತ್ತಾರೆ? ಈಗ ಸಿ.ಎ.ಜಿ., ಇದ್ದುದ್ದರಿಂದ responsibility ಬಂತು. ಅದರಿಂದ ಇವತ್ತು ಸುಮಾರು 78 ಸಾವಿರ ಜನರಿಗೆ ನೋಟಿಸ್ ನೀಡಿದ್ದಾರೆ. ಈಗ ಅವರಿಗೆ provision ಇದೆ. ರಾಜ್ಯ ಸರ್ಕಾರಕ್ಕೆ specific ಆಗಿ ಸಬ್-ಸೆಕ್ಷನ್ 8 ಮತ್ತು 9ರಲ್ಲಿ provision ಇದೆ. The sub-section (9) reads as follows:-

> "(9) The State Government may withhold release of funds to any local fund authority which fails to furnish accounts to the concerned authority within six months from the end of the financial year."

ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಅವರು ಏಕೆ State Accounts Department ಅನ್ನು ತೆಗೆದು ಅದನ್ನು ಸುಮ್ಮನೆ ಅಲ್ಲಿ ಕುಳ್ಳಿರಿಸಿಕೊಳ್ಳುತ್ತಿದ್ದಾರೆ. ಇದರಿಂದ administrative disaster ಆಗುತ್ತದೆ. ದಯವಿಟ್ಟು, ಇದನ್ನು ಪರಿಶೀಲನೆ ಮಾಡಿ, ಇದಕ್ಕೆ ಏನಾಗುತ್ತದೆಂದು, ಕಾನೂನು ಇಲಾಖೆಯವರ ಅಭಿಪ್ರಾಯವನ್ನು ತೆಗೆದುಕೊಳ್ಳಲಿ. You ask them as to what are the repercussions? What are the long term effects of doing all these amendments? ಅವರು short term ನಲ್ಲಿ ಇದನ್ನು ನೋಡುತ್ತಿದ್ದಾರೆ. ಈಗ ಏನೋ ಒಂದು ಆಸೆಗೆ ಅಧಿಕಾರ ಮಾಡಬೇಕೆಂದು ಯಾರೋ ನನ್ನಂತಹವರು ಮಾಡುತ್ತಿರುವ ಕೆಲಸವಿದು. ದಯವಿಟ್ಟು ಇದು ರಾಜ್ಯ ಸರ್ಕಾರ ಮಾಡುವಂತಹ ಕೆಲಸವಲ್ಲ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. ಈಗ ಅವರು ಮಾಡುತ್ತಿರುವುದು ಒಂದು ಬಹಳ ದೊಡ್ಡ ತಪ್ಪಾಗುತ್ತದೆ. ಏಕೆಂದರೆ, ಮುಂದಿನ ಪೀಳಿಗೆಯವರು ಅವರನ್ನು ದೂಷಿಸುತ್ತಾರೆ. ಆದುದರಿಂದ ದಯವಿಟ್ಟು ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಲಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ (ಬೈರತಿ) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಅದನ್ನು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನಾನು ನನ್ನ ಬಗ್ಗೆ ಹೇಳಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಏಕೆ ಆ ರೀತಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಪಿ.ಆರ್.ರಮೇಶ್‌ರವರು ಮಾತನಾಡಿದಂತಹ ವಿಷಯಕ್ಕೆ ಪೂರಕವಾಗಿ ನಾನು ಕೂಡ ನನ್ನ ಅಭಿಪ್ರಾಯವನ್ನು ಈ ಅಧಿನಿಯಮಕ್ಕೆ ತಂದಿರತಕ್ಕಂಥ, ತಿದ್ದುಪಡಿಯ practicality ಬಗ್ಗೆ ಮತ್ತು ಅನುಷ್ಠಾನದ ವಾಸ್ತವತೆಯ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಪ್ರಸ್ತುತ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅದೇ ರೀತಿ ನಗರ ಸ್ಥಳೀಯ ಸಂಸ್ಥೆಗಳಾದಂತಹ  ನಗರಸಭೆ, ಪುರಸಭೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವುಗಳೆಲ್ಲದರ ಲೆಕ್ಕಪತ್ರಗಳನ್ನು ಇವತ್ತಿನ ವ್ಯವಸ್ಥೆಯಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆ ಮತ್ತು Karnataka ದ Accountant General ರವರು ನೋಡಿಕೊಳ್ಳುತ್ತಿದ್ದಾರೆ. ಕಾರಣವೇನೆಂದರೆ, ಈ ಎರಡೂ ಏನು ಸ್ವಯಂ ಸೇವಾ ಸಂಸ್ಥೆಗಳಿವೆ, ಇವುಗಳಿಗೆ ಕೇಂದ್ರ ಸರ್ಕಾರದ ಹಲವಾರು ಪುರಸ್ಕೃತ ಯೋಜನೆಗಳಲ್ಲಿಅನುದಾನ ಮತ್ತು ಸಹಾಯಧನ ಬರುತ್ತದೆ. ಅದೇ ರೀತಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ, ನಗರ ಸಂಸ್ಥೆಗಳಿಗೆ, ರಾಜ್ಯ ಸರ್ಕಾರ ಮತ್ತು ಹಣಕಾಸು ಆಯೋಗದಿಂದ ಸಾಕಷ್ಟು ಹಣ ಬರುತ್ತದೆ. ಸದನದಲ್ಲಿ ಪಂಚಾಯತ್ ರಾಜ್‌ಗೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರಿಗೆ ಇದು ಅರ್ಥವಾಗಬೇಕಾಗಿತ್ತು. ಏಕೆಂದರೆ, ಇದು ಒಂದು ಮುಖ್ಯವಾದ ತಿದ್ದುಪಡಿ ವಿಧೇಯಕ. ಮಾನ್ಯ ಸಚಿವರು ಇದ್ದಿದ್ದರೆ, ಅವರಿಗೆ ಗೊತ್ತಾಗುತ್ತಿತ್ತು; ಇದರ ಬದಲಾವಣೆಯಿಂದ ಯಾವ ರೀತಿಯಾದ ಅವ್ಯವಸ್ಥೆಯಾಗುತ್ತದೆ ಎಂದು.  ಈಗ ಆಯವ್ಯದಲ್ಲಿ ಕೊಟ್ಟಿರುವುದನ್ನು ಇವರು ಪ್ರತಿವರ್ಷ ನೋಡುತ್ತಾರೆ. ಈಗ ಈ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಲ್ಲಿ, ಪಂಚಾಯತ್ ರಾಜ್ ಮತ್ತು ನಗರಸಭೆ ಸಂಸ್ಥೆಗಳಿಗೆ ಎಷ್ಟು ಕಷ್ಟವಾಗುತ್ತಿದೆ ಎಂದು ಹೇಳಿದರೆ, ಸಭೆಯ ಮುಂದೆ ಮಂಡಿಸಲಾಗುವ ಕಾಗದ ಪತ್ರಗಳ ಸಮಿತಿ ಸಭೆಯಲ್ಲಿ ನಾವು ವಾರ್ಷಿಕ ವರದಿಗಳನ್ನು ಪರಿಶೀಲನೆ ಮಾಡುತ್ತೇವೆ. ಏಕೆಂದರೆ, ನಾನು ಸಹ ಆ ಸಮಿತಿಯಲ್ಲಿ ಇದ್ದೇನೆ. ಎಷ್ಟೋ ಬಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಲ್ಕೈದು ವರ್ಷಗಳಾದರೂ ಕೂಡ, ಪಂಚಾಯತ್ ರಾಜ್ ಆಗಲಿ ನಗರಸಭೆಯಾಗಲಿ ಲೆಕ್ಕಪತ್ರಗಳನ್ನು ಪರಿಶೋಧನೆಗೆ ತಯಾರು ಮಾಡಿರುವುದಿಲ್ಲ. ತದನಂತರ ಅದನ್ನು ತಯಾರು ಮಾಡಿದ ನಂತರ ಎ.ಜಿ.,ಯವರಿಗೆ ಬರೆಯಬೇಕು. ಆ ಎ.ಜಿ., ತಂಡದವರು ಬಂದು ಅದನ್ನು ಅಡಿಟ್ ಮಾಡಬೇಕು. ಅದನ್ನು ಅಡಿಟ್ ಮಾಡಿ ಬಂದ ನಂತರ, ಆ ಇಲಾಖೆಯ ಜಿಲ್ಲಾ ಪಂಚಾಯತ್ ಆಗಲಿ ಅಥವಾ ನಗರಸಭೆಯಾಗಲಿ, ಅವರ ವಾರ್ಷಿಕ ವರದಿಯನ್ನು ತಯಾರು ಮಾಡಿರುವುದಿಲ್ಲ. ಈ ಮಧ್ಯೆ ಎಲ್ಲಿಯಾದರೂ ಕೂಡ ಹಣ ದುರುಪಯೋಗವಾಗಿದ್ದರೆ ಅಥವಾ ಬೇರೆ ರೀತಿಯಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡುವುದರಲ್ಲಿ ಏನಾದರೂ ಕೂಡ ಲೋಪದೋಷವಾಗಿದ್ದರೆ, ಅದು ಯಾವುದು ಸಹ ಬೆಳಕಿಗೆ ಬರುವುದಿಲ್ಲ. ಆದ್ದರಿಂದ, ಈ ಎಲ್ಲಾ ಕಾರಣಗಳಿಂದ, ನಾನು ಏನನ್ನು ಹೇಳುತ್ತೇನೆಂದರೆ; ಇವತ್ತು ಏನು ಈ ವ್ಯವಸ್ಥೆ ಇದೆ, ಅದನ್ನು ಪಂಚಾಯತ್ ರಾಜ್ ಇಲಾಖೆಯಿಂದ ನಗರಾಭಿವೃದ್ಧಿ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳುತ್ತಿದ್ದಾರಲ್ಲ, ಅದಕ್ಕೆ ಅವರು ಅದನ್ನು ನೋಡಿಕೊಳ್ಳುವುದಕ್ಕೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡಿದ್ದಾರೆ, ಇದನ್ನು ಯಾರು ನೋಡಿಕೊಳ್ಳುತ್ತಾರೆ, ಅವರಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ? ಅದಕ್ಕೋಸ್ಕರವಾಗಿ, ತಾವು ದಯಮಾಡಿ, ಮಾನ್ಯ ಪಿ.ಆರ್.ರಮೇಶ್‌ರವರು ಏನು ಒಂದು ಸಲಹೆ ನೀಡಿದ್ದಾರೆ, ಅದನ್ನು ಮತ್ತೊಮ್ಮೆ ಪರ್ಯಾಲೋಚನೆ ಮಾಡಿ ಅದನ್ನು ವಿಮರ್ಶೆ ಮಾಡಲಿ. ಇದರಿಂದ ಬಹುಶಃ ಹತ್ತಾರು ವರ್ಷಗಳಾದರೂ ಕೂಡ ಯಾವ ಲೆಕ್ಕಪತ್ರಗಳು ಕೂಡ ಸರಿಯಾಗುವುದಿಲ್ಲ. ಹೊಣೆಗಾರಿಕೆ ಎನ್ನುವುದಕ್ಕಿಂತ, ಹೆಚ್ಚಾಗಿ ಲೆಕ್ಕಪತ್ರ ಇದ್ದರೆ ಅದರ ಲೆಕ್ಕ ಪರಿಶೋಧನೆ ಆಗಬೇಕು. ಕೇವಲ test audit ಮತ್ತು sample audit ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಈ ದೃಷ್ಟಿಯಲ್ಲಿ ಇದನ್ನು ಮತ್ತೊಮ್ಮೆ ಪುನರ್ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಸದನದಲ್ಲಿ ನಗರಾಭಿವೃದ್ಧಿ ಸಚಿವರು ಇದ್ದಾರೆ. ಮಾನ್ಯ ಈಶ್ವರಪ್ಪನವರು ಸಹ ಸದನದಲ್ಲಿ ಇದ್ದರು. ಈಗ ಅವರು ಹೊರಗಡೆ ಹೋಗಿರಬಹುದು. ಬಹುಶಃ ಅವರಿಗೂ ಕೂಡ ಇದರ ಬಗ್ಗೆ ಅರಿವು ಇದೆ ಎಂದು ಕಾಣುತ್ತದೆ. ಇದನ್ನು ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಬೇಕೆಂದು ಸದನದ ಮೂಲಕ ತಮ್ಮನ್ನು ಕೋರುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021 ಅನ್ನು ಸದನದ ಮುಂದೆ ಏಕೆ ತಂದಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರ ಈ ಹಿಂದೆ ಇದ್ದಂತಹ ವ್ಯವಸ್ಥೆಯಿಂದ ಏನು ತೊಂದರೆಯಾಗಿದೆ ಎಂದು ಸ್ಪಷ್ಟವಾದ ವಿವರಣೆಯನ್ನು ಕೊಟ್ಟಿಲ್ಲ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಈ ರಾಜ್ಯದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣಕಾಸಿನ ಹೊಣೆಗಾರಿಕೆಯನ್ನು ನಮ್ಮ ರಾಜ್ಯ ಲೆಕ್ಕಪತ್ರ ಇಲಾಖೆ ಮತ್ತು State Accounts Department, Accountant General Office ನವರು ಬಹಳ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಾರೆ. ಅದು Accountant General Office ನ ನಿಯಂತ್ರಣದಲ್ಲಿದೆ ಎನ್ನುವ ಕಾರಣಕ್ಕಾಗಿ, ರಾಜ್ಯದ ಇಡೀ ಹಣಕಾಸಿನ ವ್ಯವಸ್ಥೆ ಒಂದು streamline ನಲ್ಲಿದೆ. ಅವರು ಇವತ್ತು ಇದಕ್ಕೆ ಏನೇನು ಸೇರಿಸಿದ್ದಾರೆಂದರೆ, 6ನೇ ಪ್ರಕರಣದ ತಿದ್ದುಪಡಿ (1) (1) ರಲ್ಲಿ ಏನೆಂದು ಹೇಳುತ್ತಾರೆಂದರೆ;

> "ರಾಜ್ಯ ಲೆಕ್ಕಪತ್ರಗಳ ಇಲಾಖೆಯು,' ಎಂಬ ಪದಗಳ ಬದಲಾಗಿ ಮತ್ತು ಅಲ್ಪವಿರಾಮ ಚಿಹ್ನೆಗೆ "ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**(ಮುಂದು...**

(855) 21.09.2021 01.20 LL-AK

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು...):-**

ಅಂದರೆ, ರಾಜ್ಯ ಲೆಕ್ಕಪತ್ರ ಇಲಾಖೆಯ ಜವಾಬ್ದಾರಿಯನ್ನು ತೆಗೆದು ಪುನಃ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವ್ಯವಸ್ಥೆಗೆ ಕೊಡುವಂತಹ ವ್ಯವಸ್ಥೆ ಇದು. ಆದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವ್ಯವಸ್ಥೆಯಲ್ಲಿ ಈಗಾಗಲೇ ಆಗಿರತಕ್ಕಂತಹ ಅನಾಹುತಗಳ ದೊಡ್ಡ ಪಟ್ಟಿಯೇ ಇದೆ. ಆ ಕುರಿತು ವಿಚಾರಣೆಗಾಗಿ ಸರ್ಕಾರ ಸದನ ಸಮಿತಿ ರಚನೆ ಮಾಡಿರುತ್ತದೆ. ಅಂದರೆ, ಕೇಂದ್ರ ಸರ್ಕಾರದಿಂದ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಕೊಟ್ಟಂತಹ ಅನುದಾನ ನೂರಾರು ಬ್ಯಾಂಕು ಖಾತೆಗಳಿಗೆ ಹೋಗಿರುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಂತಹ ಕಾಲದಲ್ಲಿ ಸದರಿ ಯೋಜನೆಯಲ್ಲಿ ನಡೆದಂತಹ ಅವ್ಯವಹಾರವನ್ನು ನೋಡಿ ಇಡೀ ರಾಜ್ಯ ಗಾಬರಿಯಾಗಿರುತ್ತದೆ. ಆ ವ್ಯವಸ್ಥೆಯನ್ನು ಸ್ಟ್ರೀಮ್‌ಲೈನ್‌ಗೆ ತರುವುದಕ್ಕೆ ಸಾಕಷ್ಟು ಹರಸಾಹಸಪಡಬೇಕಾಯಿತು. ಅಲ್ಲದೇ, ಈಗಲೂ ಸದರಿ ಸದನ ಸಮಿತಿ ನಡೆಯುತ್ತಿದ್ದು, ಆ ಸದನ ಸಮಿತಿಗೆ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷರಾಗಿರುತ್ತಾರೆ. ಈ ಯೋಜನೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಇಂಜಿನಿಯರ್ ಈ ರೀತಿ ಯಾರಿಗೆ ಬೇಕೋ ಅವರ ಅಕೌಂಟ್‌ಗೆ ಹಣ ನೀಡಲಾಗಿರುತ್ತದೆ. Prescribed bank ಬಿಟ್ಟು ಎಲ್ಲಾ ಬ್ಯಾಂಕುಗಳಲ್ಲಿ ಅಕೌಂಟ್ ಇರುತ್ತದೆ. ಅದನ್ನು ಹೇಳುವವರು ಮತ್ತು ಕೇಳುವವರು ಯಾರು ಇಲ್ಲ. ಇವೊತ್ತಿನ ದಿವಸ ಆ ರೀತಿಯ ವ್ಯವಸ್ಥೆಗೆ ಸರ್ಕಾರ ಹೋಗಿರುತ್ತದೆ. ಹಾಗಾಗಿ, ಯಾವ ಇಲಾಖೆ ಖರ್ಚು ಮಾಡುತ್ತದೋ ಆ ಇಲಾಖೆಗೆ ಈ ಹೊಣೆಗಾರಿಕೆಯನ್ನು ಕೊಡುವುದಾದರೆ, ಅವರನ್ನು ನಿಯಂತ್ರಿಸುವವರು ಯಾರು?

ಇದರ ಜೊತೆಗೆ, ಮಾನ್ಯ ತಿಪ್ಪೇಸ್ವಾಮಿಯವರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ ಹಾಗೂ ಮಾನ್ಯ ಪಿ.ಆರ್. ರಮೇಶ್‌ರವರು ಬಹಳ ಗಂಭೀರವಾದ ವಿಚಾರವನ್ನು ಕೈಗೆತ್ತಿಕೊಂಡಿದ್ದಾರೆ. ಸರ್ಕಾರದ ಹಂತದಲ್ಲಿ ಈ ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸುವವರು ಯಾರು ಇದ್ದಾರೆ? ಇಂತಹ ಹಣಕಾಸು ವಿಷಯದಲ್ಲಿ ಎ.ಜಿ. ಆಫೀಸ್‌ನವರು ಆಡಿಟ್ ಮಾಡಿ ರಿವ್ಯೂ ಮಾಡುತ್ತಾರೆ. ಆದರೆ, ಸರ್ಕಾರದ ಹಂತದಲ್ಲಿ ಆ ರೀತಿ ಯಾರು ಮಾಡುತ್ತಾರೆ? ಅಲ್ಲದೇ, ಅಂತಹ ಹಣಕಾಸು ತಜ್ಞರು ಯಾರು ಇದ್ದಾರೆ? ಈಗಾಗಲೇ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಇಡೀ ವ್ಯವಸ್ಥೆಯಲ್ಲಿ ಆಗಿರುವಂತಹ ಅನಾಹುತಗಳನ್ನು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಒಂದು ವೇಳೆ ಈ ನಿಯಂತ್ರಣವನ್ನು ಎ.ಜಿ. ಯವರಿಂದ ತೆಗೆದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ನೀಡಿದರೆ, ಅದು ಎಲ್ಲಿಗೆ ಹೋಗಿ ನಿಲ್ಲುತ್ತದೆ? ಇದರ ಪರಿಣಾಮವನ್ನು ಸರ್ಕಾರ ಊಹಿಸಿದೆಯೇ? No, the Government has not. ಇವೊತ್ತಿನ ದಿವಸ ಈ ಸರ್ಕಾರ ಅಧಿಕಾರದಲ್ಲಿ ಇರುತ್ತದೆ, ನಾಳೆ ಹೋಗುತ್ತದೆ. ಈ ರಾಜ್ಯದ ಒಟ್ಟು ಹಣದ ಜವಾಬ್ದಾರಿ ಇದೆಯಲ್ಲ ಮತ್ತು ಕೇಂದ್ರ ಸರ್ಕಾರದಿಂದ ಎಂತೆಂತಹ ಯೋಜನೆಗಳು ಬರುತ್ತವೆಯಲ್ಲ; ಆ ಯೋಜನೆಗಳ ಬಳಕೆಯ ಮೇಲೆ ನಿಯಂತ್ರಣ ಹೇರಬೇಕಲ್ಲವೇ, ಹಾಗಾಗಿ, ಈ ವ್ಯವಸ್ಥೆ ದೊಡ್ಡ ಅನಾಹುತವನ್ನು ಸೃಷ್ಟಿ ಮಾಡುತ್ತದೆ. ಸರ್ಕಾರ ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಥವಾ ನಗರಾಭಿವೃದ್ಧಿ ಇಲಾಖೆಗೆ ಕೊಡುವಂತಹ ವ್ಯವಸ್ಥೆಯ ಪ್ರಯತ್ನ ಇದೆಯಲ್ಲ ಅದು ಕೂಡದು. ಸರ್ವತಃ ಕೂಡದು. ಎಲ್ಲಾ ದೃಷ್ಟಿಯಿಂದ ಅದು ಕೂಡದು. ಅವರು ಮಾಡುವ ಖರ್ಚಿಗೆ ಅವರೇ ನಿಯಂತ್ರಣ ಮಾಡಿಕೊಳ್ಳುವುದು ಮತ್ತು ಅದಕ್ಕೆ ಅವರೇ ಹೊಣೆಗಾರಿಕೆ ಎಂದರೆ ಏನರ್ಥ? ರಾಜ್ಯ ಲೆಕ್ಕಪತ್ರಗಳ ಇಲಾಖೆಗಳ ಇರುವಂಥದ್ದು ಏತಕ್ಕೆ? ಹಾಗಾಗಿ, ರಾಜ್ಯ ಲೆಕ್ಕಪತ್ರ ಇಲಾಖೆ ಇದೆ ಎಂಬ ಆ ಒಂದು ಭಯಕ್ಕಾಗಿ ಈ ಎಲ್ಲಾ ಇಲಾಖೆಗಳು ಶಿಸ್ತಿನಿಂದ ನಡೆಯುತ್ತಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೊತ್ತಿನ ದಿವಸ ನಾವೇನಾದರೂ ಈ ವಿಧೇಯಕವನ್ನು ಒಪ್ಪಿಕೊಂಡರೆ there will be no asker and no teller. ಅವರು ಮಾಡಿದ್ದೇ ಆಗುತ್ತದೆ. ದಯಮಾಡಿ, ಸರ್ಕಾರ ಈ ವಿಧೇಯಕದ ಮೇಲಿನ ತಿದ್ದುಪಡಿಯನ್ನು Joint Select Committee ಗೆ ಕೊಡುತ್ತದೋ ಕೊಡಲಿ. ಅದನ್ನು ಅವರು ಪರಮಾರ್ಶೆ ಮಾಡಲಿ, ಸಾಧಕ-ಬಾಧಕಗಳನ್ನು ನೋಡಲಿ. ಒಂದು ವೇಳೆ ಈ ವಿಧೇಯಕವನ್ನು ಒಪ್ಪಿಕೊಳ್ಳುವುದು ಬೇರೆ ವಿಚಾರ. ಆದರೆ, ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಯೋಚನೆ ಮಾಡಲಿ. ಶ್ರೀ ಹೆಚ್.ಕೆ. ಪಾಟೀಲ್‌ರಂತಹ ಹಿರಿಯ ಸಚಿವರಿಂದಲೇ ಸದರಿ ಇಲಾಖೆಯಲ್ಲಿ ನಡೆದಂತಹ ಅವ್ಯವಹಾರವನ್ನು ನಿಯಂತ್ರಿಸುವುದಕ್ಕೆ ಮತ್ತು ಆ ಹಣವನ್ನು ವಾಪಸ್ಸು ಪಡೆಯುವುದಕ್ಕೆ ಆಗಿರುವುದಿಲ್ಲ. ಏಕೆಂದರೆ, ಆ ಸಂದರ್ಭದಲ್ಲಿ ಕುಡಿಯುವ ನೀರಿನ ಯೋಜನೆಯಲ್ಲಿ ಯಾರ ಯಾರದ್ದೋ ಅಕೌಂಟ್‌ಗೆ ನೂರಾರು ಕೋಟಿ ರೂಪಾಯಿ ಹಣ ಹೋಗಿರುತ್ತದೆ. ಅದು ಕೇವಲ 10 ಅಥವಾ 20 ಕೋಟಿ ರೂಪಾಯಿ ಹಣ ಅಲ್ಲ. ಆದರೆ, ಸರ್ಕಾರ ಇವೊತ್ತಿನ ದಿವಸ ಹಳೆಯ ವ್ಯವಸ್ಥೆಗೆ ಮುನ್ನುಡಿ ಹಾಡುತ್ತಿರುವ ಅರ್ಥ ಏನು ಮತ್ತು ಇದರ ಪರಿಣಾಮ ಏನು? ದಯಮಾಡಿ, ಸರ್ಕಾರ ಈ ಕುರಿತು ಪರ್ಯಾಲೋಚನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ದಿನ ಚರ್ಚೆಗೆ ತಂದಿರುವಂತಹ ವಿಧೇಯಕ ಆಡಿಟ್ ಅನ್ನು ಮಾಡುತ್ತಿಲ್ಲ, ಆಡಿಟ್ ಅನ್ನು ಕಸಿದುಕೊಳ್ಳುತ್ತಿದ್ದಾರೆಂಬ ಭಾವನೆಯಿಂದ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ, ನನಗಿರುವ ಸ್ವಲ್ಪ ಮಾಹಿತಿಯ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನಗಳು ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಹೋಗಬೇಕೆನ್ನುವುದು ಸರ್ಕಾರದ ಮೂಲ ಉದ್ದೇಶವಾಗಿರುತ್ತದೆ. ಯಾವುದೇ ಪರಿಸ್ಥಿತಿಯಲ್ಲಿ ಆಡಿಟ್ ಅನ್ನು ರದ್ದು ಮಾಡಿ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುವುದಿಲ್ಲ. ಸೆಕ್ಷನ್ 8 ರಂತೆ ಆಡಿಟ್ ಅನ್ನು ರಾಜ್ಯ ಲೆಕ್ಕಪತ್ರ ಇಲಾಖೆಯೇ ಮಾಡಲಿದೆ. Definitely, there will be an audit. But the grants have to go down the line. ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇರಬಹುದು ಅಥವಾ ನಗರಾಭಿವೃದ್ಧಿ ಇಲಾಖೆ ಇರಬಹುದು, ಆ ಇಲಾಖೆಗಳಿಗೆ ಖರ್ಚು ಮಾಡುವುದಕ್ಕೆ ಮತ್ತು ಸರ್ಕಾರ ಕೇಂದ್ರ ಮತ್ತು ರಾಜ್ಯದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದಕ್ಕೆ ಈ ಕಾನೂನಿನಲ್ಲಿ ಸ್ವಲ್ಪ ತಿದ್ದುಪಡಿಯನ್ನು ತರಲಾಗುತ್ತದೆಯೇ ಹೊರೆತು, ಎಲ್ಲಾ ಇಲಾಖೆಗಳಿಗೆ 'without monitoring, without auditing, the government is going

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

to spend the money, who is going to audit' ಅನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಉದ್ಭವ ಮಾಡಿದ್ದಾರೆ, ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಸೆಕ್ಷನ್ 8 ರಂತೆ, ಸಂಪೂರ್ಣವಾಗಿರತಕ್ಕಂತಹ ಆಡಿಟ್ ಅನ್ನು ರಾಜ್ಯ ಲೆಕ್ಕ ಪತ್ರ ಇಲಾಖೆ ಮುಂದುವರೆಸುತ್ತದೆ. ಇದನ್ನು ಮಾನ್ಯ ಸಭಾಪತಿಯವರು ಗಮನಿಸಬೇಕೆಂಬ ವಿನಂತಿಯನ್ನು ನಾನು ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಆದರೆ, ನಿಗಾ ವಹಿಸುವವರು ಯಾರು? ಅದನ್ನು ಸ್ವತಂತ್ರವಾಗಿ ನೋಡುವವರು ಯಾರು?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, the same department will look after the issue.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸರ್ಕಾರದ ಹಂತದಲ್ಲಿ ಯಾವ ವ್ಯವಸ್ಥೆ ಇದೆ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, every department is there to look after those issues.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ(ತಿದ್ದುಪಡಿ) ವಿಧೇಯಕ, 2021 ನ್ನು ಮಂಡಿಸಿದ್ದಾರೆ. ಬಹುಶಃ ಆರ್ಥಿಕ ಇಲಾಖೆಯಲ್ಲಿ ಅನೇಕ ವರ್ಷಗಳಿಂದ ಒಬ್ಬರೇ ಅಪರ ಮುಖ್ಯ ಕಾರ್ಯದರ್ಶಿಗಳು ಇದ್ದಾರೆ. ಅವರ ನೇತೃತ್ವದಲ್ಲಿ ಇಡೀ ಕರ್ನಾಟಕ ರಾಜ್ಯದ ಆಯವ್ಯಯ ಮಂಡನೆಯಾಗುತ್ತಾ ಬರುತ್ತಿದೆ. ಆಗಲೇ ಮಾನ್ಯ ಪಿ.ಆರ್. ರಮೇಶ್‌ರವರು, ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಮತ್ತು ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರು ಹೇಳಿದ ಹಾಗೆ, ಈ ಹಿಂದೆ ಇದ್ದಂತಹ ಕಾನೂನನ್ನು ತೆಗೆದುಹಾಕಿ ಪರ್ಯಾಯವಾಗಿ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿರುವುದಿಲ್ಲ.

ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 2010-11 ರ ಅವಧಿಯಲ್ಲಿ ಸುಮಾರು 600 ಕೋಟಿ ರೂಪಾಯಿ ಹಣವನ್ನು ಆ ಸಂದರ್ಭದಲ್ಲಿ ಇದ್ದಂತಹ ಅಧಿಕಾರಿಗಳು ಸರ್ಕಾರದಿಂದ ನಿಗದಿಯಾಗಿರುವಂತಹ ಬ್ಯಾಂಕು ಬಿಟ್ಟು, ಇತರೆ ಬೇರೆ ಬೇರೆ ಬ್ಯಾಂಕುಗಳಲ್ಲಿ ಎಫ್.ಡಿ. ಮಾಡಿರುತ್ತಾರೆ. ಅದರ ಕರ್ಮಕಾಂಡ ನಮಗೆ ಈಗಲೂ ಅರ್ಥವಾಗಿರುವುದಿಲ್ಲ. ಅದರ ಜೊತೆಗೆ, ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರ ಸರ್ಕಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಡುಗಡೆ ಮಾಡಿದಂತಹ ಹಣದ ಅವ್ಯವಹಾರದ ಬಗ್ಗೆ ಈ ಹಿಂದೆ ಸದನ ಸಮಿತಿ ರಚನೆ ಮಾಡಿ, ಆ ಸಮಿತಿಗೆ ಶ್ರೀ ರಘುನಾಥ್ ರಾವ್ ಮಲ್ಕಾಪೂರೆಯವರು ಅಧ್ಯಕ್ಷರಾಗಿದ್ದು, ಉಪ ಸಭಾಪತಿಯವರಾದ ತಾವು, ಶ್ರೀ ಕೆ.ಟಿ. ಶ್ರೀಕಂಠೇಗೌಡರು ಮತ್ತು ನಾನು ಸದರಿ ಸಮಿತಿಯಲ್ಲಿ ಸದಸ್ಯರಾಗಿದ್ದೇವೆ. ಆ ಸಮಿತಿಯಲ್ಲಿಯೂ ಕೂಡ ಪ್ರತಿಯೊಂದು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದು, ನಮಗೆ ಇದುವರೆವಿಗೂ ಸಹ ಅರ್ಥವಾಗಿರುವುದಿಲ್ಲ. ಪ್ರತಿಯೊಂದು ಬಾರಿ ನಡೆದಂತಹ ಸಮಿತಿ ಸಭೆಗೆ ಒಬ್ಬೊಬ್ಬ ಅದಿಕಾರಿಗಳು ಒಂದೊಂದು ರೀತಿಯ ಉತ್ತರಗಳನ್ನು ಕೊಡುತ್ತಿದ್ದಾರೆ. ಅಂತಹ ಪರಿಸ್ಥಿತಿ ನಮ್ಮಲ್ಲಿ ಇರಬೇಕಾದರೆ ಈ ರೀತಿಯ ತಿದ್ದುಪಡಿಗಳು ತರುವುದರಿಂದ ಯಾವುದೇ ಪ್ರಯೋಜನವಿಲ್ಲ.

ಜೊತೆಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಬ್ಬ ಅಕೌಂಟ್ಸ್ ಕ್ಲರ್ಕ್ ಮತ್ತು ಸೆಕ್ರೆಟರಿ ಬೇಕಾಗಿದ್ದು, ಅವರುಗಳನ್ನೇ ಅಲ್ಲಿ ನೇಮಕ ಮಾಡಿರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಈ ಕಾನೂನನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವಕಾಶವಿದೆಯೇ ಮತ್ತು ಅದು ಸಾಧ್ಯವಿದೆಯೇ? ಆದರೆ, ಈ ವಿಧೇಯಕದಲ್ಲಿ ತಂದಿರುವ ತಿದ್ದುಪಡಿಯ ಸೆಕ್ಷನ್ 6 ನಲ್ಲಿ,

> "The State Accounts Department shall enforce compliance with the provisions of this Act and the rules made thereunder"

ಎಂದು ಏನಿದೆ, ಅದು ಒಂದನ್ನು ತೆಗೆಯಲಾಗಿದೆ. ಅದರ ಬದಲಾಗಿ, ರಾಜ್ಯ ಲೆಕ್ಕಪತ್ರ ಇಲಾಖೆಯ ಬದಲಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸಂಸ್ಥೆಗಳಿಗೆ ಸಂಬಂಧಿಸಿದ ನಗರಾಭಿವೃದ್ಧಿ ಇಲಾಖೆ ಎಂದು ಸೇರಿಸಲಾಗಿದೆ. ಆದರೆ, ಪ್ರಸ್ತುತ ಇರುವಂತಹ ಕಾನೂನಿನಿಂದ ಯಾವ ಅನಾನುಕೂಲ ಇದೆ ಮತ್ತು ಹೊಸ ಕಾನೂನನ್ನು ಮಾಡುವುದರಿಂದ ಏನು ಅನುಕೂಲ ಇದೆ ಎನ್ನುವುದನ್ನು ಈ ವಿಧೇಯಕವನ್ನು ಯಾರು ಮಂಡನೆ ಮಾಡುತ್ತಿದ್ದಾರೆ ಅವರು ಸವಿಸ್ತಾರವಾಗಿ ಸದನಕ್ಕೆ ಹೇಳಿದರೆ ಅರ್ಥ ಬರುತ್ತದೆ ಎಂದು ನಾನು ಹೇಳುತ್ತೇನೆ. ಹಾಗಾಗಿ, ಈಗಾಗಲೇ ಬೇರೆ ಬೇರೆ ಇಲಾಖೆಗಳಲ್ಲಿ ಹಣಕಾಸಿನ ಅವ್ಯವಹಾರ ಯಾವ್ಯಾವ ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆ ಎನ್ನುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಈ ರೀತಿಯ ಅವ್ಯವಹಾರ ಹೆಚ್ಚು ಆಗದಂತೆ ನಿಯಂತ್ರಿಸುವುದಕ್ಕೆ ಈ ಹಿಂದೆ ಯಾವ ಕಾನೂನು ಇತ್ತು, ಈಗ ಯಾವ ಕಾನೂನು ಮಾಡುವುದರಿಂದ ಅನುಕೂಲ ಇದೆ ಎಂಬುದನ್ನು ಈ ಸದನಕ್ಕೆ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಮಾತನಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ವಿವರಣೆ ಪಡೆಯದೇ ಚರ್ಚೆ ಪ್ರಾರಂಭವಾಗಿರುತ್ತದೆಯೇ? ಇದನ್ನು ತಾವು ನೋಟಿಸ್ ಮಾಡಿದ್ದೀರೋ ಅಥವಾ ಇಲ್ಲವೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿಧೇಯಕಕ್ಕೆ ಸಂಬಂಧಪಟ್ಟಂತೆ ವಿವರಣೆ ನೀಡಲಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾವ ವಿವರಣೆ ನೀಡಿದ್ದಾರೆ?

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವಪೂರ್ಣವಾದ ವಿಧೇಯಕವಾಗಿದ್ದು, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿರುವುದಿಲ್ಲವೆಂದರೆ ಏನರ್ಥ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇವಲ ವಿಧೇಯಕ ಮಂಡನೆ ಮಾಡಿದ್ದಾರಷ್ಟೇ.

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಕೆಟ್ಟ ಸಂಪ್ರದಾಯವಾಗುತ್ತಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ತಿದ್ದುಪಡಿಯನ್ನು ಯಾವ ಉದ್ದೇಶಕ್ಕಾಗಿ ತರಲಾಗಿದೆ ಎಂಬ ಬಗ್ಗೆ ಮಂಡನೆ ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯನ್ನು ತರುವುದಕ್ಕೆ ಏನು ಕಾರಣ? ಅದರ ಅವಶ್ಯಕತೆ ಏನಿದೆ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಭಾನಾಯಕರು ಇದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಭಾನಾಯಕರೇ ಇರಲಿ. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಚರ್ಚೆ ನಡೆಯಲಿ. ಚರ್ಚೆ ಮುಕ್ತಾಯವಾದ ನಂತರ ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಕನಿಷ್ಠ ಪಕ್ಷ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದರೂ ಈ ಸದನದಲ್ಲಿ ಹಾಜರಿರಬೇಕಲ್ಲವೇ?

**(ಗೊಂದಲ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಮಂಡನೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇದ್ದರೂ ಸಹ ಸಂಬಂಧಪಟ್ಟ ಸಚಿವರಾದರೂ ಸಹ ಈ ಸದನದಲ್ಲಿ ಹಾಜರಿರಬೇಕಲ್ಲವೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಈ ತಿದ್ದುಪಡಿ ವಿಧೇಯಕ ತರುವ ಅವಶ್ಯಕತೆ ಏನಿತ್ತು?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರುವಂತಹ ಅವಶ್ಯಕತೆ ಮತ್ತು ಅಗತ್ಯತೆ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪ್ರಸ್ತುತ ವಿಧೇಯಕದ ಬಗ್ಗೆ ಚರ್ಚೆಯಾಗುತ್ತಿದ್ದು, ಚರ್ಚೆ ಮುಕ್ತಾಯವಾದ ನಂತರ ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, it is not good.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಚರ್ಚೆ ಮುಕ್ತಾಯವಾದ ನಂತರ ಉತ್ತರ ಕೊಡುವುದು ಬೇರೆ. ಆದರೆ, ಸಂಬಂಧಪಟ್ಟ ಮಂತ್ರಿಗಳು ವಿಧೇಯಕದ ಬಗ್ಗೆ ಮೊದಲು ವಿವರಣೆ ನೀಡಲಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿಧೇಯಕ ಬಗ್ಗೆ ಈಗಾಗಲೇ ವಿವರಣೆ ನೀಡಲಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾವ ವಿವರಣೆ ನೀಡಿದ್ದಾರೋ ಅದು ನಮಗೆ ತಿಳಿದಿರುವುದಿಲ್ಲ. ನಾನು ನನ್ನ ಸ್ಥಾನದಲ್ಲಿಯೇ ಕುಳಿತಿರುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ವಿಧೇಯಕದ ಮೇಲೆ ಚರ್ಚೆಯಾಗಲಿ. ನಂತರ ಅದರ ವಿವರಣೆಯನ್ನು ಕೇಳೋಣ. ಈಗ ಡಾ: ತೇಜಸ್ವಿನಿ ಗೌಡರವರೇ ತಾವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಮೊದಲು ಚರ್ಚೆಯಾಗಲಿ. ನಂತರ, ಮಾನ್ಯ ಪ್ರತಿಪಕ್ಷದವರು ಕೇಳಿರುವಂತಹ ಎಲ್ಲಾ ವಿಚಾರಗಳಿಗೆ ಉತ್ತರ ಕೊಡುವುದು ಸರ್ಕಾರದ ಜವಾಬ್ದಾರಿ. ಅದರಂತೆ, ನಾವು ಉತ್ತರ ಕೊಡೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಯಿತು. ನಂತರ ಉತ್ತರ ಕೊಡಲಿ. ಅನೇಕ ಮಾನ್ಯ ಸದಸ್ಯರು ಈ ವಿಧೇಯಕಕ್ಕೆ ತಿದ್ದುಪಡಿ ತರುವಂತಹ ಅವಶ್ಯಕತೆ ಏನಿದೆ ಎನ್ನುವುದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿದ್ದಾರೆ. ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಇಲಾಖೆಗೆ ಬಂದಂತಹ ಅನುದಾನ ಅನೇಕ ಅಧಿಕಾರಿಗಳು ಯಾವ್ಯಾವುದೋ ಬ್ಯಾಂಕುಗಳು ಅಂದರೆ, ಆ ಬ್ಯಾಂಕುಗಳ ಜೊತೆ ಅವರು ಹೊಂದಾಣಿಕೆ ಮಾಡಿಕೊಂಡಿದ್ದಾರೋ ಅಥವಾ ಅಲ್ಲಿಂದ ಅವರಿಗೆ ಕಮೀಷನ್ ಇರುತ್ತದೆಯೋ ಅದು ನನಗೆ ಅರ್ಥವಾಗುವುದಿಲ್ಲ. ಆದರೆ, ಸಾವಿರಾರು ಕೋಟಿ ರೂಪಾಯಿ ಹಣವನ್ನು ಒಬ್ಬೊಬ್ಬ ಅಧಿಕಾರಿ ಒಂದೊಂದು ಬ್ಯಾಂಕ್‌ನಲ್ಲಿ ಎಫ್.ಡಿ. ಇಟ್ಟಿದ್ದಾರೆ. ಯಾವ ಅಧಿಕಾರಿ, ಯಾವ ಬ್ಯಾಂಕಿನಲ್ಲಿ, ಎಷ್ಟು ಹಣ ಎಫ್.ಡಿ. ಇಟ್ಟಿದ್ದಾರೆ ಎಂಬ ಬಗ್ಗೆ ಅಂಕಿ-ಅಂಶಗಳು ಸಹ ನಮಗೆ ಸಿಕ್ಕಿರುವುದಿಲ್ಲ.

(ಮುಂದು...)

**(856) 21-09-2021 YL-RN 1.30 (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಆ ಸಂದರ್ಭದಲ್ಲಿ ಕೌಂಟರ್ ಚೆಕ್ ಇದ್ದ ಹಾಗೆ. ಪತ್ರಾಗಾರ ಇಲಾಖೆ, CAG ಏತಕ್ಕೆ ಇರಬೇಕು? ಇದು ಸಾರ್ವಜನಿಕರ ಹಣವಾಗಿದ್ದು, ಸಾರ್ವಜನಿಕರು ಬೆವರು ಸುರಿಸಿ ದುಡಿದ ಹಣವನ್ನು ತೆರಿಗೆ ರೂಪದಲ್ಲಿ ಪಾವತಿಸುವುದರ ಮೂಲಕ ರಾಜ್ಯದ ಬೊಕ್ಕಸಕ್ಕೆ ಈ ಹಣವು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆಗೆ ಬರುತ್ತದೆ. ರಾಜ್ಯ ಪತ್ರಾಗಾರ ಇಲಾಖೆ ಹಾಗೂ ಅಕೌಂಟೆಂಟ್ ಜನರಲ್‌ರವರ ಹದ್ದಿನ ಕಣ್ಣು ಆ ಎರಡೂ ಇಲಾಖೆಗಳ ಮೇಲೆ ಇದ್ದರೆ ಒಳ್ಳೆಯದು. ಆಡಿಟ್ ಎಂದರೆ, watchdog ಇದ್ದ ಹಾಗೆ. ನಮ್ಮ ಮನೆಗಳಲ್ಲಿ ಸಾಕುವಂಥ ನಾಯಿ ಯಾವ ರೀತಿ ಮನೆಯನ್ನು ಕಾಯುತ್ತದೆಯೋ, ಆ ರೀತಿ ಆ ಹಣವನ್ನು ರಕ್ಷಣೆ ಮಾಡುವಂಥ ಕೆಲಸವಾಗಬೇಕು. Custodian ಸರ್ಕಾರದ್ದಾಗಿರಬಹುದು. ಆದರೆ, ಅದನ್ನು ಕಾಯುವಂಥ ಕೆಲಸವಾಗಬೇಕಲ್ಲವೇ? ಯಾವುದೇ ಅವ್ಯವಹಾರ ನಡೆಯದಂತೆ ನೋಡಿಕೊಳ್ಳಬೇಕಲ್ಲವೇ? ಈ ರೀತಿ ವಿಧೇಯಕವನ್ನು ಏಕಾಏಕಿಯಾಗಿ ತಿದ್ದುಪಡಿ ಮಾಡುವಂಥ ಕೆಲಸ ಸರ್ಕಾರದ ತಲೆಗೆ ಏತಕ್ಕೆ ಬಂತು ಎಂಬುದು ಗೊತ್ತಾಗುತ್ತಿಲ್ಲ. ಈ ರೀತಿಯಾಗಿ ವಿಧೇಯಕವನ್ನು ತಿದ್ದುಪಡಿ ಮಾಡುವಂಥ ಅವಶ್ಯಕತೆ ಏನಿತ್ತು? ಸರಳೀಕರಣ ಮಾಡುವುದಕ್ಕೆ ತಂದಿದ್ದಾರೆಯೇ, ಏತಕ್ಕೆ ಈ ವಿಧೇಯಕವನ್ನು ತಿದ್ದುಪಡಿ ಮಾಡಿ ತಂದಿದ್ದಾರೆ. ಈಗಾಗಲೇ ಕೌಂಟರ್ ಚೆಕ್ ಇರುವುದನ್ನು ಬೇಡ, ನೇರವಾಗಿ ವ್ಯವಹಾರ ಮಾಡಲಿ ಎಂದು ತಿದ್ದುಪಡಿ ಮಾಡಿದ್ದಾರೆ. ಇದು ಯಾವ ರೀತಿ ಆಗಿದೆ ಎಂದರೆ, ಕಾನೂನಿನ ಕೈಗೆ ಕೀಲಿ ಕೈ ಕೊಟ್ಟ ಹಾಗೆ ಆಗಿದ್ದು, ಪುನಃ ಅವರೇ ವ್ಯವಹಾರವನ್ನು ನೋಡಿಕೊಳ್ಳುವಂತಾಗಿದೆ. ಇಲಾಖೆಗೆ ಬಂದ ಹಣದ ಮೇಲೆ ಕೌಂಟರ್ ಚೆಕ್, ಹದ್ದು ಬಸ್ತು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

supervision, strict whistle ಇರುವುದನ್ನು ಹೊರತುಪಡಿಸಿ, ಅವರೇ ನೋಡಿಕೊಳ್ಳುವಂತೆ ಮಾಡಿದರೆ ಹೇಗೆ? ತಂದೆ ಮಗನ ಕೈಗೆ ಸುಮಾರು 10000 ರೂಪಾಯಿ ಹಣವನ್ನು ನೀಡಿ, ನಂತರ ಮಗ ಖರ್ಚು ಮಾಡಿ ಮನೆಗೆ ಬಂದ ಮೇಲೆ ತಂದೆ ಆ ಹಣದಲ್ಲಿ ಏನೇನು ಖರ್ಚು ಮಾಡಲಾಗಿದೆ ಎಂದು ಕೌಂಟರ್ ಚೆಕ್ ಮಾಡುವ ಹಾಗೆ, ಈ ವಿಧೇಯಕದ ಮೇಲೆಯು ಕೌಂಟರ್ ಚೆಕ್ ಇರಬೇಕಲ್ಲವೇ? ಒಂದು ವೇಳೆ ತಂದೆ ಮಗನನ್ನು ಕೇಳಲಿಲ್ಲವೆಂದರೆ, ಮಗ ಇಚ್ಛೆ ಬಂದ ಹಾಗೆ ಖರ್ಚು ಮಾಡುತ್ತಾನೆ. ಹಾಗೆಯೇ ಮುಂದೆ ಏನೇನೋ ಆಗುವ ಸಾಧ್ಯತೆ ಬರುತ್ತದೆ. ಅದೇ ರೀತಿ ತೆರಿಗೆ ರೂಪದ ಮೂಲಕ ಬಂದ ಸಾರ್ವಜನಿಕ ಹಣದ ಮೇಲೆ ಎಷ್ಟು ಕಣ್ಣು ಇಟ್ಟರೂ ಕಡಿಮೆಯೇ. ಹಾಗಾಗಿ ಮತ್ತಷ್ಟು ಕಟ್ಟುನಿಟ್ಟು ಮಾಡುವುದಕ್ಕೆ ಹೋಗಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಮೇಲೆ ಇರುವಂಥ supervision, accountability ಏನಿದೆ, ಆ Accountability ಯೇ ಇಲ್ಲದಂತಾಗಿದೆ. Accountability ಯೇ ಬೇಡ, ಹೇಗೆ ಬೇಕಾದರೂ ವ್ಯವಹಾರ ಮಾಡಬಹುದೆಂಬ ಅರ್ಥದಿಂದ ಈ ವಿಧೇಯಕದಲ್ಲಿ ತಿದ್ದುಪಡಿ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಮೂಲಕ ಸಭಾನಾಯಕರು ವಿಧೇಯಕವನ್ನು ಮಂಡಿಸಿದ್ದು, ಸ್ವಲ್ಪ ಸರಿಯಾಗಿ ವಿವರಣೆಯನ್ನು ನೀಡಿದರೆ, ಗೌರವಾನ್ವಿತ ಸದಸ್ಯರಲ್ಲಿರುವ ಸಂಶಯಗಳನ್ನು ನಿವಾರಣೆ ಮಾಡಿದಂತಾಗುತ್ತದೆ.

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿರುವುದಕ್ಕೆ ಧನ್ಯವಾದಗಳು. ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021 ವಿಧಾನಸಭೆಯಿಂದ ಸರ್ವಾನುಮತದಿಂದ ಅಂಗೀಕಾರವಾಗಿ ಈ ಸದನದ ಅಂಗೀಕಾರಕ್ಕಾಗಿ ತಂದಿರುವಂಥ ಈ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಹಿರಿಯರು ಮತ್ತು ವಿರೋಧ ಪಕ್ಷದ ಕೆಲವು ಮುತ್ಸದ್ದಿಗಳು ಈ ವಿಧೇಯಕದ ಮೇಲೆ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಸರ್ಕಾರದ ಭಾಗವಾಗಿ ನಮ್ಮ ಸರ್ಕಾರವು ತಂದಿರುವಂಥ ಈ ತಿದ್ದುಪಡಿ ವಿಧೇಯಕ ಏನಿದೆ, ಇದರಲ್ಲಿ ಹಣಕಾಸಿನ ವಿಚಾರ ಬಂದಾಗ ಲೋಪದೋಷವಾಗಲಿ, ದುರುಪಯೋಗವಾಗಲಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಾಗಲಿ ಹಾಗೂ ಸಾರ್ವಜನಿಕರ ತೆರಿಗೆ ಹಣ ಪೋಲಾಗಬಾರದು ಎನ್ನುವಂಥ ವಿಚಾರವಾಗಿಯೇ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಚರ್ಚೆ ಮಾಡುತ್ತಿರುವುದು. ಆ ರೀತಿ ದುರುಪಯೋಗವಾಗುವುದಕ್ಕೆ ಯಾವುದೇ ಅವಕಾಶ ಇಲ್ಲವೆಂದು ಹಾಗೂ ಅಧಿನಿಯಮದ ಪಾಲನೆಯ ಮೇಲ್ವಿಚಾರಣೆಯನ್ನು ಮಾಡಲು ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇರವಾಗಿ, ಈ ವಿಧೇಯಕವು ಸ್ಪಷ್ಟವಾಗಿ ತಿಳಿಸುತ್ತದೆ. ನಾವು ಇನ್ನು ಯಾವ ಕಾಲದಲ್ಲಿ ಇದ್ದೇವೆ? ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಎರಡು ಪ್ರಜಾಪ್ರಭುತ್ವದಲ್ಲಿ ವಿಕೇಂದ್ರಿಕರಣ ಆಗಬೇಕೆಂದು ಹೇಳುತ್ತೇವೆ. ನಾನು ಇವತ್ತು ಒಂದು ಅಂಶವನ್ನು ಉಲ್ಲೇಖ ಮಾಡಲು ಬಯಸುತ್ತೇನೆ. ಕಾಂಗ್ರೆಸ್ ಪಕ್ಷದವರು ಪಂಚಾಯತ್ ರಾಜ್ ವಿಚಾರ ಬಂದಾಗ ಶ್ರೀ ರಾಜೀವ್ ಗಾಂಧಿಯವರ ಹೆಸರನ್ನು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅಧಿಕಾರವನ್ನು ಕೇಂದ್ರೀಕೃತವಾಗಿ ಮಾಡಬೇಕೇ ಅಥವಾ ಈ ಸರ್ಕಾರ ಅಧಿಕಾರವನ್ನು ಕೆಳಮಟ್ಟದವರೆಗೂ ವಿಕೇಂದ್ರೀಕರಣ ಮಾಡಬೇಕೇ? ಒಬ್ಬ ಉನ್ನತಾಧಿಕಾರಿಯೇ ಎಲ್ಲಾ ವ್ಯವಹಾರವನ್ನು ನೋಡುವಂಥ ಸ್ಥಿತಿ ಉದ್ಭವಿಸಬಾರದು. ಕಾಲ-ಕಾಲಕ್ಕೆ ನಿಧಿ ಬಳಕೆ ಆಗಬೇಕು. ಕೇಂದ್ರದ ಯೋಜನೆಗೆ ಹೋಗುವಂಥ ನಿಧಿ, ನಮ್ಮ ಸ್ಥಳೀಯ ಶಾಸಕರಿಗೆ ಬರುವಂಥ ನಿಧಿಯು ಈ ಒಂದು ಆಡಳಿತ ಯಂತ್ರದ ಅಧಿಕಾರವನ್ನು ಸುಲಲಿತವಾಗಿ ಮಾಡಲು ವೇಗವನ್ನು ಕಲ್ಪಿಸುವ ಉದ್ದೇಶವನ್ನು ಮಾತ್ರ ಈ ವಿಧೇಯಕ ಒಳಗೊಂಡಿದೆ. ಹಾಗೆಯೇ ಬೇರೆ-ಬೇರೆ ಕಡೆಗಳಲ್ಲಿ ಇಡುವಂಥ ನಿಧಿಯನ್ನು ನಿಯಂತ್ರಣ ಮಾಡುವುದಕ್ಕೆ ನಾವಾಗಲಿ, ವಿರೋಧ ಪಕ್ಷದವರಾಗಲಿ ಸುಮ್ಮನೆ ಕುಳಿತಿಲ್ಲ. ವಿರೋಧ ಪಕ್ಷವು ಆಡಳಿತ ಪಕ್ಷದಲ್ಲಿದ್ದಾಗ ಮತ್ತು ನಾವು ಆಡಳಿತ ಪಕ್ಷದಲ್ಲಿದ್ದು ನಿಧಿಯನ್ನು ನಿಯಂತ್ರಣ ಮಾಡುವಂಥ ಕೆಲಸ ಮಾಡುತ್ತೇವೆ. ಯಾವುದೇ ಪಕ್ಷದ ಜನಪ್ರತಿನಿಧಿ ಸಾರ್ವಜನಿಕರ ಹಣವನ್ನು ವ್ಯಯ ಮಾಡಲು ಬಿಡುವುದಿಲ್ಲ. ಆ ರೀತಿಯಾಗಿ ಖಾತೆಯಲ್ಲಿ ಜಮೆ ಮಾಡಿಟ್ಟುಕೊಳ್ಳುವುದು, ಬಡ್ಡಿ ಬರುವ ಹಾಗೆ ಮಾಡುವಂಥದ್ದನ್ನು ಮಾಡಲಾಗುತ್ತದೆ. ಬೆಳಗ್ಗೆ ಮಾನ್ಯ ಎನ್.ರವಿಕುಮಾರ್‌ರವರು ಆ ಅಧಿಕಾರವನ್ನು ಏತಕ್ಕೆ ಇಟ್ಟುಕೊಳ್ಳಲಾಗಿದೆ ಎನ್ನುವಂಥ ಪ್ರಶ್ನೆಯನ್ನು ಕೇಳಿ, ಮಾನ್ಯ ಸಚಿವರಿಂದ ಉತ್ತರವನ್ನು ಪಡೆದುಕೊಳ್ಳಲಾಗಿದೆ. ಆ ರೀತಿಯಾಗಿ ಸರಿಪಡಿಸುವುದಕ್ಕಾಗಿಯೇ ಈ ಸದನ ಇರುವುದು. ಹಾಗೆಯೇ ಪರಿಶೀಲನಾ ವರದಿಗೆ ಸಂಬಂಧಿಸಿದಂತೆ, ಹಣದ ಉಪಯೋಗ ಎಲ್ಲಿಯವರೆಗೆ ಬಂದಿದೆ, ಏನಾಗಿದೆ ಎಂಬುದನ್ನು ಪರಿಶೀಲನೆ ಮಾಡಲು ಕೆಳ ಅಧಿಕಾರಿಗಳಿಗೆ ಸಂಬಳವನ್ನು ನೀಡುವಂಥ ಆಡಳಿತ ವ್ಯವಸ್ಥೆ ಮಾಡಲಾಗಿದೆ. ಅವರಿಗೂ ಒಂದಿಷ್ಟು ಕೆಲಸ ನೀಡಿದಂತಾಗುತ್ತದೆ. ಕಾರ್ಯದರ್ಶಿಯವರ ಹಂತದಲ್ಲಿಯೇ ವ್ಯವಹಾರ ಮಾಡಿದರೆ ಆಡಳಿತಾತ್ಮಕವಾಗಿ ಚೆನ್ನಾಗಿ ನಡೆಯುತ್ತಿದೆ ಎನ್ನುವಂಥ ಸದುದ್ದೇಶವನ್ನು ಬಿಟ್ಟರೆ, ಯಾವುದೇ ರೀತಿಯ ಆರ್ಥಿಕ ದುರುಪಯೋಗ ಮಾಡಲು ಈ ತಿದ್ದುಪಡಿ ವಿಧೇಯಕದಲ್ಲಿ ಅವಕಾಶ ಇಲ್ಲವೆಂದು ಹೇಳುತ್ತಾ, ಖಂಡಿತವಾಗಿ ಈ ಒಂದು ಒಳ್ಳೆಯ ವಿಧೇಯಕಕ್ಕೆ ಈ ಸದನದಲ್ಲಿರುವ ಎಲ್ಲರೂ ಸರ್ವಾನುಮತದಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗೀಕಾರವನ್ನು ನೀಡಿದರೆ ಸತ್ಸಂಪ್ರದಾಯವನ್ನು ಪಾಲಿಸಿದಂತಾಗುತ್ತದೆ ಎಂದು ಹೇಳುತ್ತಾ, ಈ ವಿಧೇಯಕವನ್ನು ಸಮರ್ಥಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003ರಲ್ಲಿ ತಂದಿರುವಂಥ ಕಾಯ್ದೆಗೆ ಒಂದಿಷ್ಟು ತಿದ್ದುಪಡಿ ಮಾಡಲಾಗಿದೆ. ಇದರ ಮುಖ್ಯ ಉದ್ದೇಶವೇನೆಂದರೆ, ನಗರ ಮತ್ತು ಗ್ರಾಮೀಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ ಹಾಗೂ ಪಾರದರ್ಶಕತೆಯಲ್ಲಿ ಅನುಷ್ಠಾನ ತರಬೇಕೆನ್ನುವ ಉದ್ದೇಶದಿಂದಾಗಿ, ಆರ್ಥಿಕ ವಿಚಾರವನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಬೇಕೆನ್ನುವ ಕಾರಣದಿಂದಾಗಿ ಹಣಕಾಸಿನ ನಿರ್ವಹಣೆ ಮಾಡಬೇಕು, ಸಾಲಗಳನ್ನು ಪಡೆಯುವವರು ಮಿತಿಯಲ್ಲಿಯೇ ಸಾಲ ಪಡೆಯಬೇಕೆನ್ನುವ ಅರಿವು ಇರಬೇಕು, ಹಣಕಾಸನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕೆನ್ನುವುದು ಈ ತಿದ್ದುಪಡಿ ವಿಧೇಯಕದ ಮುಖ್ಯ ಉದ್ದೇಶ ಎನ್ನುವಂಥ ವಿಚಾರವನ್ನು ಈಗಾಗಲೇ ಸದನದ ಗಮನಕ್ಕೆ ತರಲಾಗಿದೆ. ರಾಜ್ಯ ಲೆಕ್ಕ ಪತ್ರಗಳ ಇಲಾಖೆಯು ಅಧಿನಿಯಮದ ಜವಾಬ್ದಾರಿಯನ್ನು ಹೊಂದಿದ್ದು, ಅದನ್ನು ಪ್ರಕರಣ ೬(೧) ಕ್ಕೆ ತಿದ್ದುಪಡಿ ತಂದು 'ರಾಜ್ಯ ಲೆಕ್ಕಪತ್ರಗಳ ಇಲಾಖೆ ಬದಲಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ' ಎಂಬ ಪದಗಳನ್ನು ಪ್ರತಿಯೋಜಿಸಿ, ಆಯಾಯ ಇಲಾಖೆಗೆ ಜವಾಬ್ದಾರಿ ನೀಡಬೇಕೆಂದು ತಿಳಿಸಲಾಗಿದೆ. ವಿರೋಧ ಪಕ್ಷದವರ ಚರ್ಚೆ ಏನೆಂದರೆ, ಅದರ ಲೋಪದೋಷಗಳನ್ನು ಯಾರು ನೋಡುತ್ತಾರೆ, ಲೆಕ್ಕಪತ್ರ ಪರಿಶೋಧನೆ ಯಾರು ಮಾಡುತ್ತಾರೆ ಎನ್ನುವಂಥದ್ದಾಗಿದೆ. ಲೆಕ್ಕಪತ್ರ ಪರಿಶೋಧನೆಗೆ ಸಂಬಂಧಿಸಿದಂತೆ, ಅದರ ಆಡಿಟ್‌ನ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯೇ ಒಳಗೊಂಡಿರುತ್ತದೆ. ಕಾರ್ಯನಿರ್ವಹಣೆ ಮಾಡುವ ಸಲುವಾಗಿ ನಗರಾಡಳಿತ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗೆ ನೀಡುವಂಥ ಜವಾಬ್ದಾರಿಗೆ ಸಂಬಂಧಿಸಿದಂತೆ ಮಾತ್ರ ಈ ವಿಧೇಯಕದಲ್ಲಿ ತಿದ್ದುಪಡಿ ಮಾಡಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಕೆಳ ಮನೆಯಲ್ಲಿ ಚರ್ಚೆಯಾಗಿದ್ದು, ಸರ್ಕಾರದಿಂದ ಉತ್ತರ ನೀಡಿದ ನಂತರ ವಾಸ್ತವಿಕತೆ ಇದೆ ಎಂದು ಭಾವಿಸಿ, ಎಲ್ಲರೂ ಸರ್ವಾನುಮತದಿಂದ ವಿಧೇಯಕಕ್ಕೆ ಅನುಮೋದನೆ ನೀಡಿದ್ದಾರೆ. ಹಾಗಾಗಿ ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲಿ ವಿನಂತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವುದೇನೆಂದರೆ, ಈ ವಿಧೇಯಕದಲ್ಲಿರುವ ಸೂಕ್ಷ್ಮತೆಯನ್ನು ಈಗಾಗಲೇ ಅರ್ಥ ಮಾಡಿಕೊಂಡಿದ್ದು, ಅನುಮೋದನೆ ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ಪಷ್ಟಪಡಿಸಲು ಮಾನ್ಯ ಸಭಾನಾಯಕರಿಗೆ ಸಾಧ್ಯವಾಗುತ್ತಿಲ್ಲ ಎಂದು ಭಾವಿಸುತ್ತೇನೆ. ನನಗೆ ಆಗುತ್ತಿರುವ ಆತಂಕವೇನೆಂದರೆ, ಪರಿಶೀಲನಾ ಅಂಶಕ್ಕೆ ಸಂಬಂಧಿಸಿದಂತೆ, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಬದಲಾಗಿ ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಇಲಾಖೆಯನ್ನು ಸಕ್ಷಮ ಪ್ರಾಧಿಕಾರವಾಗಿ ಮಾಡಲು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ಈ ತಿದ್ದುಪಡಿ ಮಾಡಲಾಗಿದೆ. ಮೊದಲ ರೀತಿಯಲ್ಲಿಯೇ ಇದ್ದಿದ್ದರೆ ಆಗುತ್ತಿದ್ದಂತಹ ತೊಂದರೆ ಏನು? What is the hurdle for you? ಈಗ ಇರುವಂಥ ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದಲೇ ಈ ಎರಡೂ ಇಲಾಖೆಗಳನ್ನು streamline ಮಾಡಲು ಸಾಧ್ಯವಾಗಲಿಲ್ಲ. ಸರ್ಕಾರಿ ಭರವಸೆ ಸಮಿತಿಯಲ್ಲಿ ನೂರಾರು ಜನರ ಮೇಲೆ ಹಣ ದುರುಪಯೋಗವಾಗಿರುವ ನಿರ್ದಶನಗಳಿದ್ದು, ಇನ್ನೂ ಇತ್ಯರ್ಥ ಮಾಡಲು ಸಾಧ್ಯವಾಗಿಲ್ಲ. ಕಳೆದ ಹತ್ತಾರು ವರ್ಷಗಳಿಂದ ಹಣ ದುರುಪಯೋಗವಾಗಿರುವ ನಿರ್ದಶನಗಳಿದ್ದು, ಸಂಬಂಧಪಟ್ಟವರಿಗೆ ಹಣವನ್ನು ಇನ್ನೂ ರಿಕವರಿ ಮಾಡಲು ಸಾಧ್ಯವಾಗಿಲ್ಲ. ಅವರ ಮೇಲೆ ಕ್ರಮ ಜರುಗಿಸಲು ಸಾಧ್ಯವಾಗಿಲ್ಲ. ಈ ರೀತಿ ಇರುವಾಗ ಲೆಕ್ಕ ಪತ್ರಗಳ ಇಲಾಖೆಯನ್ನು ಹೊರತುಪಡಿಸಿ ಈ ಎರಡೂ ಇಲಾಖೆಗೆ ಜವಾಬ್ದಾರಿಯನ್ನು ನೀಡುವುದಾದರೆ, ಅದರ ಪರಿಶೀಲನೆಯನ್ನು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ನಿಭಾಯಿಸಲಾಗುತ್ತದೆ. ನಿಭಾಯಿಸಲು ಸಾಧ್ಯವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೇಂದ್ರೀಕೃತವಾಗಿರುವ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟಿದ್ದೇವೆ. ಇದರರ್ಥ ಏನೆಂದರೆ, ಈಗಾಗಲೇ ಅಪ್ಪನ ಜವಾಬ್ದಾರಿಯನ್ನು ಮಗನಿಗೆ ನೀಡಲಾಗಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಆ ರೀತಿ ಮಾಡಲಾಗಿದೆ. ತಂದೆಗೆ ಇರುವಂಥ ಜವಾಬ್ದಾರಿಯಂತೆ ರಾಜ್ಯ ಲೆಕ್ಕಪತ್ರ ಇಲಾಖೆಗೆ ಜವಾಬ್ದಾರಿ ಇರುತ್ತದೆ. ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಿದಾಗ ಅದನ್ನು ಕಣ್ಗಾವಲು ಇಡುವಂಥ ಜವಾಬ್ದಾರಿಯನ್ನು ಆಡಿಟ್ ಮಾಡುವ ಸಂಸ್ಥೆಗಳು ಇಟ್ಟುಕೊಂಡಿದೆ. ಅನುಷ್ಠಾನದ ಜವಾಬ್ದಾರಿಯನ್ನು ಮಾತ್ರ ಕೆಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಡಳಿತಕ್ಕೆ ಬಿಟ್ಟುಕೊಡಲಾಗಿದೆ ಹೊರತು, ಆಡಿಟ್ ಜವಾಬ್ದಾರಿಯು ಲೆಕ್ಕಪತ್ರಗಳ ಇಲಾಖೆಗೆ ಇರುತ್ತದೆ. ಅದರಲ್ಲಿ ಯಾವುದೇ ಗೊಂದಲ ಇಲ್ಲ ಮತ್ತು ಸಮಸ್ಯೆಯು ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಲೆಕ್ಕ ಪತ್ರಗಳ ಇಲಾಖೆ ಬದಲಾಗಿ ಅಧಿಕಾರ ವಿಕೇಂದ್ರಿಕರಣ ಮಾಡುವ ಅವಶ್ಯಕತೆ ಏನಿದೆ? Decentralization of power. ಬೆಂಗಳೂರಿನಲ್ಲಿ ಮಾತ್ರ ಅಧಿಕಾರ ಕೇಂದ್ರಿಕೃತವಾಗಬಾರದು, ಸ್ಥಳೀಯ ಸಂಸ್ಥೆಗಳಿಗೂ ಅಧಿಕಾರ ನೀಡಬೇಕೆನ್ನುವುದು ಬೇರೆ ವಿಚಾರ. ಮತ್ತೆ ಅದು ಬೇರೆಯ ದಕ್ಕೆ ಕೇಂದ್ರಿಕೃತವಾಗಬಾರದು. ಅಧಿಕಾರ ಕೇಂದ್ರಿಕರಣವಾಗುವುದು ಬೇರೆ, ಭ್ರಷ್ಟಚಾರ ಕೇಂದ್ರಿಕರಣವಾಗುವುದು ಬೇರೆ. ಆದರೆ, ಈ ವಿಧೇಯಕದಲ್ಲಿ ರಾಜ್ಯ ಲೆಕ್ಕಪತ್ರಗಳ ಇಲಾಖೆಯನ್ನು ತೆಗೆದು, parental ಇಲಾಖೆಗಳಿಗೆ ನೀಡುವಂಥ ಅವಶ್ಯಕತೆ ಏನಿದೆ ಎಂಬುದನ್ನು ಕೇಳಬಯಸುತ್ತೇವೆ. We are not suspecting the bonafide of the government. ಈ ವಿಧೇಯಕವನ್ನು ಈ ರೀತಿ ತಿದ್ದುಪಡಿ ಮಾಡುವುದರ ಅವಶ್ಯಕತೆ ಏನಿದೆ ಎಂಬುದಕ್ಕೆ ಸರಿಯಾಗಿ ವಿವರಣೆ ನೀಡಿ, ಈ ಸದನವನ್ನು convince ಮಾಡಬೇಕು ಅಲ್ಲವೇ?

(ಮುಂದು...)

(857) 21.09.2021/1.40/ ಎಸ್‌ಕೆ-ಆರ್‌ಎನ್

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಈ ಸದನದಲ್ಲಿರುವ ನಮ್ಮ ಸದಸ್ಯರಿಗೆ ಈ ವಿಧೇಯಕದ ಬಗ್ಗೆ ಬಹಳಷ್ಟು ಗೊಂದಲವಿದೆ. ಲೆಕ್ಕ ಪತ್ರಗಳ ಇಲಾಖೆಗಳ ಬದಲಾಗಿ, ಇದನ್ನು ಏಕೆ ಮಾಡಿದಿರಿ? ಇದಕ್ಕೆ ಏನು ಕಾರಣ? ಅದರ ಬಗ್ಗೆ ಒಂದಿಷ್ಟು ವಿವರಣೆಯನ್ನು ತಾವು ಕೊಟ್ಟರೆ ನಮಗೆ ಅರ್ಥವಾಗಿ ಬಿಡುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳಷ್ಟು ಗೊಂದಲ ಮತ್ತು ಆತಂಕವನ್ನು ಇಟ್ಟುಕೊಂಡಿದ್ದಾರೆ. ಇದರ ಅಗತ್ಯತೆ ಮತ್ತು ಅನಿವಾರ್ಯತೆ ಏನು? ತುರ್ತು ಅಗತ್ಯವಾಗಿ ತಿದ್ದುಪಡಿ ತರುವಂತಹ ಅವಶ್ಯಕತೆಯಾದರೂ ಏನಿದೆ ಎಂಬುದರ ಬಗ್ಗೆ ಪ್ರತಿ ಪಕ್ಷದ ಸದಸ್ಯರೆಲ್ಲರಿಗೂ ಮನವರಿಕೆ ಮಾಡಿಕೊಡಿ ಎಂಬುದು ಮಾನ್ಯ ವಿರೋಧಪಕ್ಷದವರ ಉದ್ದೇಶವಾಗಿದೆ. ನಾನು ತಮಗೆ ಸ್ಪಷ್ಟವಾಗಿ ಹೇಳುವುದೇನೆಂದರೆ, ಲೆಕ್ಕ ಪತ್ರದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಡಳಿತಾತ್ಮಕವಾದ ಕರ್ತವ್ಯಗಳನ್ನು ನಿರ್ವಹಿಸುವುದು ಸ್ವಲ್ಪ ಕಠಿಣ ಎಂದು ಹೇಳಿ ಇಲಾಖೆಯವರು ಹೇಳುತ್ತಿದ್ದಾರೆ. ನಮ್ಮ ಇಲಾಖೆಯಲ್ಲಿ ಸಿಬ್ಬಂದಿಯವರ ಕೊರತೆ ಮತ್ತು ಬೇರೆ ಬೇರೆ ಕೊರತೆಗಳು ಇರುತ್ತವೆ. ಈ ಕೆಳಸ್ತರಕ್ಕೆ ಕೊಟ್ಟಾಗ, ಹೆಚ್ಚು ಅನುಕೂಲಗಳಿವೆ ಎಂಬುದು ಆ ಇಲಾಖೆಯವರ ಅಭಿಪ್ರಾಯವಾಗಿದೆ. ಆಡಳಿತಾತ್ಮಕ ವಿಚಾರಗಳನ್ನು ನಿರ್ವಹಣೆಯನ್ನು ಆಡಳಿತ ಇಲಾಖೆಯವರಿಗೆ ಮಾಡುತ್ತಿದ್ದೇವೆ. ನಾವು ಯಾವ ಆಡಳಿತ ಮಾಡುತ್ತಿದ್ದೇವೋ, ಅದೇ ಇಲಾಖೆಗೆ ವರ್ಗಾಯಿಸುತ್ತೇವೆ. ಆದರೆ audit ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಲೆಕ್ಕಪತ್ರ ಇಲಾಖೆಯೇ audit ನ್ನು ನೋಡಿಕೊಳ್ಳುತ್ತದೆ. ಆಡಳಿತಾತ್ಮಕ ವಿಚಾರವನ್ನು ಮಾತ್ರ ವಿಕೇಂದ್ರಿಕರಿಸಲಾಗಿದೆ ಎಂಬುದರ ಬಗ್ಗೆ ನಾನು ಮಾನ್ಯ ಸಭಾಪತಿಯವರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021' . ಅದರಲ್ಲಿ 6ನೇ ಪ್ರಕರಣ ತಿದ್ದುಪಡಿ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003, (2003 ರ ಕರ್ನಾಟಕ ಅಧಿನಿಯಮ 41) 6 ನೇ ಪ್ರಕರಣದಲ್ಲಿ ಇದಕ್ಕೆ ಏನು ತಿದ್ದುಪಡಿ ಮಾಡಿದ್ದಾರೆ. ನಾನು ಆ ವಿಧೇಯಕವನ್ನು ಓದಿದೆ. ನನಗೆ ಅನಿಸುವುದೇನೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಬಿಡುಗಡೆ ಮಾಡುತ್ತವೆ. ಅದು ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಬರುತ್ತದೆ. ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಂದ ತಕ್ಷಣವೇ, ಅವರು corruption ಮಾಡಿಬಿಡುತ್ತಾರೆ. ಹಾಗಾಗಿ, ಅವರಿಗೆ responsibility ಅನ್ನು ಕೊಡಬಾರದು ಎನ್ನುವಂತಹ ಸಂಶಯ ಏನಿದೆ? ಈಗಾಗಲೇ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬರುತ್ತಿದೆ. ಶೇಕಡ 100 ರಷ್ಟು ಅವ್ಯವಹಾರವಾಗಿಲ್ಲ. ಎಲ್ಲೊ ಒಂದು ಕಡೆ ಉದಾಹರಣೆ ಸಿಗಬಹುದು. ಅಲ್ಲಿ ಅವ್ಯವಹಾರವಾಗಿ, ಲೆಕ್ಕ ತಪ್ಪಿ ದಾರಿ ತಪ್ಪಿದ್ದಾರೆ ಎಂಬ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಇದಕ್ಕೆ Audit Department ಇದೆ. ಈ ಒಂದು spirit of the amendment ಏನೆಂದರೆ, ಸ್ಥಳೀಯ ಸಂಸ್ಥೆಗಳನ್ನು strengthen ಮಾಡಬೇಕು. ಸ್ಥಳೀಯ ಸಂಸ್ಥೆಗಳನ್ನು competent ಮಾಡಬೇಕು. ಸ್ಥಳೀಯ ಸಂಸ್ಥೆಗಳು ಸಮರ್ಥವಾಗಿ ಕಾರ್ಯನಿರ್ವಹಣೆ ಮಾಡಬೇಕೆನ್ನುವ spirit ಇದರೊಳಗಡೆ ಇದೆ. ಎರಡನೆಯದಾಗಿ, ಸ್ಥಳೀಯ ಸಂಸ್ಥೆಗಳು ಬಹಳ ವೇಗವಾಗಿ ಜನೋಪಕಾರ್ಯ ಕೆಲಸವನ್ನು ಮಾಡಬೇಕು. ಜನರಿಗೆ ಹತ್ತಿರವಾಗಿ, ವೇಗವಾಗಿ delivery ಮಾಡಬೇಕು. ಆ ಒಂದು ಉದ್ದೇಶ ಈ ವಿಧೇಯಕದಲ್ಲಿದೆ. ಇದನ್ನು more authoritative ಆಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬೇಕು. More responsibility ಆಗಿ ಮಾಡಬೇಕು. ಸ್ಥಳೀಯ ಸಂಸ್ಥೆಗಳನ್ನು more answerable ಆಗಿ ಮಾಡಬೇಕು. ಅದಕ್ಕೆ ಪಂಚಾಯತ್ ರಾಜ್ ನಗರಾಭಿವೃದ್ಧಿ ಈ ವಿಷಯಗಳ ಸ್ಥಳೀಯ ಸಂಸ್ಥೆಗಳು ಏನಿದೆ, ಇವುಗಳಿಗೆ ಈ ಒಂದು ಅಧಿಕಾರವನ್ನು ಕೊಟ್ಟಿದೆ. ಅದರ ಅರ್ಥ ಏನೆಂದರೆ, State Account Department ಇರುವುದಿಲ್ಲವೋ ಅಥವಾ audit ಮಾಡುವುದಿಲ್ಲವೋ ಎಂದು ಹೇಳಿದರೆ, ಆ ಜಾಗಕ್ಕೆ responsibility ಅದಕ್ಕೆ ಇದ್ದೇ ಇದೆ. ಮಾನ್ಯ ಸಭಾನಾಯಕರು ಮಾತನಾಡುವಾಗ, ತಂದೆ ಇರುತ್ತಾರೆ. ತಂದೆ ನಂತರ ಮಕ್ಕಳ ಆಡಳಿತವನ್ನು ನೋಡಿಕೊಳ್ಳುತ್ತಾರೆ ಎಂದು ತಂದೆ ಹೇಳುತ್ತಾರೆ. ಅಂದರೆ ಮಕ್ಕಳು ಆಡಳಿತವನ್ನು ಕೆಡಿಸಿ ಬಿಡುತ್ತಾರಾ. ಮಕ್ಕಳ ಬಗ್ಗೆ ನಂಬಿಕೆ ಇರಲಿ. ಎಲ್ಲೋ ಒಬ್ಬರು ಮಕ್ಕಳು ದಾರಿ ತಪ್ಪಿ ಬಿಡಬಹುದು. ಬಹಳ ಮಕ್ಕಳು ದಾರಿ ತಪ್ಪಿಲ್ಲ, 'ಇಲ್ಲ' ಎಂದು ಹೇಳುವುದಾದರೆ, ಇವತ್ತಿನ ದಿವಸ ನಮ್ಮ ದೇಶ ಹಾಳಾಗಿ ಹೋಗಿಬಿಡುತ್ತಿತ್ತು. ಎಲ್ಲಾ ಕುಟುಂಬಗಳು ಹಾಳಾಗಿ ಹೋಗಿ ಬಿಡುತ್ತಿತ್ತು. ಅದಕ್ಕೆ ನನಗೆ ಅನಿಸುವುದೇನೆಂದರೆ, ತಂದೆಯಾಗಿ responsibility ನೋಡಿಕೊಳ್ಳುವುದು ಇದ್ದೇ ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೋಡಿಕೊಳ್ಳುತ್ತದೆ. Audit Department ನೋಡಿಕೊಳ್ಳುತ್ತದೆ. Local Bodies ಅನ್ನು answerable ಆಗಿ authoritative ವಾಗಿ ಮಾಡಬೇಕು. ಅದನ್ನು competent ಆಗಿ ಮಾಡಬೇಕು ಎನ್ನುವಂತಹ spirit ಯಿಂದ ಈ ಒಂದು ತಿದ್ದುಪಡಿ ಮಾಡಿದೆಯೇ ವಿನಃ ಬೇರೆ ದಾರಿ ತಪ್ಪುವಂತಹ ಭ್ರಷ್ಟಾಚಾರ ಮಾಡಿಬಿಡಬೇಕು ಎನ್ನುವಂತಹ ಉದ್ದೇಶ ಈ ವಿಧೇಯಕದಲ್ಲಿ ಇಲ್ಲ. ಆ ಹಿನ್ನಲೆಯಲ್ಲಿ ಇದಕ್ಕೊಂದು ತಿದ್ದುಪಡಿ ಮಾಡಿದೆ. ಇದೊಂದು ಸಣ್ಣ ತಿದ್ದುಪಡಿ. ಆ ಹಿನ್ನಲೆಯಲ್ಲಿ ತಿದ್ದುಪಡಿಯನ್ನು ತಂದಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ತುಂಬಾ ಹೊತ್ತಿನಿಂದ ಮಾತನಾಡಿದ್ದಾರೆ. ಮಾನ್ಯ ಸಭಾನಾಯಕರು ಎರಡು ಬಾರಿ ವಿವರಣೆ ಕೊಟ್ಟಿರುವುದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ಈಗ ಅಪ್ಪ-ಮಕ್ಕಳ ವಿಚಾರದ ಮಾನ್ಯ ರವಿಕುಮಾರ್‌ರವರು ಹೇಳಿದರು. ಇಲ್ಲಿ ಅಪ್ಪ-ಮಕ್ಕಳ ವ್ಯವಹಾರದ ವಿಚಾರ ಇಲ್ಲ. ಇದು ಹಣಕಾಸಿನ ವಿಚಾರ. ಇದರ ಉದ್ದೇಶಗಳು ಕಾರಣಗಳ ಹೇಳಿಕೆಯಲ್ಲಿರುವ ಅಧಿನಿಯಮದ ಪಾಲನೆಯ ಮೇಲ್ವಿಚಾರಣೆಯನ್ನು ಮಾಡಲು ಮತ್ತು ನಿಯತಕಾಲಿಕವಾಗಿ ಪುನರ್ ಪರಿಶೀಲನಾ ವರದಿಗಳನ್ನು ಸಲ್ಲಿಸುವ ಕಾರ್ಯವ್ಯವಸ್ಥೆಯನ್ನು ಅಧಿಸೂಚಿಸಲು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಬದಲಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೊಡುತ್ತಿದ್ದೇವೆ. ಹಣಕಾಸು ಇಲಾಖೆಯ ಜವಾಬ್ದಾರಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಇಲಾಖೆಗೆ ವಹಿಸುತ್ತಿದ್ದೇವೆ. ಹಾಗಾದರೆ, ಶಿಕ್ಷಣ ಇಲಾಖೆಗೆ ಈ ವ್ಯವಸ್ಥೆಯನ್ನು ಕೊಟ್ಟುಬಿಡಿ. ಎಲ್ಲಾ ಇಲಾಖೆಗಳಿಗೂ ಈ ವ್ಯವಸ್ಥೆಯನ್ನು ಕೊಟ್ಟು ಬಿಡಿ. ಸರ್ಕಾರದಲ್ಲಿರುವ ಎಲ್ಲಾ ಇಲಾಖೆಗಳು ಕೂಡ social concept ನಲ್ಲಿಯೇ ಕೆಲಸ ಮಾಡುತ್ತಿದೆ. ಆಯಾಯ ಇಲಾಖೆಗಳು existence ಉಳಿಯಬೇಕಲ್ಲ. ಎಲ್ಲಾ ಇಲಾಖೆಗಳಲ್ಲಿ ತ್ವರಿತವಾಗಿ ಕೆಲಸಗಳು ಆಗಬೇಕಲ್ಲ. ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಈ ವ್ಯವಸ್ಥೆಯನ್ನು ಮಾಡಿಬಿಡಿ. ನಾವು ತ್ವರಿತವಾಗಿ ಕಾರ್ಯಕ್ರಮಗಳನ್ನು ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ ಇದೆಲ್ಲ ಕೊಡಬೇಡಿ ಎಂದು ಅಧಿಕಾರಿಗಳು ಹೇಳಿದರು ಎಂದು ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದರು. ಅಧಿಕಾರಿಗಳ ಮಾತಿಗೆ ತಾವು ಕಿವಿಗೊಡಬೇಡಿ. ಇಂತಹ ವಿಚಾರ ಬಂದಾಗ, ತಾವು ವಿಮರ್ಶೆ ಮಾಡಿ. ಇದನ್ನೆಲ್ಲಾ ಅಧಿಕಾರಿಗಳೇ ಮಾಡುತ್ತಿದ್ದಾರೆ. ಈ ರೀತಿ ಅವ್ಯವಸ್ಥೆಯನ್ನು ಜನ ಪ್ರತಿನಿಧಿಗಳ ಕೈಯಿಂದ ಅಧಿಕಾರಿಗಳು ಮಾಡಿಸುತ್ತಿದ್ದಾರೆ. ಇಲ್ಲಿ ಎಲ್ಲಾ ಅಧಿಕಾರಿಗಳೇ ಮಾಡೋದು. ಒಳ್ಳೆಯದಾದರೆ, ಜನ ಪ್ರತಿನಿಧಿಗಳು. ಕೆಟ್ಟದ್ದಾದರೆ.... ಈ ರೀತಿಯಾದಂತಹ ಅವ್ಯವಸ್ಥೆ ಇದೆ. ಮಾನ್ಯ ಸಭಾನಾಯಕರೇ, ಕೆಳಮನೆಯಲ್ಲಿ ಈ ವಿಧೇಯಕದ ಮೇಲೆ ಸಂಪೂರ್ಣವಾಗಿ ಚರ್ಚೆಯಾಗಿದ್ದು, ತಮಗೆ ಅಭಿಪ್ರಾಯಗಳನ್ನು ಕೊಟ್ಟಿರಬಹುದು. ದಯವಿಟ್ಟು, ಇಲ್ಲಿ ನಾವು ನೀವು permanent ಅಲ್ಲ. ಆದರೆ ಈ ವ್ಯವಸ್ಥೆ ಮಾತ್ರ permanent. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯನ್ನು ಬಲಪಡಿಸಬೇಕು. ಅದಕ್ಕೆ ನಮ್ಮೆಲ್ಲರ ಸಹಕಾರವಿದೆ. ಇದರ ಬಗ್ಗೆ ಬಹಳಷ್ಟು ಜನ ಸದಸ್ಯರು ಈಗಾಗಲೇ ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ಯಾವ್ಯಾವ ಖಾತೆಗೆ ಬ್ಯಾಂಕಿನಲ್ಲಿ ಹಣವನ್ನು ಇಟ್ಟಿಲ್ಲ. ಪಂಚಾಯತ್ ರಾಜ್ ಅಭಿವೃದ್ಧಿಯ ಹಣವನ್ನು ಅಧಿಕಾರಿಗಳು ತಮ್ಮ ಸ್ವಂತ ಖಾತೆಯಲ್ಲಿ ಇಟ್ಟುಕೊಂಡಿದ್ದರು. ಈ ವಿಷಯದ ಬಗ್ಗೆ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಈ ಹಣವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದರೆ, ಅನೇಕ ಯೋಜನೆಗಳನ್ನು ರೂಪಿಸಬೇಕಾದದ್ದು ಬಂತು. ಅದರಿಂದ, ಈ ಹಣಕಾಸು ವಿಚಾರ ಇರುವುದರಿಂದ, ದಯವಿಟ್ಟು, ಅಧಿಕಾರಿಗಳ ಮಾತನ್ನು ಯಾವಾಗ ಕೇಳಬೇಕು. ತಮ್ಮ ವಿವೇಚನೆಯೂ ಕೂಡ ತಾವು ಮಾಡಬೇಕು. ನಾವು ಮತ್ತು ನೀವು permanent ಅಲ್ಲ. ಆದರೆ ಈ ವ್ಯವಸ್ಥೆ ಹಾಳಾಗಿ ಬಿಟ್ಟರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ತ್ವರಿತವಾಗಿ ಇದೆಲ್ಲಾ ಹಣಕಾಸು ಲಭ್ಯತೆಯನ್ನು ಕೊಟ್ಟು, ನಾವು ಅಭಿವೃದ್ಧಿ ಮಾಡಬೇಕು ಎನ್ನುವ ಚಿಂತನೆಯಲ್ಲಿ, ಈ ಹಣವನ್ನೇ ಗುಳಂ ಆದರೆ, ಯಾವ ಅಭಿವೃದ್ಧಿ ಮಾಡುತ್ತೀರಿ? ತಾವು ಅಧಿಕಾರಿಗಳ ಮೇಲೆ ಅಷ್ಟೊಂದು honest ಮತ್ತು ಪ್ರಮಾಣಿಕತೆಯನ್ನು ಇಟ್ಟಿಕೊಂಡು ಬಿಟ್ಟರೆ, ಇಂತಹ ಒಂದು ಅಧಿಕಾರವನ್ನು ರಾಜ್ಯ ಪತ್ರ ಇಲಾಖೆಯಿಂದ ತೆಗೆದುಬಿಟ್ಟು, ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಹಸ್ತಾಂತರ ಮಾಡಿಬಿಟ್ಟರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಈ ವ್ಯವಸ್ಥೆ ಉಳಿಯುತ್ತದೆಯೇ? ಎಲ್ಲಾ ಪಂಚಾಯತ್‌ಗಳು ಅಧ್ವಾನವಾಗಿ ಬಿಡುತ್ತದೆ. ಬರಿ ಬಿಲ್ ಬರೆಯುವುದೇ ವಿನಃ ಅಧಿಕಾರಿಗಳಿಂದ ಅಭಿವೃದ್ಧಿಆಗುವುದಿಲ್ಲ. ಇಂತಹ ವ್ಯವಸ್ಥೆ ಇರುವಾಗ, ದಯವಿಟ್ಟು, ಮಾನ್ಯ ಸಭಾನಾಯಕರೇ, ಇದರ ಬಗ್ಗೆ ಚರ್ಚೆಯಾಗಲಿ. ಇದನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ, ಇದನ್ನು ಮತ್ತೊಮ್ಮೆ ಈ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಇದರ ಬಗ್ಗೆ ಸಾಧಕ-ಬಾಧಕಗಳ ಬಗ್ಗೆ ಆಲೋಚನೆ ಮಾಡಿ.

**ಶ್ರೀ ಕಾಂತರಾಜ್(ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ವಿಧೇಯಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ. ಇಡೀ ಕರ್ನಾಟಕದ ಆಡಳಿತದಲ್ಲಿ ಯಾವುದಾದರೂ ದೊಡ್ಡ ಸಂಸ್ಥೆ ಇದೆ ಎಂದರೆ, ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. ಒಂದು ಜಿಲ್ಲೆಯಲ್ಲಿ ಒಬ್ಬ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಉಪ ಕಾರ್ಯದರ್ಶಿ ಹಾಗೂ ಕಾರ್ಯನಿರ್ವಹಣಾಧಿಕಾರಿ ಇರುತ್ತಾರೆ.

(ಮುಂದು)

(858) 21.09.2021, 1.50, ಟಿಸಿಹೆಚ್-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕಾಂತರಾಜ್ (ಬಿಎಂಎಲ್) ಮುಂದು:-**

ಕಟ್ಟಕಡೆಯದಾಗಿ ಆಡಳಿತ ನಡೆಸುವುದು ಗ್ರಾಮ ಪಂಚಾಯಿತಿಗಳಲ್ಲಿ. ಈ ಗ್ರಾಮ ಪಂಚಾಯಿತಿಗಳಲ್ಲಿ ವ್ಯವಸ್ಥೆ ಏನಾಗಿದೆಯೆಂದು ಸರ್ಕಾರ ಮೊದಲು ಅರಿತುಕೊಳ್ಳಬೇಕು. ಅಲ್ಲಿಗೆ ಸಾಕಷ್ಟು ಅನುದಾನವನ್ನು ಕೊಟ್ಟಿದ್ದಾರೆ. ಎಲ್ಲಾ ಸರ್ಕಾರಗಳೂ ಅನುದಾನವನ್ನು ಕೊಟ್ಟಿವೆ. ಆದರೆ ಅಲ್ಲಿ ಯಾವ ರೀತಿ ಅಭಿವೃದ್ಧಿಯಾಗಿದೆ, ಕಾಮಗಾರಿಗಳು ಯಾವ ನಡೆದಿದೆ? ಸರ್ಕಾರ ನೇರವಾಗಿ ಅವರಿಗೆ ಕೊಟ್ಟರೆ ಖಂಡಿತವಾಗಿಯು ಕಂಟ್ರೋಲ್ ಸಿಗುವುದಿಲ್ಲ. ಇನ್ನೊಂದು ವಿಚಾರವನ್ನು ಮಾನ್ಯ ಸಚಿವರಿಗೆ ಜ್ಞಾಪಿಸಲು ಇಷ್ಟಪಡುತ್ತೇನೆ. ಹತ್ತು ಸಾವಿರ ಕೋಟಿಗಿಂತಲೂ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ಬೆಳಗಾಂ ಅಧಿವೇಶನದಲ್ಲಿ ಮಾತನಾಡಿದ್ದೆವು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಏನಾಗುತ್ತಿದೆಯೆಂದು ತಮಗೆಲ್ಲಾ ಗೊತ್ತಿರಬಹುದು. ಈಗ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಹೇಳಿದಂತೆ, ಬೇರೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೇರೆ ಬ್ಯಾಂಕ್‌ಗಳಲ್ಲಿ ಅಕೌಂಟ್ ಓಪನ್ ಮಾಡಿದ್ದಾರೆ, ಕಂಟ್ರೋಲ್ ಸಿಕ್ಕಿಲ್ಲ. ನಾನು ಸರ್ಕಾರಕ್ಕೆ ಇನ್ನೊಂದು ಸಲಹೆ ಕೊಡುವುದೇನೆಂದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಎಲ್ಲವನ್ನೂ ಒಂದು ಅಕೌಂಟ್‌ನಿಂದ ವ್ಯವಹಾರ ಮಾಡಿಸಿ. ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಒಂದು ಅಕೌಂಟ್ ಇರುತ್ತದೆ, ಕೆನರಾ ಬ್ಯಾಂಕ್, ಇನ್ನಿತರೆ ಬ್ಯಾಂಕ್‌ಗಳಲ್ಲಿ ಒಂದೊಂದು ಅಕೌಂಟ್ ಇರುತ್ತದೆ. ನಿಮ್ಮ ಕರ್ನಾಟಕ ಬ್ಯಾಂಕ್‌ನಲ್ಲೇ ವ್ಯವಹಾರ ನಡೆಸಲಿ ಅಥವಾ ಯಾವುದಾದರು ಒಂದು Nationalised bank ನಲ್ಲಿ ವ್ಯವಹರಿಸಲಿ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಯಾವುದೇ transaction ಮಾಡಿದರೂ ಕೂಡ ನೀವು ಇಂತಹ ಬ್ಯಾಂಕ್‌ನಲ್ಲೇ ವ್ಯವಹರಿಸಬೇಕೆಂದು ಒಂದು ಕಾನೂನು ಮಾಡಿ. ಆ ಪಂಚಾಯಿತಿಯವರು ಯಾವ್ಯಾವ ಬ್ಯಾಂಕ್‌ನಲ್ಲಿ ವ್ಯವಹಾರ ನಡೆಸುತ್ತಿದ್ದಾರೆಂದು ಗೊತ್ತಿಲ್ಲ. ಈ ರೀತಿ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ವ್ಯವಹಾರ ನಡೆದರೆ ಸರ್ಕಾರದ ಹಣ ತುಂಬಾ ದುರುಪಯೋಗವಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ 330 ಗ್ರಾಮ ಪಂಚಾಯಿತಿಗಳಿವೆ. ಈಗಲೂ ಕೂಡ ಸುಮಾರು 50-60 ಪಿಡಿಓಗಳು ಕಡಿಮೆ ಇದ್ದಾರೆ. ಎರಡೆರಡು ಗ್ರಾಮ ಪಂಚಾಯಿತಿಗಳಿಗೆ ಅವರನ್ನು ನಿಯೋಜಿಸಿದ್ದಾರೆ. ಈಗ ಈ ಜಿಲ್ಲೆ ದೊಡ್ಡದಾಗಿದ್ದು ಜನಸಂಖ್ಯೆ ಜಾಸ್ತಿಯಾಗಿದೆ. ಗ್ರಾಮ ಪಂಚಾಯಿತಿಗಳು ಜಾಸ್ತಿಯಾಗಿವೆ. ಇಂತಹ ಸಂದರ್ಭದಲ್ಲಿ ಅವರ ಕೈಗೆ ಏನಾದರೂ ಅಧಿಕಾರ ಕೊಟ್ಟರೆ, ಖಂಡಿತವಾಗಿಯು ಹಾಳಾಗುವಂಥ ಎಲ್ಲಾ ಪ್ರಯತ್ನಗಳು ಕಾಣುತ್ತಿವೆ. ಈ ವಿಧೇಯಕದ ಬಗ್ಗೆ ಮತ್ತೆ ಪರಿಶೀಲನೆ ಮಾಡಿ. ಮಾನ್ಯ ಸಭಾಪತಿಯವರೇ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಸರ್ಕಾರ ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ಇದರ ಬಗ್ಗೆ ಇನ್ನೂ ಉನ್ನತ ಮಟ್ಟದ ಚರ್ಚೆಗಳನ್ನು ಮಾಡಿ, ಈ ವಿಧೇಯಕವನ್ನು ಪಾಸ್ ಮಾಡಬೇಕು. ಖಂಡಿತವಾಯು ಇದನ್ನು ಹೀಗೆಯೇ ಪಾಸ್ ಮಾಡಿದರೆ ಮಾರಕವಾಗುತ್ತದೆ. ದಯಮಾಡಿ ಈ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೋಟಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಹಿರಿಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಎರಡೂ ಕಡೆ ಕೊಟ್ಟಿದ್ದಾರೆ. ಆದರೆ ನಾನು ಮಾನ್ಯ ಸದಸ್ಯರುಗಳಿಗೆ ಮೊದಲೇ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಮತ್ತೊಮ್ಮೆ ವಿವರಣೆ ಕೊಡುವುದೇನೆಂದರೆ, ರಾಜ್ಯ ಲೆಕ್ಕ ಪತ್ರ ಇಲಾಖೆಯ ಬದಲಿಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ನಗರಾಡಳಿತ ಸಂಸ್ಥೆಗಳಿಗೆ ಸಕ್ಷಮ ಪ್ರಾಧಿಕಾರಕ್ಕೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳಿದೆನು. ಅಂದರೆ ಇದರ ಅರ್ಥ ಲೆಕ್ಕ ಪರಿಶೋಧನೆ ಮಾಡುವುದು ನಿಲ್ಲುವುದಿಲ್ಲ. ಏನೇ ಲೋಪದೋಷಗಳಾದರೂ ಕೂಡ ಲೆಕ್ಕಪರಿಶೋಧನೆ

ಇಲಾಖೆಯವರು ಆಡಿಟ್‌ನ್ನು ಮಾಡುತ್ತಾರೆ. ಈ ವಿಚಾರಗಳಲ್ಲಿ ಯಾರಿಗೂ ಕೂಡ ಅನುಮಾನಪಡಬೇಕಾಗಿಲ್ಲ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಮಾಡಲು ಅನೇಕ ಕಡೆಗಳಿಂದ ಕೆಲವು ಬಂದಂಥ ವ್ಯವಸ್ಥೆ. ನಾವು ಗ್ರಾಮ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ನಗರಾಡಳಿತ ಸಂಸ್ಥೆಗಳು, ಸ್ವಂತ ಸರ್ಕಾರದಂತೆ ಕೆಲಸಗಳನ್ನು ಮಾಡಬೇಕು ಎಂದು ನಾವೆಲ್ಲಾ ಹೇಳುತ್ತಿರುತ್ತೇವೆ. ಅಂತಹ ಸಂದರ್ಭದಲ್ಲಿ ನಾವು ಅವರಿಗೆ ಅಧಿಕಾರ ಕೊಟ್ಟರೆ, ಅದು ದುರುಪಯೋಗ ಆಗುತ್ತದೆಂದು ಶೇ.100ಕ್ಕೆ 100 ರಷ್ಟು ಹೇಳಬೇಕಾಗಿಲ್ಲ. ಅದನ್ನು ಕಣ್ಗಾವಲು ಮಾಡುವಂಥ ಅಧಿಕಾರಗಳು ಮತ್ತುಅವಕಾಶಗಳು ಇದೆ. ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕಾದಂಥ ಜವಾಬ್ದಾರಿಯನ್ನು ಆಯಾಯ ತತ್ಸಮ ಹಂತದ ಪ್ರಾಧಿಕಾರಗಳು ನಿರ್ವಹಿಸುತ್ತವೆಂಬ ವಿಶ್ವಾಸವನ್ನು ನಾವು ಹೊಂದಿದ್ದೇವೆ. ಆ ಕಾರಣಕ್ಕಾಗಿ ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಇದರಲ್ಲಿ ಯಾವುದೇ ಗೊಂದಲಗಳು ಕೂಡ ಇಲ್ಲ. ಯಾವುದೇ ಲೋಪದೋಷಗಳಾದರೂ ಕೂಡ ಆಡಿಟ್ ಮಾಡುವಂಥ ಅಧಿಕಾರವನ್ನು ಲೆಕ್ಕ ಪರಿಶೋಧನೆ ಇಲಾಖೆಯವರು ಕಾಯ್ದಿರಿಸಿಕೊಂಡಿದ್ದಾರೆ. ಆದ್ದರಿಂದ ತಾವು ಇದಕ್ಕೆ ಅನುಮೋದನೆ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ: -** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಭಾನಾಯಕರು ನೀಡಿದ ಉತ್ತರ ನಮಗೆ ತೃಪ್ತಿಕರವಾಗಿಲ್ಲದಿರುವುದರಿಂದ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)**

**(ಗೊಂದಲ)**

**ಉಪ ಸಭಾಪತಿಯವರು:-** ಈ ವಿಧೇಯಕದ ಬಗ್ಗೆ ಮಾತನಾಡಲು ಎಲ್ಲರಿಗೂ ಅವಕಾಶಗಳನ್ನು ಕೊಟ್ಟಿದ್ದೇನೆ. ಪುನಃ ಪುನಃ ಮಾತನಾಡಿದರೆ ಮತ್ತೆ ಇದೇ ಚರ್ಚೆಗೆ ಹೋಗುತ್ತೀರಿ ಅಷ್ಟೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಕೊಟ್ಟಂಥ ವಿವರಣೆ ತೃಪ್ತಿಕರವಾಗಿಲ್ಲ. ಮಾನ್ಯ ಸದಸ್ಯರ ಮನಸ್ಸಿನಲ್ಲಿರತಕ್ಕಂಥ ಸಂಶಯ ನಿವಾರಣೆಯಾಗುವ ರೀತಿಯಲ್ಲಿ explanation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿಲ್ಲ. We have to suspect the bona fides of this Government. ಮಾನ್ಯ ಎನ್.ರವಿಕುಮಾರ್‌ರವರು ಸ್ಥಳೀಯ ಸಂಸ್ಥೆಗಳ ಬಲವರ್ಧನೆಗೆ ನಾವು ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಸರಿಯಾದ ಉದಾಹರಣೆ ಹಾಗೂ ಅದಕ್ಕೆ ಕಾರಣಗಳನ್ನೂ ಕೂಡ ಕೊಟ್ಟಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** 1987ರಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಬಂದಾಗ, ನಾನು ಜಿಲ್ಲಾಪಂಚಾಯತ್ ಸದಸ್ಯನಾಗಿ ರಾಜಕಾರಣ ಪ್ರಾರಂಭ ಮಾಡಿದ್ದು. ಅಲ್ಲೂ ಕೂಡ ನಾನು ಪ್ರತಿಪಕ್ಷದ ನಾಯಕನಾಗಿ ನೋಡಿದ್ದೇನೆ. ಸ್ಥಳೀಯ ಸಂಸ್ಥೆಗಳಲ್ಲಿ ಯಾರ್ಯಾರು ಎಷ್ಟೆಷ್ಟು ಪ್ರೀತಿಯಿಂದ ಬಲವರ್ಧನೆ ಮಾಡಿದ್ದಾರೆ, ಯಾರ್ಯಾರು ಎಷ್ಟೆಷ್ಟು ಅಶಕ್ತ ಮಾಡಿದ್ದಾರೆಂದು ಇಡೀ ದೇಶದ ಜನಕ್ಕೆ ಹಾಗೂ ಇಡೀ ರಾಜ್ಯದ ಜನಕ್ಕೆ ಗೊತ್ತಿದೆ. ಆ ದೃಷ್ಟಿಯಿಂದ ಸರ್ಕಾರ ಕೊಟ್ಟಂಥ ವಿವರಣೆ ತೃಪ್ತಿಯಾಗಿಲ್ಲ. ಬಹುತರವಾಗಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳನ್ನು ಬಲವರ್ಧನೆ ಮಾಡುವಂಥ ವಿಚಾರವಿಲ್ಲ. ಸರ್ಕಾರ ತಂದಿರತಕ್ಕಂಥ ವಿಧೇಯಕ ಏನಿದೆ, ಇದು ಸಂಶಯ ಮೂಡಿಸುವಂಥದ್ದು ಎಂದು ನಾನು ಕಡಾಖಂಡಿವಾತಿಯು ಹೇಳುತ್ತೇನೆ. ಈ ವಿದೇಯಕವನ್ನು ಅವರು ವಾಪಸ್ಸು ಪಡೆದು, ಪುನರ್ ಪರಿಶೀಲನೆ ಮಾಡಿ ಮತ್ತೊಮ್ಮೆ ತರುವುದು ಒಳ್ಳೆಯದು ಅಥವಾ ಈ ಸದನಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅವರೇ ವಿವರಣೆ ಕೊಟ್ಟರೆ ಬಹಳ ಚೆನ್ನಾಗಿರುತ್ತದೆ. ಒಂದು ವೇಳೆ ಸರ್ಕಾರ ಈ ವಿಧೇಯಕವನ್ನು ಇವತ್ತೇ ಪಾಸ್ ಮಾಡಿಕೊಳ್ಳುತ್ತೇವೆಂದರೆ ನಮ್ಮಿಂದ ಇದಕ್ಕೆ ಒಪ್ಪಿಗೆ ಇಲ್ಲ. ನಾವು ಇದನ್ನು ಖಂಡಿಸಿ ಸಭಾತ್ಯಾಗ ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, Local Bodies strengthen ಮಾಡತಕ್ಕಂಥವರು ನೀವು. ಅದಕ್ಕೆ ನೀವು ಇದನ್ನು ಒಪ್ಪಿಕೊಳ್ಳಬೇಕು.

**(ಗೊಂದಲ)**

**ಶ್ರೀ ಕೋಟಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸ್ಥಳೀಯ ಆಡಳಿತಕ್ಕೆ ಅಧಿಕಾರ ಕೊಡಬೇಕು ಎನ್ನುವವರು ಕೂಡ ಅವರೆ. ಈಗ ಹೊರಗಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗತಕ್ಕಂಥವರು ಅವರೆ. ಇದು ಯಾವ ನ್ಯಾಯ. ಮಾನ್ಯ ಸಭಾಪತಿಯವರೇ ದಯವಿಟ್ಟು ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಆಯಿತು.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಒಳಗೊಂಡಂತೆ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿದರು)**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

" ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ
ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ
ವಿಧೇಯಕದ ಭಾಗವಾಗಿರುತ್ತದೆ "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೋಟಶ್ರೀನಿವಾಸ ಪೂಜಾರಿ, ಸಭಾನಾಯಕರು (ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು ಇವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉಪ ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ **1** ಗಂಟೆ **58** ನಿಮಿಷಗಳಿಂದ ಮುಂದೂಡಲ್ಪಟ್ಟು**,** ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

**(859) 3:20 SPR-BNS 21/09/2021**

**(ಸಭಾಪತಿಯವರ ಉಪಸ್ಥಿತಿ)**

**(ಭೋಜನ ವಿರಾಮಕ್ಕಾಗಿ 1 ಗಂಟೆ 58 ನಿಮಿಷಕ್ಕೆ ಮುಂಡೂಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 21 ನಿಮಿಷಕ್ಕೆ ಪ್ರಾರಂಭವಾಯಿತು)**

**ಸಭಾಪತಿಯವರು:-** ಈಗ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀಮತಿ ಭಾರತಿ ಶೆಟ್ಟಿ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನ್ನ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಈಗ ಸದನದಲ್ಲಿ ಉಪಸ್ಥಿತರಿಲ್ಲ.

**ಸಭಾಪತಿಯವರು:-** ಇದನ್ನು ನಂತರದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧಪಟ್ಟಂತೆ ಶ್ರೀ ಮರಿತಿಬ್ಬೇಗೌಡರವರ ವಿಷಯಕ್ಕೆ ಸಂಬಂಧಿತ ಸಚಿವರು ಜಂಟಿ ಸದನ ಸಮಿತಿ ಸಭೆಯಲ್ಲಿರುವುದರಿಂದ ಸದನಕ್ಕೆ ಅರ್ಧ ಗಂಟೆ ವಿಳಂಬವಾಗಿ ಬರುತ್ತಾರೆ. ಪ್ರಸ್ತುತ ಸದನದಲ್ಲಿ ಶ್ರೀ ಎಂ.ನಾರಾಯಣಸ್ವಾಮಿ ಮತ್ತು ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇಬ್ಬರಿಬ್ಬರೂ ಉಪಸ್ಥಿತರಿಲ್ಲ. ಹೀಗಾಗಿ ನಿಯಮ 330 ರ ಮೇರೆಗೆ ಶ್ರೀ ಎಸ್.ಎಲ್.ಭೋಜೇಗೌಡ ರವರ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತಿನ ದಿವಸ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 330 ರಡಿ ಮೈಸೂರು ಜಿಲ್ಲೆಯಲ್ಲಿ . . .

**ಸಭಾಪತಿಯವರು:-** ಒಂದು ನಿಮಿಷ ಭೋಜೇಗೌಡರೇ, ನಿಮ್ಮ ವಿಷಯಕ್ಕೆ ಸಂಬಂಧಿತ ಉತ್ತರವು ಇನ್ನೂ ಬಂದಿಲ್ಲ. ಹೀಗಾಗಿ ಉತ್ತರ ಬಂದ ಮೇಲೆ, ನಿಮ್ಮ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹಾಗೆಯೇ ಆಗಲಿ.

**ಸಭಾಪತಿಯವರು:-** ಈಗ ಶ್ರೀ ಎಂ.ನಾರಾಯಣಸ್ವಾಮಿ ಯವರ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ನಾನು ಆವಾಗಲೇ ಕರೆದಾಗ, ನೀವುಗಳು ಯಾರೂ ಸಹ ಇರಲಿಲ್ಲ. ಹೀಗಾಗಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 330 ರಡಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಾಗಿತ್ತು. ಮೊದಲು ಆ ವಿಷಯಗಳನ್ನು ತೆಗೆದುಕೊಂಡು ನಂತರದಲ್ಲಿ ನಿಮ್ಮ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪಿಸುವ ವಿಷಯಕ್ಕೆ ಯಾರು ಉತ್ತರಿಸುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಯಾರಾದರೂ ಉತ್ತರವನ್ನು ನೀಡುತ್ತಾರೆ. ಸಭಾನಾಯಕರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾರು ಉತ್ತರ ನೀಡುತ್ತಾರೆ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯಕ್ಕೆ ಯಾರು ಉತ್ತರಿಸುತ್ತಾರೆ? ಪ್ರತಿದಿನವೂ ಇದೇ ರೀತಿಯಾಗಿಯಾಗಿದೆ.

**ಸಭಾಪತಿಯವರು:-** ಈಗ ಸದನದಲ್ಲಿ ಯಾವ ಮಂತ್ರಿಗಳಿದ್ದಾರೆ? ಇನ್ನು ಮುಂದೆ ಸದನದಲ್ಲಿ ಉಪಸ್ಥಿತರಿರುವ ಮಂತ್ರಿಗಳಿಗೆ ಸಂಬಂಧಪಟ್ಟಂತಿರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಸಭಾನಾಯಕರೇ, ಸದನವನ್ನು 10 ನಿಮಿಷಗಳ ಕಾಲ ಮುಂದೂಡಲೇ? ಸದನಕ್ಕೆ ಮಂತ್ರಿಗಳೇ ಬರದಿದ್ದರೆ, ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವು ಯಾವ ಇಲಾಖೆಗೆ ಬರುತ್ತದೆ ಎಂದು ತಿಳಿಸಿ.

**ಸಭಾಪತಿಯವರು:-** ನೀವು ಯಾವ ಇಲಾಖೆಯ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ತಿಳಿಸುತ್ತೀರೋ, ಆ ವಿಷಯವನ್ನು ತೆಗೆದುಕೊಳ್ಳಲಾಗುವುದು. ಶ್ರೀ ಎಂ.ನಾರಾಯಣಸ್ವಾಮಿ ರವರ ವಿಷಯಕ್ಕೆ ಸಂಬಂಧಪಟ್ಟಂತೆ ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದಸ್ಯರು ಮಾತನಾಡುವುದನ್ನು ಪ್ರಾರಂಭಿಸಲಿ. ನಾನು ಮಂತ್ರಿಗಳನ್ನು ಬರುವುದಕ್ಕೆ ಹೇಳುತ್ತೇನೆ.

**ಸಭಾಪತಿಯವರು:-** ಸದಸ್ಯರು ಮಾತನಾಡುವಾಗ ಮಂತ್ರಿಗಳು ಸದನದಲ್ಲಿರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದಸ್ಯರು ಮಾತನಾಡುವುದನ್ನು ಪ್ರಾರಂಭಿಸಲಿ. ಸಂಬಂಧಪಟ್ಟ ಮಂತ್ರಿಗಳು ಈಗ ಕೆಳಮನೆಯಲ್ಲಿದ್ದಾರೆ. ಹೀಗಾಗಿ ಈಗ ನಾನು ಅವರನ್ನು ಬರುವುದಕ್ಕೆ ಹೇಳುತ್ತೇನೆ.

**ಸಭಾಪತಿಯವರು:-** ಸಭಾನಾಯಕರೇ, ಈಗ ಚರ್ಚೆಗಿರುವ ವಿಷಯಗಳಿಗೆ ಸಂಬಂಧಪಟ್ಟಂತಿರುವ ಎಲ್ಲಾ ಮಂತ್ರಿಗಳನ್ನು ಸದನಕ್ಕೆ ಕರೆಸಿ. ಸಂಬಂಧಪಟ್ಟ ಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಲ್ಲಿ ಉಪಸ್ಥಿತರಿಲ್ಲದಿರುವುದರಿಂದ ನನಗೆ ಬೇಸವಾಗಿದೆ. ಮಂತ್ರಿಗಳು ಅಲ್ಲಿದ್ದಾರೆ ; ಇಲ್ಲಿದ್ದಾರೆಂದರೆ, ಅವರ ಕರ್ತವ್ಯವೇನು? ನಿಮಗೆ ಯಾವ ರೀತಿಯಾಗಿ ಹೇಳಬೇಕು? ಈಗ ಸರ್ಕಾರಿ ಮುಖ್ಯ ಸಚೇತಕರೂ ಸಹ ಸದನದಲ್ಲಿ ಉಪಸ್ಥಿತರಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶ್ರೀ ಎಂ.ನಾರಾಯಣಸ್ವಾಮಿ ಯವರೇ, ಈಗ ನೀವು ಪ್ರಾರಂಭ ಮಾಡಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಂತ್ರಿಗಳನ್ನು ಸದನಕ್ಕೆ ಬರಲು ತಿಳಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭ ಮಾಡುತ್ತೇನೆ.

**ಸಭಾಪತಿಯವರು:-** ಈಗ ಏನು ಮಾಡಬೇಕೆಂದು ಸಭಾನಾಯಕರು ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶ್ರೀ ಎಂ.ನಾರಾಯಣಸ್ವಾಮಿ ರವರು ಪ್ರಾರಂಭಿಸಿ, ಸಂಬಂಧಪಟ್ಟ ಮಂತ್ರಿಗಳನ್ನು ಸದನಕ್ಕೆ ಬರಲು ತಿಳಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭ ಮಾಡುತ್ತೇನೆ. ಅಷ್ಟರೊಳಗೆ ಮಂತ್ರಿಗಳು ಸದನಕ್ಕೆ ಬರಲಿ.

**ಸಭಾಪತಿಯವರು:-** ಆಯಿತು. ಎಂ.ನಾರಾಯಣಸ್ವಾಮಿಯವರೇ ನೀವು ಪ್ರಾರಂಭಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ:- ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದು ಸರ್ವತೋಮುಖ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕೆ.ಆರ್.ಐ.ಡಿ.ಎಲ್.ನ ಅಧಿಕಾರಿಗಳು ದುರ್ಬಳಕೆ ಮಾಡುತ್ತಿರುವ ಕುರಿತು

* * *

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ** ಮುಖ್ಯ **ಸಚೇತಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 330 ರಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ವತಿಯಿಂದ ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದು ಹಿಂದುಳಿದ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕೆ.ಆರ್.ಐ.ಡಿ.ಎಲ್.ನ ಕೆಲವು ಅಧಿಕಾರಿಗಳು ಮತ್ತು ಖಾಸಗಿ ಗುತ್ತಿಗೆದಾರರು ಶಾಮೀಲಾಗಿ ಖಾಸಗಿ ಕೃಷಿ ಭೂಮಿಯಲ್ಲಿ ಬಸವೇಶ್ವರ ಸಮುದಾಯ ಭವನವನ್ನು ನಿರ್ಮಿಸುತ್ತಿರುವುದು ಹಾಗೂ ಸ್ವಂತ ಫ್ಯಾಕ್ಟರಿಗಳಲ್ಲಿ ಹೈಮಾಸ್ಕ ಲೈಟ್ ಮತ್ತು ತಡೆಗೋಡೆ ನಿರ್ಮಾಣ ಮಾಡಿ, ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ವತಿಯಿಂದ ಅನುದಾನವನ್ನು ಪಡೆದುಕೊಂಡು ಅದನ್ನು ದುರ್ಬಳಕೆ ಮಾಡಿರುವ ಬಗ್ಗೆ ನಾನು ಮಾತನಾಡಬೇಕೆಂದು ಮನವಿಯನ್ನು ಸಲ್ಲಿಸಿದ್ದೆನು.

ಕೆ.ಗೊಲ್ಲಹಳ್ಳಿ ವ್ಯಾಪ್ತಿಯ ಗೋಣಿಪುರ ಗ್ರಾಮದ ಸರ್ವೆ ನಂ.63/1ಎ ಇದು ಹಸಿರು ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತದೆ. ಇಂದಿಗೂ ಸಹ ಪಹಣಿ ದಾಖಲೆಗಳಲ್ಲಿ ಸುಮಾರು 2005-06 ನೇ ಸಾಲಿನಲ್ಲಿ ಪ್ರಿ.ಎಲ್.ಡಿ. ಬ್ಯಾಂಕಿನಿಂದ 6,70,000/- ರೂಪಾಯಿಗಳ ಸಾಲವನ್ನು ಪಡೆದಿರುವುದು ನಮೂದಾಗಿರುತ್ತದೆ. ಸದರಿ ಬ್ಯಾಂಕಿನಿಂದ ನಿರಪೇಕ್ಷಣಾ ಪತ್ರವು ಇನ್ನೂ ಸಹ ಬಂದಿರುವುದಿಲ್ಲ. ಸದರಿ ಸ್ಥಳವು ಅವರ ಸ್ವಂತದ್ದು ಎಂದು ಎಲ್ಲಾ ದಾಖಲೆಗಳು ತಿಳಿಸುತ್ತಿವೆ. ಅಲ್ಲಿನ ಲಕ್ಷ್ಮಯ್ಯ ಎನ್ನುವ ಗುತ್ತಿಗೆದಾರರು ತಮ್ಮ ಸ್ವಂತ ಜಮೀನು ಸರ್ವೆ ನಂ.63/1ಎ ರಲ್ಲಿ ಬಸವೇಶ್ವರ ಸಮುದಾಯ ಭವನವನ್ನು ನಿರ್ಮಿಸುತ್ತಿದ್ದಾರೆ. ಇದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ವತಿಯಿಂದ 4 ಕೋಟಿ ರೂಪಾಯಿಗಳ ಅನುದಾನವನ್ನು ಪಡೆದುಕೊಂಡಿದ್ದಾನೆ. ಈಗ ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುತ್ತಿರುವ ಹಂತದಲ್ಲಿದ್ದು, ಕಟ್ಟಡವು ಸಿದ್ಧವಾಗಿದೆ. ಆದರೆ ದಾಖಲೆಗಳಲ್ಲಿ ಸದರಿ ಜಮೀನು ಇನ್ನೂ ಸಹ ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿಯೇ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ನಿರ್ಮಾಣ ಕಾಮಗಾರಿಗೆ ಇಲಾಖೆಯು 4 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ಗುತ್ತಿಗೆಯನ್ನು ನೀಡಿದೆ.

'ಸರ್ಕಾರಿ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಈ ಕೆಳಕಂಡ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ ಮೂಲಕ ಕನಿಷ್ಠ 2 ಕೋಟಿ ರೂಪಾಯಿಗಳ ಮಿತಿಯಲ್ಲಿ ಕೈಗೊಳ್ಳುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4 (ಜಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2018-19 ನೇ ಸಾಲಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ' ಎಂದು ಕಾನೂನು ಹೇಳುತ್ತದೆ. ಸದರಿ ಸಂಸ್ಥೆಯು ಕೆಲವು ಷರತ್ತುಗಳನ್ನು ವಿಧಿಸುತ್ತದೆ. ಆ ಪೈಕಿ (1) ಸರ್ಕಾರಿ ಇಲಾಖೆಗಳು, ನಿಗಮಗಳು, ಮಂಡಳಿಗಳು ಯಾವುದೇ ಕಾಮಗಾರಿಯನ್ನು ವಿಭಜಿಸಿ, ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೀಡುವಂತಿಲ್ಲ. ಆದರೆ, ಈ ಸಂಸ್ಥೆಯು 4 ಕೋಟಿ ರೂಪಾಯಿಗಳನ್ನು ತನ್ನ ಸ್ವಂತ ಜಮೀನಿನಲ್ಲಿ ನಿರ್ಮಿಸುತ್ತಿರುವ ಬಸವೇಶ್ವರ ಸಮುದಾಯ ಭವನಕ್ಕೆ ತಲಾ 50 ಲಕ್ಷ ರೂಪಾಯಿಗಳಂತೆ 8 ಹಂತಗಳಲ್ಲಿ ಅನುದಾನವನ್ನು ನೀಡಲಾಗಿರುತ್ತದೆ. ಸ್ಥಳೀಯ ಪಂಚಾಯಿತಿ ಸದಸ್ಯರು ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಸರ್ಕಾರಿ ಹಣದಿಂದ ಈ ರೀತಿಯ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಯಾವ ಕಾರಣಕ್ಕಾಗಿ ವಿನಿಯೋಗಿಸಲಾಗುತ್ತಿದೆಂದು ಕೇಳುತ್ತಾರೆ. ಸಮುದಾಯ ಭವನ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಟ್ರಸ್ಟನ್ನು ಮಾಡಿಕೊಂಡಿರುವುದಾಗಿ ತಿಳಿಸುತ್ತಾರೆ. ಸದರಿ ಭವನ ನಿರ್ಮಾಣದ ನಂತರ ಅದನ್ನು ಪಂಚಾಯಿತಿಗೆ ವರ್ಗಾವಣೆ ಮಾಡುವುದಾಗಿಯೂ ಸಹ ತಿಳಿಸುತ್ತಾರೆ. ಈ ಮಾತನ್ನು ಮತ್ತು ಅವರ ಉದಾರವಾದ ಮನಸ್ಸನ್ನು ನಾವು ಒಪ್ಪಿಕೊಳ್ಳೋಣ. ಸರ್ಕಾರದ ವತಿಯಿಂದ ಅನುದಾನವನ್ನು ಪಡೆದುಕೊಂಡು ನಿರ್ಮಿಸಲಾಗುತ್ತಿರುವ ಸಮುದಾಯ ಭವನವನ್ನು ಸರ್ಕಾರಕ್ಕೇ ನೀಡುವುದಾದರೆ, ಅದನ್ನು ನಾವು ಸ್ವಾಗತಿಸುತ್ತೇವೆ. ಈ ಸಂಬಂಧ ಅಫಿಡವಿಟ್‌ನ್ನು ಸಲ್ಲಿಸುತ್ತಾರೆ. ಸದರಿ ಕುಟುಂಬದ ಮೂವರು ಸದಸ್ಯರು ಶ್ರೀ ಶಿರಡಿ ಸಾಯಿಬಾಬಾ ಸೇವಾ ಸಮಿತಿ ಎಂಬ ಹೆಸರಿನ ಟ್ರಸ್ಟ್‌ವೊಂದನ್ನು ಮಾಡಿಕೊಳ್ಳುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(860) 3.30 21-09-2021 CS/GR**

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಸನ್ಮಾನ್ಯ ಲಕ್ಷಯ್ಯನವರು ಆ ಟ್ರಸ್ಟನ ಸಂಚಾಲಕರು, ಅವರ ಪತ್ನಿ ಶ್ರೀಮತಿ ಕೆ.ಎಚ್.ಪಾರ್ವತಿ ದೇವಿಯವರು ಅಧ್ಯಕ್ಷರು, ಅವರ ಮಗ ಶ್ರೀ ಅನಿಲ್ ಕುಮಾರ್ ಎನ್ನುವವರು ಕಾರ್ಯದರ್ಶಿಯಾಗಿದ್ದಾರೆ. ಆ ಟ್ರಸ್ಟಿಗೆ ಅವರು ನೀಡಿದ್ದ 63/1A ಸರ್ವೇ ನಂಬರಿನ ಅವರ ಸ್ವಂತ ಜಾಗ ಇನ್ನೂ ಸಹ ಟ್ರಸ್ಟಿಗೆ ವರ್ಗಾವಣೆ ಆಗಿರುವುದಿಲ್ಲ. ಇವತ್ತಿಗೂ ಸಹ ಈ ಜಾಗ ದಾಖಲೆಗಳ ಪ್ರಕಾರ ಲಕ್ಷಯ್ಯನವರ ಹೆಸರಿನಲ್ಲಿದೆ. ಇವರುಗಳು ಒಂದು ಟ್ರಸ್ಟ್ ಮಾಡಿಕೊಂಡ ಮೇಲೆ ಆ ಟ್ರಸ್ಟಿಗೆ ಇವರ ಜಾಗವನ್ನು ವರ್ಗಾವಣೆ ಮಾಡಬೇಕಾಗಿತ್ತು. ಅದನ್ನು ಸಹ ಮಾಡಿರುವುದಿಲ್ಲ. ಬದಲಿಗೆ ಈ 3 ಜನರು ಸೇರಿ unregistered Affidavit ಅನ್ನು ಪಂಚಾಯಿತಿಗೆ ಮಾಡಿ ಕೊಟ್ಟಿದ್ದಾರೆ. ಈ ಅಫಿಡವಿಟ್ ಮಾಡಿದಂತಹ ಸಂದರ್ಭದಲ್ಲಿ 'ಈ-ಸ್ಟಾಪಿಂಗ್ ಸಿಸ್ಟಂ' ಇದ್ದರೂ ಸಹ ಶಿವಾಜಿನಗರದಿಂದ 100 ರೂಪಾಯಿಗಳ ಒಂದು ಸ್ಟಾಂಪ್ ಪೇಪರ್ ಅನ್ನು ತಂದು unregistered Affidavit ಅನ್ನು ಮಾಡಿ, ಅದರಲ್ಲಿ ಈ ಕಟ್ಟಡ ಕಾಮಗಾರಿ ಪೂರ್ಣಗೊಂಡ ಮೇಲೆ ಇದನ್ನು ಪಂಚಾಯಿತಿಗೆ ಬರೆದುಕೊಡುತ್ತೇನೆ ಎಂದು ಹೇಳುತ್ತಾರೆ. ಇದರ ಜೊತೆಯಲ್ಲಿಯೇ 4 ಕೋಟಿ ರೂಪಾಯಿಗಳಿಗೆ ಈ ಕಟ್ಟಡ ಪೂರ್ಣಗೊಳ್ಳುವುದಿಲ್ಲ, ಇನ್ನೂ 4 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎನ್ನುವ ಮನವಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಲ್ಲಿಸುತ್ತಾರೆ. ಆಗ ಈ ಕಟ್ಟಡದ ಕೆಲಸ ಮುಗಿದ ಮೇಲೆ ಇದನ್ನು ಟ್ರಸ್ಟಿಗೆ ವರ್ಗಾವಣೆ ಮಾಡಿಕೊಡುವುದಾಗಿ ಮತ್ತೊಂದು ಅರ್ಜಿಯನ್ನು ನೀಡುತ್ತಾರೆ. ಈ ಜಾಗಕ್ಕೆ ಸಂಬಂಧಪಟ್ಟ ಹಾಗೆ 2020-21ನೇ ಸಾಲಿನ ಪಹಣಿ ನನ್ನ ಬಳಿಯಿದೆ, ಅದು ಇವತ್ತಿಗೂ ಸಹ ಶ್ರೀ ಲಕ್ಷಯ್ಯ ಎನ್ನುವವರ ಹೆಸರಿನಲ್ಲಿದೆ. ಇನ್ನೂ ಸಹ ಟ್ರಸ್ಟಿಗೆ ಈ ಜಾಗ ವರ್ಗಾವಣೆ ಆಗಿರುವುದಿಲ್ಲ. ಈ ಟ್ರಸ್ಟನಲ್ಲಿರುವ 3 ಜನರಲ್ಲಿ ತಂದೆ ಅಧ್ಯಕ್ಷರು, ತಾಯಿ ಸಂಚಾಲಕರು, ಮಗ ಕಾರ್ಯದರ್ಶಿ, ಈ ಮೂವರು ಈ ಜಾಗವನ್ನು ಟ್ರಸ್ಟಗೆ ನೋಂದಣಿ ಮಾಡಿಕೊಡಬೇಕು. K.R.I.D.L., ನ ವ್ಯವಸ್ಥಾಪಕ ನಿರ್ದೇಶಕರನ್ನು ಆರ್.ಟಿ.ಐ., ಅಡಿಯಲ್ಲಿ ಕೆಲವು ಮಾಹಿತಿಗಳನ್ನು ಕೇಳಿದರೆ, ಆರ್‌ಟಿಐ ಅಡಿಯಲ್ಲಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿರುವವರನ್ನು ತಮ್ಮ ಕಛೇರಿಗೆ ಕರೆಯಿಸಿಕೊಂಡು " ಇದು ನಿಮ್ಮ ಹಣ ಏನ್ರೀ, ನಿಮ್ಮದೂ ಅಲ್ಲ, ನನ್ನದೂ ಅಲ್ಲ, ಯಾರೋ ಹಣ ಮಾಡಿಕೊಳ್ಳುತ್ತಾರೆ, ನಿನಗೇನು ಕಷ್ಟ? ಎನ್ನುವ ದುರಹಂಕಾರದ ಮಾತುಗಳನ್ನು ಆಡುತ್ತಾರೆ. ಒಬ್ಬ ವ್ಯವಸ್ಥಾಪಕ ನಿರ್ದೇಶಕರು ಈಗಾಗಲೇ ಈ ಕಟ್ಟಡ ಕಟ್ಟಲು 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಖಾಸಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಗದಲ್ಲಿ ಒಂದು ಬಸವೇಶ್ವರ ಸಮುದಾಯ ಭವನವನ್ನು ಕಟ್ಟಿ, ಅದು ಸಾಲುವುದಿಲ್ಲ ಕಟ್ಟಡ ಪೂರ್ಣಗೊಳಿಸಲು ಇನ್ನೂ 4 ಕೋಟಿ ರೂಪಾಯಿ ಬೇಕಾಗಿದೆ ಎನ್ನುವ ಮನವಿಯ ಬಗ್ಗೆ ಆರ್.ಟಿ.ಐ., ನಲ್ಲಿ ಮಾಹಿತಿ ಕೇಳಿದರೆ " ಇದು ನಿಮ್ಮ ಹಣ ಏನ್ರೀ, ನಿಮ್ಮದು ಅಲ್ಲ, ನನ್ನದು ಅಲ್ಲ, ಯಾರೋ ಹಣ ಮಾಡಿಕೊಳ್ಳುತ್ತಾರೆ, ನಿನಗೇನು ಕಷ್ಟ? ಎನ್ನುವ ದುರಹಂಕಾರದ ಮಾತುಗಳನ್ನು ಆಡುತ್ತಾರೆ. ಸದರಿ ಜಮೀನು ಜಂಟಿ ಖಾತೆಯಲ್ಲಿದೆ. ಸರ್ವೇ ನಂ.63/ಎ ಜಾಗಕ್ಕೆ ಲಕ್ಷಯ್ಯ ಎನ್ನುವವರು ಸಂಪೂರ್ಣವಾಗಿ ಮಾಲೀಕರಲ್ಲ. ಈ ಜಾಗ ಶ್ರೀಮತಿ ಮುನಿನಾಗಮ್ಮ, ಶ್ರೀ ಕೆ.ಎಂ.ನಾರಾಯಣಸ್ವಾಮಿ, ಶ್ರೀಮತಿ ಮಲ್ಲಮ್ಮ, ಶ್ರೀಮತಿ ಲಕ್ಷಮ್ಮ ಮತ್ತು ಶ್ರೀಮತಿ ನಾಗರತ್ನಮ್ಮ ಹಾಗೂ ಇತರರು ಎನ್ನುವವರ ಹೆಸರಿನಲ್ಲಿದೆ. ಈ ಜಾಗದ ಪೋಡಿ ಆಗಿಲ್ಲ, ಕನ್‌ವರ್ಷನ್ ಆಗಿಲ್ಲ, ಇದು ಗ್ರೀನ್ ಬೆಲ್ಟ್ ಆಗಿರುವುದರಿಂದ ಇನ್ನೂ ಸಹ ಭೂ ಪರಿವರ್ತನೆ ಆಗಿಲ್ಲ. ಗ್ರೀನ್ ಬೆಲ್ಟ್‌ನಲ್ಲಿರುವ ಜಾಗಕ್ಕೆ ಸರ್ಕಾರದ ಅನುದಾನವನ್ನು ಪಡೆದುಕೊಂಡು ರಾಜರೋಷವಾಗಿ ಸಮುದಾಯ ಭವನವನ್ನು ಕಟ್ಟಲು ಹೊರಟಿರುವುದು ಎಷ್ಟು ಸರಿ ಎಂದು ಸರ್ಕಾರವನ್ನು ನಾನು ಕೇಳಬಯಸುತ್ತೇನೆ. ಇವತ್ತು ಬೆಳಗ್ಗೆ ಒಂದು ಬಿಲ್ ತಂದು ಸಭಾಪತಿಯವರು ಈ ಬಿಲ್ ಬಹಳ ಉತ್ತಮವಾದುದು ಎನ್ನುವುದರ ಬಗ್ಗೆ ನಮಗೆ ಕನ್‌ವಿನ್ಸ್ ಮಾಡಿದರು. ಈ ಪ್ರಶ್ನೆ ಇದ್ದ ಕಾರಣ ನಾನು ಆಗಲೇ ಮಾತನಾಡುವುದಕ್ಕೆ ಹೋಗಲಿಲ್ಲ. ನಾನು ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿರುವ ಒಬ್ಬ ಶಾಸಕನಾಗಿರುವುದರಿಂದ ಈ ಪಂಚಾಯಿತಿಗಳಲ್ಲಿ ಯಾವ ರೀತಿ ಅವ್ಯವಹಾರಗಳು ನಡೆಯುತ್ತಿವೆ ಎನ್ನುವುದು ತಿಳಿದಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ನಗರಾಭಿವೃದ್ಧಿ ಇಲಾಖೆಗೆ ಜವಾಬ್ದಾರಿಯನ್ನು ನೀಡಲು ಮುಂದಾಗಿದ್ದೀರಿ. ಇನ್ನೂ State Accounts Department ಅನ್ನು ಈ ಪಂಚಾಯಿತಿಗಳಿಗೆ ವಹಿಸಿದರೆ ಏನೇನು ಅನಾಹುತಗಳಾಗಬಹುದು ಎನ್ನುವುದಕ್ಕೆ ಇದೆಲ್ಲ sample ಉದಾಹರಣೆ ನಾನು ಕೊಡುತ್ತಿದ್ದೇನೆ. ಈ ಜಾಗದ ಪೋಡಿ ಆಗಿಲ್ಲ, ಕನ್‌ವರ್ಷನ್ ಆಗಿಲ್ಲ, ಇದು ಗ್ರೀನ್ ಬೆಲ್ಟ್ ಆಗಿರುವುದರಿಂದ ಇನ್ನೂ ಸಹ ಭೂ ಪರಿವರ್ತನೆ ಆಗಿಲ್ಲ. ಆದರೂ ಸಹ ಇಲ್ಲಿ ಸಭಾಭವನ ನಿರ್ಮಿಸಲಾಗಿದೆ. ಈ ಗುತ್ತಿಗೆದಾರನ ಕೆಲಸದ ಒಂದು ಸಣ್ಣ sample ನಾನು ಸದನಕ್ಕೆ ನೀಡುತ್ತಿದ್ದೇನೆ. Today he is worth not less than Rs.500 crores. An ordinary worker, today he is worth about Rs.500 crores. ಆ ಭಾಗದಲ್ಲಿರುವ ಎಲ್ಲಾ ಕಾಮಗಾರಿಗಳಿಗೂ ಈತನೇ ಗುತ್ತಿಗೆದಾರ. ನಿನ್ನೆಯ ದಿವಸ ಆ ಪಂಚಾಯಿತಿಯಿಂದ ಬಂದಿದ್ದ ಸದಸ್ಯರೊಬ್ಬರು ಒಂದು ವಿಚಾರವನ್ನು ನನಗೆ ಹೇಳಿದರು. ನಾನು ಕಳೆದ ವರ್ಷ ನನ್ನ ವಿಧಾನ ಪರಿಷತ್ತಿನ ಸದಸ್ಯನ ಅನುದಾನದಲ್ಲಿ 5 ಲಕ್ಷ ರೂಪಾಯಿಗಳನ್ನು ಒಂದು ರಸ್ತೆಯ ನಿರ್ಮಾಣ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ಕಾಗಿ ನೀಡಿದ್ದೆನು. ಅಲ್ಲಿ ಒಂದು ಕಾಂಕ್ರೀಟ್ ರಸ್ತೆಯನ್ನು ಹಾಕಿದ್ದಾರೆ. ಅಲ್ಲಿ ಒಂದು ಮೂಲೆಯಲ್ಲಿ ವಿಧಾನ ಪರಿಷತ್ತಿನ ಶಾಸಕರಾದ ಶ್ರೀ ಎಂ.ನಾರಾಯಣಸ್ವಾಮಿಯವರ ಅನುದಾನದಲ್ಲಿ ರಸ್ತೆ ನಿರ್ಮಿಸಲಾಗಿದೆ ಎನ್ನುವ ಬೋರ್ಡನ್ನು ಹಾಕಿದ್ದಾರಂತೆ, ಇನ್ನೊಂದು ಮೂಲೆಯಲ್ಲಿ ಆ ಭಾಗದ ಶಾಸಕರ ಅನುದಾನದಲ್ಲಿ ರಸ್ತೆ ನಿರ್ಮಿಸಲಾಗಿದೆ ಎನ್ನುವ ಬೋರ್ಡ್ ಇದೆಯಂತೆ. ಇದರ ಜೊತೆಗೆ ಸ್ಥಳೀಯ ಸಂಸತ್ ಸದಸ್ಯರ ಅನುದಾನದಲ್ಲಿ ಎನ್ನುವ ಬೋರ್ಡ್ ಒಂದು ಕಡೆ ಇದೆಯಂತೆ ಜೊತೆಗೆ ಜಿಲ್ಲಾ ಪಂಚಾಯಿತಿಯಿಂದ ಈ ರಸ್ತೆ ನಿರ್ಮಿಸಲಾಗಿದೆ ಎನ್ನುವ ಬೋರ್ಡ್ ಸಹ ಅಲ್ಲಿದೆಯಂತೆ. ಇಲ್ಲಿ ನಾನು ಕೊಟ್ಟ ಅನುದಾನದಲ್ಲಿ ರಸ್ತೆ ಮಾಡಿ, ಕಾಮಗಾರಿಯ ಹೆಸರಿನಲ್ಲಿ ನಾಲ್ಕು ಬಿಲ್‌ಗಳನ್ನು ಮಾಡಿದ್ದಾರೆ. ಒಂದೇ ಕೆಲಸಕ್ಕೆ ನನ್ನ ಅನುದಾನ, ಸ್ಥಳೀಯ ಶಾಸಕರ ಅನುದಾನ, ಸಂಸತ್ ಸದಸ್ಯರ ಅನುದಾನ ಮತ್ತು ಜಿಲ್ಲಾಪಂಚಾಯಿತಿಯ ಅನುದಾನ ಎಂದು ನಾಲ್ಕು ಜನರ ಹೆಸರಿನಲ್ಲಿ ತಲಾ 5 ಲಕ್ಷ ರೂಪಾಯಿಗಳ ಅನುದಾನವನ್ನು ಪಡೆದಿದ್ದಾರೆ. ಇದೆಲ್ಲದರ ಜೊತೆಗೆ ಈ ಜಾಗ ಸರ್ವೆ ನಂ63/ಎ , ಕ್ಕೆ Primary Co-operative Agriculture and Rural Development Bank Limited ನವರು ಸಾಲವನ್ನು ನೀಡಿದ್ದಾರೆ. ಸದರಿ ಜಾಗವನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿದ್ದಾರೆ. ಅಂತಹ ಜಾಗಕ್ಕೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯವರು 4 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಅದು ಸಾಲದು ಇನ್ನೂ 4 ಕೋಟಿ ರೂಪಾಯಿಗಳು ಬೇಕು ಎನ್ನುವ ಪ್ರಸ್ತಾವನೆಯನ್ನು ಆ ಟ್ರಸ್ಟ್‌ನವರು ನೀಡಿದ್ದಾರೆ. ಇವತ್ತಿಗೂ ಸಹ ಆರ್‌ಟಿಸಿ ಯಲ್ಲಿ ಅವರ ಹೆಸರು ಇಲ್ಲ. ಇದೊಂದು ಜಂಟಿ ಖಾತೆ. ಆದರೂ ಸಹ ಅಧಿಕಾರಿಗಳು ಇವತ್ತಿನ ದಿವಸ ಕಣ್ಣನ್ನು ಮುಚ್ಚಿಕೊಂಡು ಕುಳಿತಿದ್ದಾರೆ.

ಇದೇ ಗುತ್ತಿಗೆದಾರ, ಇದೇ ಕ್ಷೇತ್ರದಲ್ಲಿ ಬರುವ ಶ್ರೀನಿವಾಸಪುರ ಗ್ರಾಮದಲ್ಲಿ 6 ಮನೆಗಳು ಮಾತ್ರ ಇವೆ. ಅದಕ್ಕೆ ಶ್ರೀನಿವಾಸಪುರ ಎನ್ನುವ ಹೆಸರನ್ನಿಟ್ಟಿದ್ದಾರೆ. ಆರು ಮನೆಗಳ ಈ ಊರಿಗೆ ಒಂದೊಂದಕ್ಕೆ 7-8 ಲಕ್ಷ ರೂಪಾಯಿ ಬೆಲೆ ಬಾಳುವ 3 ಹೈಮಾಸ್ಕ್ ಲೈಟುಗಳನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಈ 3 ಹೈಮಾಸ್ಕ್ ಲೈಟುಗಳಿಗೆ 50 ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಈ ಗುತ್ತಿಗೆದಾರ ಲಕ್ಷ್ಮಯ್ಯ ಎನ್ನುವವರದ್ದು "ಶ್ರೀರಂಗ ಕಾಂಕ್ರೀಟ್ ಮಿಕ್ಸ್" ಎನ್ನುವ ರೆಡಿ ಮಿಕ್ಸ್ ಕಾಂಕ್ರೀಟ್‌ನ ಕಾರ್ಖಾನೆಯಿದೆ. ಮಂಜೂರಾದ 3 ಹೈಮಾಸ್ಕ್ ಲೈಟುಗಳಲ್ಲಿ 2 ಲೈಟ್‌ಗಳು ಇವರ ಕಾರ್ಖಾನೆಯಲ್ಲಿವೆ. ಅದಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಸದನಕ್ಕೆ ತೋರಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ ಹಂತದಲ್ಲಿ ಮಾನ್ಯ ಸದಸ್ಯರು ಈ ವಿಚಾರಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಸದನಕ್ಕೆ ತೋರಿಸಿದರು.)

ಮೊದಲನೆಯದಾಗಿ ಬಸವೇಶ್ವರ ಸಮುದಾಯ ಭವನದ ಚಿತ್ರ, ಕಟ್ಟಡದ ಕೆಲಸ ಈ ಹಂತದಲ್ಲಿದೆ. Latitude and longitude ನಲ್ಲಿ search ಕೊಟ್ಟರೆ ನೇರವಾಗಿ ಅಲ್ಲಿಗೆ ಹೋಗುತ್ತದೆ. ಇನ್ನೂ ಹೈಮಾಸ್ಕ್ ಲೈಟುಗಳ ಫೋಟೋವನ್ನೂ ಸಹ ನೀವುಗಳು ನೋಡಬಹುದು. ಇದನ್ನು ಕಳೆದ 2 ವರ್ಷಗಳಿಂದ ಗುತ್ತಿಗೆದಾರರ ಕಾರ್ಖಾನೆಯಲ್ಲಿ ಹಾಕಿಕೊಂಡಿದ್ದರೂ ಸಹ ದುರದೃಷ್ಟ ಆ ಪಂಚಾಯಿತಿಯವರು ಆ ವಿದ್ಯುತ್ತಿನ ಬಿಲ್ ಅನ್ನು ಕಟ್ಟುತ್ತಿದ್ದಾರೆ. 3 ಹೈಮಾಸ್ಕ್ ಲೈಟುಗಳಿಗೂ ಸಹ ಪಂಚಾಯಿತಿಯವರು ವಿದ್ಯುತ್ ಬಿಲ್ ಕಟ್ಟುತ್ತಿದ್ದಾರೆ. ಅದರಲ್ಲಿ ಒಂದನ್ನು ಊರಿಗೆ ಹಾಕಿದ್ದಾರೆ, ಅದು ಪೂರ್ಣವಾಗಿಲ್ಲ. 2 ವರ್ಷಗಳಿಂದ ಗುತ್ತಿಗೆದಾರರ ಕಾರ್ಖಾನೆಯಲ್ಲಿ ಹಾಕಿಕೊಂಡಿದ್ದರೂ ಸಹ ದುರದೃಷ್ಟ ಆ ಪಂಚಾಯಿತಿಯವರು ಆ ವಿದ್ಯುತ್ತಿನ ಬಿಲ್ ಅನ್ನು ಕಟ್ಟುತ್ತಿದ್ದಾರೆ. ಇದಕ್ಕೆ ಏನು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಮೂರನೆಯದ್ದಾಗಿ ಅದೇ ಗ್ರಾಮದಲ್ಲಿ ಆತ ಮನೆ ಕಟ್ಟಿಕೊಂಡಿದ್ದಾನೆ. ಅದಕ್ಕೆ ನಮ್ಮ ಅಭ್ಯಂತರ ಏನಿಲ್ಲ. ಆದರೆ K.R.I.D.L., ನವರು ಒಂದು ವರ್ಕ್ ಆರ್ಡರನ್ನು ನೀಡಿದ್ದಾರೆ.

(ಮುಂದು)

(861)/21-9-2021/3-40/ಎಲ್ಎಂ/ಜಿಆರ್

**ಶ್ರೀ ಎಂ.ನಾರಾಯಣ ಸ್ವಾಮಿ(ಮುಂದು)**

Work Order ನಲ್ಲಿ retaining wall construction ಗೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಕೆ,ಗೊಲ್ಲಹಳ್ಳಿಯ ಗ್ರಾಮ ಪಂಚಾಯಿತಿ ಶ್ರೀನಿವಾಪುರ ಎನ್ನುವ ಗ್ರಾಮದಲ್ಲಿ ತಡೆಗೋಡೆ ನಿರ್ಮಾಣ ಮಾಡಲು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿರುವ ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿ ಎಂದು ಮಂತ್ರಿಗಳು ಅದನ್ನು ಮಂಜೂರು ಮಾಡುತ್ತಾರೆ. ತಡೆಗೋಡೆಯನ್ನು ಯಾವುದಕ್ಕೆ ಕಟ್ಟುತ್ತಾರೆ ಎನ್ನುವುದು ಗೊತ್ತಿಲ್ಲ. ಅಲ್ಲಿ ಯಾವ ರಾಜಕಾಲುವೆ ಇಲ್ಲ, ಅಥವಾ ಕೆರೆ ಇದ್ದು ಜನರು ಅಥವಾ ಜಾನುವಾರುಗಳು ಬಿದ್ದುಹೋಗಬಾರದು ಎನ್ನುವುದಕ್ಕೆ ತಡೆಗೋಡೆ ಕಟ್ಟಬೇಕು ಎನ್ನುವುದು ಏನು ಇಲ್ಲ. ತಡೆಗೋಡೆ ನಿರ್ಮಾಣ ಮಾಡಲು ಎಂದು K.R.I.D.L., ಯಿಂದ ೫೦ ಲಕ್ಷ ರೂಪಾಯಿಗಳ Work Order ನ್ನು ಕೊಟ್ಟಿದ್ದಾರೆ. ಅವನು ತುಂಬಾ ಸುಂದರವಾಗಿ ತಡೆಗೋಡೆಯನ್ನು ಕಟ್ಟಿದ್ದಾರೆ ಎಂದರೆ, ತನ್ನ ಮನೆಸುತ್ತ ಕಾಂಪೌಂಡ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟಿದ್ದಾನೆ. ಸ್ವಂತ ಮನೆಗೆ ಕಾಂಪೌಂಡ್ ಕಟ್ಟಿ ೫೦ ಲಕ್ಷ ರೂಪಾಯಿಗಳ ಬಿಲ್‌ನ್ನು ತೆಗೆದುಕೊಂಡಿದ್ದಾರೆ. ತಡೆಗೋಡೆಯನ್ನು ಕಟ್ಟಿರುವುದು ಎಲ್ಲಿ ಎಂದು ಆರ್.ಟಿ.ಐ., ನಲ್ಲಿ ಅರ್ಜಿ ಹಾಕಿ latitude and longitude ನಲ್ಲಿ mark ಮಾಡಿಕೊಡಿ ಎಂದು ಕೇಳಿದರೆ, ಅಲ್ಲಿನ ಪಿ.ಡಿ.ಓ., ಮನೆ ಹೊರಗಡೆಯ ಫೋಟೋ ತೆಗೆಯದೆ, ಮನೆಯ ಒಳಗಡೆ ಹೋಗಿ plain ಆಗಿರೊ ಗೋಡೆಯ ಫೋಟೋ ತೆಗೆದು ಇದೆ. ಆದರೆ ಕಟ್ಟಿರುವ ತಡೆಗೋಡೆ ಎಂದು ಉತ್ತರ ಕೊಟ್ಟಿದ್ದಾರೆ. This is the sample. ನಾನೇನಾದರೂ ಸುಳ್ಳು ಹೇಳಿದ್ದರೆ ನಿರ್ದಾಕ್ಷಿಣ್ಯವಾಗಿ ನನ್ನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದು. ಅಥವಾ ನಾನೇ ರಾಜೀನಾಮೆಯನ್ನು ಕೊಟ್ಟು ಹೊರಗಡೆ ಹೋಗುತ್ತೇನೆ. ಇದು ನಮ್ಮ ಕಣ್ಣ ಮುಂದೆಯೇ ನಡೆಯುತ್ತಿರುವ ಅನ್ಯಾಯ. ೨೦,೪೦೦ ಚದರಿ ಅಡಿ ಬಿಲ್ಡಿಂಗ್‌ನ್ನು ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುವುದು, ೫೦ ಲಕ್ಷ ರೂಪಾಯಿಗಳ high mast light ನ್ನು ತನ್ನ ಸ್ವಂತ ಕಾರ್ಖಾನೆಗೆ ಹಾಕಿಕೊಂಡಿದ್ದಾನೆ, retaining wall ಎಂದು ಹೇಳಿ ತನ್ನ ಸ್ವಂತ ಮನೆಗೆ ಕಾಂಪೌಂಡ್ ಕಟ್ಟಲು ೫೦ ಲಕ್ಷ ರೂಪಾಯಿಗಳ ಸರ್ಕಾರಿ ಹಣವನ್ನು ಕರ್ಚು ಮಾಡಿದ್ದಾರೆ. ಈ ಕರ್ಮಕಾಂಡ ಇಲ್ಲಿಗೆ ಮುಗಿಯುವುದಿಲ್ಲ. ಖಾಸಗಿ ಲೇಔಟ್‌ಗಳಿಗೆ ಟಾರ್ ರಸ್ತೆಗಳನ್ನು, ಕಾಂಕ್ರೀಟ್ ರಸ್ತೆಗಳನ್ನು ಮಾಡಿ ಲೇಔಟ್‌ನವರ ಹತ್ತಿರ ಹಣ ತೆಗೆದುಕೊಂಡು ಸರ್ಕಾರಿ ಬಿಲ್ ಮಾಡಿಸಿಕೊಂಡಿದ್ದಾರೆ. ತಮ್ಮ ಮುಖಾಂತರ ಸಭಾನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾವು ಈಗ ಯಾರಿಗೂ ಹೆದರಬೇಕಾದ ಅಗತ್ಯವಿಲ್ಲ. ಇದರ ಬಗ್ಗೆ ಪ್ರಮಾಣಿಕತೆಯಿಂದ ತನಿಖೆ ಮಾಡಬೇಕು ಎನ್ನುವುದಾದರೆ, ಈ ಹಣ ಸರ್ಕಾರಕ್ಕೆ ವಾಪಸ್ ಬರಬೇಕು ಎನ್ನವುದಾದರೆ, ಆ ಸರ್ಕಾರಿ ಆಸ್ತಿಯನ್ನು ವಾಪಸ್ ಪಡೆಯಬೇಕು ಎನ್ನುವುದಾದರೆ ಒಂದು ಸಮಿತಿ ರಚನೆ ಮಾಡಿ. ಇವತ್ತು ನಿಮ್ಮ ಸರ್ಕಾರವಿರಬಹುದು, ನಾಳೆ ನಾವು ಬರಬಹುದು. This is just a sample. ನಾನು ಬೆಂಗಳೂರಿನ ೨೮ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುತ್ತೇನೆ. ಇದು ಕೇವಲ ಒಂದು ವಿಧಾನಸಭಾ ಕ್ಷೇತ್ರದಲ್ಲಿ ನಡೆದಿರುವಂತಹ ಘಟನೆ. ಇಂತಹ ೧೦೦ ಉದಾಹರಣೆಗಳನ್ನು ಕೊಡುತ್ತೇನೆ. ನನಗೆ ತಿಳಿದಮಟ್ಟಿಗೆ ಸುಮಾರು ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಇಲ್ಲಿ ಆಗಿದೆ. ಆರ್.ಡಿ.ಪಿ.ಆರ್., ನಿಂದ ಕಾಮಗಾರಿಗಳು ಆಗದೇ ಬಿಲ್‌ಗಳಾಗಿವೆ. ಮೊನ್ನೆ ನಾನು ಈ ರೀತಿ ಆಗಿರುವ ಮಾಹಿತಿಯನ್ನು ಕೊಡಿ ಎಂದು ಮನವಿ ಮಾಡಿಕೊಂಡೆ. ನಾನು ಕೊಟ್ಟಿರುವಂತಹ ಅನುದಾನದಲ್ಲಿ ಕೆಲಸಗಳು ಆಗದೆ ಕಂಟ್ರಾಕ್ಟರ್ ಮತ್ತು ಡಿ.ಸಿ., ಕಛೇರಿಯವರು ಒಂದಾಗಿ ಈ ಕೆಲಸವನ್ನು ಮಾಡಿದ್ದಾರೆ. Payment ಮಾಡಬೇಡಿ, payment stop ಎಂದು ಹೇಳಿದೆ ಆದರೆ payment ಮಾಡಿದ್ದಾರೆ, ನಾನು ಕೊಟ್ಟಂತಹ ಅನುದಾನಕ್ಕೆ. These are all the samples.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಇಡೀ ರಾಜ್ಯದಲ್ಲಿ ತನಿಖೆ ಮಾಡಿ. ಬಜೆಟ್‌ನಲ್ಲಿ ಆರ್.ಡಿ.ಪಿ.ಆರ್., ಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗುತ್ತದೆ. ಅದರಲ್ಲಿ more than 50% ಇದೇ ರೀತಿಯಾಗುತ್ತಿದೆ. ಆದರೆ ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯಲು ನೀರು ಇಲ್ಲ. ರಸ್ತೆ ಇಲ, ಚರಂಡಿ ಇಲ್ಲ. ಬಡವರ ಮಕ್ಕಳು ಮದುವೆ ಮಾಡಿಕೊಳ್ಳಲಿ, ಏನಾದರೂ ಕಾರ್ಯಕ್ರಮಗಳನ್ನು ಮಾಡಿಕೊಳ್ಳಲಿ ಎಂದು ಸಮುದಾಯ ಭವನಗಳನ್ನು ಕಟ್ಟಲು ಸರ್ಕಾರ ಹಣ ಕೊಡುತ್ತದೆ. ಸರ್ಕಾರದ ೪ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಸ್ವಂತ ಸಮುದಾಯ ಭವನವನ್ನು ಕಟ್ಟಿಕೊಂಡು ಇವತ್ತು ರಾಜಾರೋಷವಾಗಿ ಓಡಾಡುತ್ತಿದ್ದಾರೆ. High mast light ನ್ನು ಹಳ್ಳಿಗಳಿಗೆ ಹಾಕಬೇಕು ಎಂದು ಸರ್ಕಾರ ಹಣ ಕೊಟ್ಟಿದೆ. ಅದನ್ನು ತೆಗೆದುಕೊಂಡು ತನ್ನ ಸ್ವಂತ ಕಾರ್ಖಾನೆಗೆ ಹಾಕಿಕೊಂಡಿದ್ದಾರೆ. ಯಾರ ಮೇಲೆಯು ಭಯವಿಲ್ಲ. K.R.I.D.L., ಎನ್ನುವ ಒಂದು ಭ್ರಷ್ಟ ಸಂಸ್ಥೆ, ಇಂತಹ ಸಂಸ್ಥೆಯನ್ನು ಎಲ್ಲಿ ಹುಡುಕಿದರು ಸಿಗುವುದಿಲ್ಲ. ಇದರ ಎಂ.ಡಿ., ಯವರ ದುರಂಕಾರ ಪರಮಾವಧಿಯನ್ನು ಮೀರಿ ಹೋಗಿದೆ. Executive Engineer ಎಲ್ಲರೂ ಸೇರಿಕೊಂಡು ಅವರೇ ಹಣವನ್ನು ಮಂಜೂರು ಮಾಡಿ ಕಳುಹಿಸುತ್ತಾರೆ. ಈ ರೀತಿ ೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲು ಇದು ಯಾರ ಅಪ್ಪನ ದುಡ್ಡು? ತನ್ನ ಮನೆ ಕಾಂಪೌಂಡ ಕಟ್ಟಲು retaining wall ಎಂದು payment ತೆಗೆದುಕೊಂಡಿದ್ದಾರೆ. ತನ್ನ ಸ್ವಂತ ಕಾರ್ಖಾನೆಗೆ high mast light ಹಾಕಿಕೊಂಡು ಸಾರ್ವಜನಿಕರ ಉಪಯೋಗಕ್ಕೆ ಹಾಕಿದ್ದೇವೆ ಎಂದು ಬಿಲ್ ತೆಗೆದುಕೊಂಡಿದ್ದಾರೆ. ಗ್ರೀನ್ ಬೆಲ್ಟ್ ಇರುವ ೨೦,೪೦೦ ಅಡಿ ಚದುರದಲ್ಲಿ ತನ್ನ ಸ್ವಂತ ಕಟ್ಟಡವನ್ನು ಕಟ್ಟಿ ಇದು ಸಾರ್ವಜನಕರಿಗೆ ಸಂಬಂಧಪಟ್ಟ ಸಮುದಾಯ ಭವನ ಎಂದು ಹೇಳುತ್ತಾರೆ. ಕಾನೂನಿನ ಬಗ್ಗೆ ಗೌರವ, ಭಯ ಏನು ಇಲ್ಲವೆ? ಈ ಅಧಿಕಾರಿ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನಿನ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ನಿಮ್ಮ ಸರ್ಕಾರಕ್ಕೂ ಗೌರವವಿಲ್ಲ, ನಮಗೂ ಕೂಡಾ ಗೌರವವಿರುವುದಿಲ್ಲ. ನಾವು ಸುಮ್ಮನೆ ಸದಸ್ಯರಾಗಿ ಇಲ್ಲಿ ಬಂದು ಮಾತನಾಡಿ ಹೋದರೆ ನಮಗೂ ಏನು ಬೆಲೆ ಇರುವುದಿಲ್ಲ. ನಾನು ಇಷ್ಟೊಂದು ಕಷ್ಟಪಟ್ಟು ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದೇನೆ. ಈಗಲೂ ತಾವು ಕ್ರಮ ತೆಗೆದುಕೊಳ್ಳಲು ಮುಂದಾಗದಿದ್ದರೆ ಈ ನಾಡಿದನ ಜನತೆಗೆ ಏನು ಉತ್ತರವನ್ನು ಕೊಡಲು ಆಗುತ್ತದೆ? ಏನು ಸಂದೇಶವನ್ನು ಕೊಡಲು ಸಾಧ್ಯವಾಗುತ್ತದೆ? ನಮ್ಮ ಮೇಲೆ ವಿಶ್ವಾಸವಿಟ್ಟು ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ ಗ್ರಾಮ ಪಂಚಾಯಿತಿ ಸದಸ್ಯರರಿಗಾಗಲ್ಲಿ, ಬೇರೆ ಜನರಿಗೆ ಏನು ನಾಯ್ಯ ಕೊಟ್ಟ ಹಾಗಾಗುತ್ತದೆ? ಯಾವ ಪುರಷಾರ್ಥಕ್ಕಾಗಿ ಇಲ್ಲಿ ನಾವು ಶಾಸಕರಾಗಿ ಉಳಿಯಬೇಕು? ಹೇಳುತ್ತಾ ಹೋದರೆ ಇನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾ ಹೋಗಬೇಕಾಗುತ್ತದೆ. ಸಾವಿರಾರು ಕೋಟಿ ರೂಪಾಯಿಗಳ ಹಗರಣ ಕಣ್ಣ ಮುಂದೆ ಕಾಣುತ್ತಿದೆ. ದಯಮಾಡಿ ತಾವು ಮಧ್ಯೆ ಪ್ರವೇಶ ಮಾಡಿ ಇದಕ್ಕೆ ಸರಿಯಾದ ಉತ್ತರ ಮಂತ್ರಿಗಳಿಂದ ಬರುವಂತೆ ಮಾಡಬೇಕು. ಆರ್.ಡಿ.ಪಿ.ಆರ್., ಮಂತ್ರಿಗಳು ಪ್ರಮಾಣಿಕರಾಗಿದ್ದಾರೆ, ಅವರ ಬಗ್ಗೆ ಎರಡು ಮಾತಿಲ್ಲ. ಸಮಾಜಕ್ಕೆ ಏನಾದರೂ ಮಾಡಬೇಕು, ಕೊಡುಗೆಯನ್ನು ಕೊಡಬೇಕು ಎನ್ನುವ ಯೋಚನೆ ಅವರಿಗೆ ಇದೆ. ಅವರು ಈಗ ಸದನದಲ್ಲಿ ಇಲ್ಲ, ಇದ್ದರೆ ಅವರಿಗೆ ಇನ್ನು ಹೆಚ್ಚು ಅರ್ಥವಾಗುತ್ತಿತ್ತು. ಮಾನ್ಯ ಸಭಾನಾಯಕರು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವುದರಿಂದ, ಸೋಲಿಲ್ಲದ ಸರದಾರನಾಗಿ ಇಡೀ ಗ್ರಾಮ ಪಂಚಾಯಿತಿಯ ಸದಸ್ಯರು ತಮಗೆ ಮತವನ್ನು ಕೊಟ್ಟು ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಿಮ್ಮಿಂದ ನಾನು ನ್ಯಾಯವನ್ನು ನಿರೀಕ್ಷೆ ಮಾಡುತ್ತೇನೆ. ಸ್ಥಳೀಯ ಸಂಸ್ಥೆಗಳಿಂದ ಗೆದ್ದಿರುವ ೨೫ ಜನ ಶಾಸಕರಿಗೆ ನಮ್ಮ ಭಾಗದಲ್ಲಿ ಈ ರೀತಿಯ ಅವ್ಯವಹಾರವಾಗಿರುವುದನ್ನು ತಡೆಗಟ್ಟುವುದು ನಮ್ಮ ಜವಾಬ್ದಾರಿಯಾಗದೆ. ಹೀಗಾಗಿ ನನಗೆ ನ್ಯಾಯ ಕೊಡಿಸುತ್ತೀರಿ ಎಂದು ಅಂದುಕೊಂಡಿದ್ದೇನೆ. ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ನನ್ನ ವಂದನೆಗಳು.

**ಸಭಾಪತಿಯವರು**:- ಆರ್.ಡಿ.ಪಿ.ಆರ್., ಮಂತ್ರಿಗಳು ಸದನಕ್ಕೆ ಬಂದಿಲ್ಲವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕೆಳಮನೆಯಲ್ಲಿದ್ದಾರೆ. ಇನ್ನು ಸ್ವಲ್ಪ ಸಮಯದಲ್ಲಿ ಬರುತ್ತಾರೆ.

**ಸಭಾಪತಿಯವರು**:- ಸಭಾನಾಯಕರೆ ಮಂತ್ರಿಗಳು ಬರುವವರೆಗೆ ಉತ್ತರವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಎ.ನಾರಾಯಣಸ್ವಾಮಿಯವರು ನಿಯಮ ೭೨ರಲ್ಲಿ ಗಮನ ಸೆಳೆದಿರುವ ಸೂಚನೆಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

( ಹೇಳಿಕೆಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಹೇಳಿಕೆಯಲ್ಲಿ ಕೊಟ್ಟಿರುವಂತಹ ಮಾಹಿತಿಯಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎ.ನಾರಾಯಣಸ್ವಾಮಿಯವರು ವಿಸ್ತಾರವಾಗಿ ಮಾತನಾಡಿದ್ದಾರೆ ಮತ್ತು ಗಂಭೀರವಾದ ಆರೋಪವನ್ನು ಮಾಡಿದ್ದಾರೆ. ಶ್ರೀ ಲಕ್ಷ್ಮಯ್ಯ ಎನ್ನುವವರ ಹೆಸರಿನಲ್ಲಿ ಆ ಭೂಮಿ ಇದೆ. ಆ ಪಹಣಿಯಲ್ಲಿ ಸುಮಾರು ೬,೭೦,೦೦೦ ರೂಪಾಯಿಗಳ ಸಾಲ ಸೌಲಭ್ಯವನ್ನು ತೆಗೆದುಕೊಂಡಿರುವುದು ದಾಖಲಾಗಿದೆ. ಶ್ರೀನಿವಾಸಪುರದ ಗ್ರಾಮ ಪಂಚಾಯಿತಿಯಲ್ಲಿ ೬ ಮನೆಗಳಿಗೆ 3 high mast light ಗಳನ್ನು ಬಲಾಢ್ಯರು ಮಂಜೂರು ಮಾಡಿಕೊಂಡಿದ್ದಾರೆ.

(ಮುಂದು)

(862)21-09-2021(03-50)bsd-md

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ಎರಡನೆಯದಾಗಿ ಕಟ್ಟಡದ ಒಳಗೆ ಅಥವಾ ಕಾಮಗಾರಿ ನಡೆಸುವಂತಹ ಕಾರ್ಖಾನೆ ಒಳಗೆ ಹಾಕಿದ್ದಾರೆ. ಅವರು ಅಕ್ರಮವಾಗಿ ಹಾಕಿಕೊಂಡಿರುವ ೩ light ಗಳಿಗೆ ದುರದೃಷ್ಟವಶಾತ ಪಂಚಾಯಿತಿಯವರು ವಿದ್ಯುತ್ bill ಕಟ್ಟುತ್ತಿದ್ದಾರೆ ಎನ್ನುವ ಆರೋಪ ಮಾಡಿದ್ದಾರೆ. ರೂ.೫೦ ಕೋಟಿ ವೆಚ್ಚದಲ್ಲಿ ತಡೆಗೋಡೆಯನ್ನು ನಿರ್ಮಾಣ ಮಾಡಿಕೊಂಡು ಸ್ವಂತ ಮನೆಯ ಸುತ್ತಲೂ compound ಕಟ್ಟಿದ್ದಾರೆ ಎನ್ನುವ ಆರೋಪಗಳನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಮುದಾಯ ಭವನಕ್ಕೆ ಸಂಬಂಧಪಟ್ಟಂತೆ ಭೂಮಿಯನ್ನು ಹಸ್ತಾಂತರಿಸಿದ್ದಾರೆಂದು ಅಧಿಕೃತ ಮಾಹಿತಿಗಳನ್ನು ಇಲಾಖೆಯವರು ಕೊಟ್ಟಿದ್ದಾರೆ. ಆದರೆ ಆ ಭೂಮಿ ಲಕ್ಷ್ಮಯ್ಯನವರ ಹೆಸರಿದ್ದು, ಪಹಣಿಯಲ್ಲಿ ಸಾಲ-ಸೌಲಭ್ಯಗಳು ದಾಖಲಾಗಿದ್ದು, high mast light ದುರುಪಯೋಗ ಇದೆ, ರೂ.೫೦ ಕೋಟಿ ವೆಚ್ಚದಲ್ಲಿ ತಡೆಗೋಡೆಯನ್ನು ಲಕ್ಷ್ಮಯ್ಯ ಎಂಬುವವರು ಸ್ವಂತಕ್ಕೆ ಮಾಡಿಕೊಂಡಿದ್ದಾರೆ ಎಂಬ ಗುರುತರ ಆರೋಪಗಳಿಗೆ ಸಮಗ್ರವಾದ ತನಿಖೆ ಮಾಡಿ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಆ ಭೂಮಿಯನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿರುವ ಬಗ್ಗೆ ಹೇಳಿದ್ದು, ಅದನ್ನು ಯಾರು ಮಾಡಿದ್ದಾರೆ? ನನ್ನ ಹತ್ತಿರ register ಆದ document ಇದೆ, ಅದನ್ನು ತೋರಿಸುತ್ತೇನೆ. ಶಿರಡಿ ಶ್ರೀ ಸತ್ಯ ಸಾಯಿಬಾಬಾ ಸೇವಾ ಸಮಿತಿ ಟ್ರಸ್ಟ್‌ನಲ್ಲಿ ಅನಿಲ್ ಕುಮಾರ್ ಎಂಬ ಕಾರ್ಯದರ್ಶಿ register ಮಾಡಿಕೊಟ್ಟಿದ್ದಾರೆ. ಆ ಸಾಯಿಬಾಬಾ ಟ್ರಸ್ಟ್‌ಗೆ property transfer ಆಗಿಲ್ಲ. ಅದು green belt ನಲ್ಲಿರುವ property ಯಾಗಿದ್ದು, conversion ಆಗಿಲ್ಲ, ಇವತ್ತಿನವರೆಗೂ ಪೋಡಿ ಆಗಿಲ್ಲ, ಇವತ್ತು ಲಕ್ಷ್ಮಯ್ಯ ಎನ್ನುವವರ ಹೆಸರಿನಲ್ಲಿಯೇ latest

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಹಣಿ ಬರುತ್ತದೆ. ಒಂದು ವೇಳೆ ಮಾನ್ಯ ಮಂತ್ರಿಯವರು ಹೇಳಿದಂತೆ ಗ್ರಾಮ ಪಂಚಾಯಿತಿಗೆ transfer ಆಗಿದ್ದರೆ RTC ಯಲ್ಲಿ ಯಾರ ಹೆಸರು ಬರುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಗ್ರಾಮ ಪಂಚಾಯಿತಿ ಹೆಸರು ಬರಬೇಕು.

**ಶ್ರೀ ಎಂ. ನಾರಾಯಣಸ್ವಾಮಿಃ-** ಇವತ್ತು ಲಕ್ಷ್ಮಯ್ಯನವರ ಹೆಸರು ಬರುತ್ತಿದ್ದು, ಇಂತಹ bogus ದಾಖಲೆಗಳನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ನಮ್ಮಲ್ಲಿ ಏನೂ ತೊಂದರೆ ಇಲ್ಲ, ಮಾನ್ಯ ಶಾಸಕರು ಪ್ರಸ್ತಾಪಿಸಿರುವ ವಿಷಯಗಳಿಗೆ ಉತ್ತರವನ್ನು ಇಲಾಖೆಯಿಂದ ಕೊಟ್ಟಿದ್ದೇವೆ. ನಾವು ಕೊಟ್ಟ ಉತ್ತರದಲ್ಲಿ ಅಸ್ಪಷ್ಟತೆ ಇದೆ, ಸರಿ ಇಲ್ಲ, ಅಧಿಕಾರಿಗಳು ಸುಳ್ಳು ಮಾಹಿತಿಗಳನ್ನು ಕೊಟ್ಟಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹೇಳುತ್ತಿದ್ದಾರೆ. ಇದಲ್ಲದೇ ಪಹಣಿ ಪತ್ರಿಕೆಯಲ್ಲಿ ಲಕ್ಷ್ಮಯ್ಯನವರ ಹೆಸರು ಬರುತ್ತಿದೆ, high mast light ದುರುಪಯೋಗವಾಗಿದೆ, ರೂ.೫೦ ಕೋಟಿಗಳ ವೆಚ್ಚದ ತಡೆಗೋಡೆಯನ್ನು ಖಾಸಗಿಯವರು ಬಳಸಿಕೊಂಡಿದ್ದಾರೆ ಎನ್ನುವ ಎಲ್ಲಾ ಆರೋಪಗಳು ಸೇರಿದಂತೆ ಸಮುದಾಯ ಭವನದ ಕಟ್ಟಡದ ಜಾಗ ಮತ್ತು ಅಲ್ಲಿರುವ ಹಣ ಸೇರಿದಂತೆ ಆ ಕಟ್ಟಡ ಯಾರ ಸ್ವತ್ತಾಗುತ್ತದೆ ಎನ್ನುವ ಬಗ್ಗೆ ಸಮಗ್ರ ತನಿಖೆ ಮಾಡುತ್ತೇನೆ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಬಸವೇಶ್ವರ ಸಮುದಾಯ ಭವನದ ಕಟ್ಟಡವನ್ನು ಗ್ರಾಮ ಪಂಚಾಯಿತಿ ಮೂಲಕ ಸರ್ಕಾರಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತೇನೆ. ಯಾರನ್ನು ರಕ್ಷಣೆ ಮಾಡುವ ವಿಚಾರವೇ ಇಲ್ಲ, ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ.

**ಡಾ|| ತೇಜಸ್ವಿನಿಗೌಡ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಜ್ವಲಂತ issue ಬಗ್ಗೆ ಚರ್ಚೆ ನಡೆಯುತ್ತಿದೆ. ಏಕೆಂದರೆ ಅಸಮಾನತೆ ಬಗ್ಗೆ Rural India, Urban India ಎಂದು ಬಹಳ ಮಾತನಾಡಿದ್ದೇವೆ. ಅಂತಹ noble cause ಇರುವ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಹಣ ಬೇಜವಾಬ್ದಾರಿಯಾಗಿ ಪೋಲಾಗಿದೆ ಎಂದು ಮಾನ್ಯ ಸದಸ್ಯರು ವಿಷಯವನ್ನು ಎತ್ತಿದ್ದಾರೆ. ನಮ್ಮ ಮಂತ್ರಿಗಳ ಮೇಲೆ ಸಹ ವಿಶ್ವಾಸ ಇಟ್ಟು ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನಾನು ಸ್ವಾಗತ ಮಾಡುತ್ತೇನೆ. Basic guidelines ಇದೆ. ಸರ್ಕಾರಿ ಹಣ ರೂ. ೫ ಲಕ್ಷ ಖರ್ಚು ಮಾಡಲು ಸಹ ನಿಯಮಗಳಿವೆ. ಆ ಭೂಮಿ ಸರ್ಕಾರಕ್ಕೆ ಹಸ್ತಾಂತರವಾಗಿರಬೇಕೆಂದು clear-cut guidelines ಇರುವಾಗ, ಜೊತೆಗೆ technology ಸಹ ಇದೆ. GPS ಮಾಡಬೇಕು, ಅದರ ಸ್ಥಳ ಎಲ್ಲಿದೆ, ಏನು ಎಂಬುದೆಲ್ಲವನ್ನೂ ನೋಡಬೇಕು. ಮೊನ್ನೆ ಅಧಿಕಾರಗಳ ಮೇಲೆ attack

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಾಗ ಅವರ ರಕ್ಷಣೆಯನ್ನು ಮಾಡಿದ್ದೇವೆ. ಏಕೆಂದರೆ ಆತ್ಮಹತ್ಯೆ ಮಾಡಿಕೊಂಡಿರುವ PDO ಗಳು ಇದ್ದಾರೆ, ಕೆಲವು ಕಡೆ ಜನ ಪ್ರತಿನಿಧಿಗಳು ತೊಂದರೆ ಕೊಟ್ಟಿದ್ದಾರೆ ಎನ್ನುವುದನ್ನು ನಾವು ಪ್ರಾಮಾಣಿಕವಾಗಿ ಚರ್ಚೆ ಮಾಡಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ರೂ.೪ ಕೋಟಿ ಬಹಳ ದೊಡ್ಡ ಮೊತ್ತವಾಗಿದೆ. ರಸ್ತೆ, ಶಾಲೆ, ಕುಡಿಯುವ ನೀರು ಇರುವುದಿಲ್ಲ. ಆ ಭಾಗದ ಸದಸ್ಯರೊಬ್ಬರು ಶಾಲೆ ಇಲ್ಲ ಎಂದು ಹೇಳುತ್ತಿದ್ದರು. ಇದು ಮೇಲುನೋಟಕ್ಕೆ clear violation ಏನಾಗಿದೆ, ನಮ್ಮ ಮಂತ್ರಿಗಳು ಸಹ ಹೇಳಿರುವಂತೆ ತನಿಖೆ ಆಗಲೇಬೇಕು. ಏಕೆಂದರೆ ಜನರಿಗೆ ಅನ್ಯಾಯವಾಗುತ್ತದೆ. ೬೦ ಗ್ರಾಮಗಳು ಎಂದರೆ ಅದರ ಬಗ್ಗೆ ನೋಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಬೆಳಗ್ಗೆ ನಾವು ಮಾತನಾಡುವಾಗ decentralization of power ಮಾಡುವಾಗ ಅಧಿಕಾರ ಕಸಿದುಕೊಳ್ಳಬಾರದು ಎಂದು spirit ಆಗಿ ಮಾತನಾಡುವಾಗ, State Exchequer loss ಮಾಡುವ ಮತ್ತು ದೀನದಲಿತರಿಗೆ ಅನ್ಯಾಯ ಆಗಬಾರದು. ಬಡವರು ಸಮುದಾಯ ಭವನಕ್ಕೆ ಹೋಗುತ್ತಾರೆ. ಅಂತಹವರಿಗೆ building ಇಲ್ಲದೇ bill ತೆಗೆದುಕೊಳ್ಳುವಂತಹ, ಖಾಸಗಿಯಾಗಿ misuse ಮಾಡುವಂತಹ, ಲೂಟಿ ಮಾಡಲು ಸಂಸ್ಥೆ ಮಾಡುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ಇಂತಹ ಅನ್ಯಾಯ ಎಲ್ಲಿಯೂ ನಡೆಯಬಾರದು, ಇದಕ್ಕೆ ಬಿಗಿಯಾದ ಕ್ರಮ ತೆಗೆದುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸುವರ್ಣ ಗ್ರಾಮ ಯೋಜನೆಯನ್ನು KRIDL (Karnataka Rural Infrastructure Development Limited) ಅಧಿಕಾರಿಗಳು ಯಾವ ರೀತಿ ಅನುಷ್ಠಾನ ಮಾಡುತ್ತಿದ್ದಾರೆ ಎಂಬ ಬಗ್ಗೆ ಸುದೀರ್ಘವಾಗಿ ಹೇಳಿದ್ದಾರೆ. ಹಸಿರು ವಲಯದಲ್ಲಿ ಸರ್ಕಾರದಿಂದ ಯಾವುದೇ alienation ಆಗದೇ, plan approval ಆಗದೇ, ಸಮುದಾಯ ಭವನ ಕಟ್ಟಲು ಅವಕಾಶ ಇದೆಯೇ? ಜನ ಸಾಮಾನ್ಯರು ಹಳ್ಳಿಗಳಲ್ಲಿ ಸಣ್ಣ ಜಾಗದಲ್ಲಿ ಮನೆ ಕಟ್ಟಿದ್ದರೆ electricity ಕೊಡುವುದಿಲ್ಲ. ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿದ್ದಾರೆ. ಅಂತಹದ್ದರಲ್ಲಿ ಮಾನ್ಯ ಸದಸ್ಯರು ಉಲ್ಲೇಖಿಸಿರುವ ರೀತಿ ಇದು green belt ಜಾಗವಾಗಿದೆ. ಇದು ಹೇಗಾಯಿತು? ಸರ್ಕಾರದ ನೀತಿ-ನಿಯಮಗಳನ್ನು ಉಲ್ಲಂಘನೆ ಮಾಡಿ ಈ ರೀತಿ ರೂ.೪ ಕೋಟಿ ಹಣದಲ್ಲಿ ಖಾಸಗಿ ವ್ಯಕ್ತಿಗಳು ಹೇಗೆ ದುರುಪಯೋಗ ಮಾಡಿಕೊಂಡಿದ್ದಾರೆ? Green belt ನಲ್ಲಿ ಮಾಡಬಾರದು ಎಂದು ಸರ್ಕಾರದ ಆದೇಶ ಮತ್ತು court judgements ಗಳು ಇವೆ. ಇದು ಹೇಗಾಯಿತು? ಸರ್ಕಾರಿ ಹಾಗೂ KRIDL ನ ಅಧಿಕಾರಿಗಳು ಇದನ್ನು ನೋಡಲಿಲ್ಲವೇ? ದಾಖಲೆ ಪರಿಶೀಲನೆ ಮಾಡಲಿಲ್ಲವೇ? ಕಣ್ಣು ಮುಚ್ಚಿಕೊಂಡು ಎಲ್ಲವನ್ನು ಮಾಡಿದರೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ಯಾವ ರೀತಿ ಮಾಡಿದ್ದಾರೆ? ಇದು ದೊಡ್ಡ ಭ್ರಷ್ಟಾಚಾರವಾಗಿದ್ದು, ಇದನ್ನು ಕೂಲಂಕಶವಾಗಿ ಚರ್ಚೆ ಮಾಡಿ ಇದಕ್ಕೆ ಕಾರಣೀಭೂತರಾದ ಅಧಿಕಾರಿಗಳೇನಿದ್ದಾರೆ; ಕೊನೆಗೆ ಸುಮಾರು ೨೦೦೦ ಚದುರ ವಿಸ್ತೀರ್ಣದ land ಅನ್ನು ಸರ್ಕಾರಕ್ಕೆ ಕೊಡಲು ಆಗುವುದಿಲ್ಲ. ಸರ್ಕಾರ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಏಕೆಂದರೆ ಅದು converted land ಅಲ್ಲ. Plan approval ಇಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಪ್ರಸ್ತಾಪಿತ ಜಾಗವು ಹಸಿರು ವಲಯದಲ್ಲಿದ್ದರೆ ಅಧಿಕಾರಿಗಳು ಕೊಟ್ಟ ಉತ್ತರ ಇಡೀ ಸದನವನ್ನು ದಿಕ್ಕು ತಪ್ಪಿಸುವ ಕೆಲಸವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರೇ ಬೆಳಕು ಚೆಲ್ಲಬೇಕು.

**ಸಭಾಪತಿಯವರುಃ-** ಮಾನ್ಯ ಮಂತ್ರಿಗಳೇ, ತಾವು ತನಿಖೆ ಮಾಡಿಸುವ ಬಗ್ಗೆ ತಿಳಿಸಿದ್ದು, ಯಾರಿಂದ ತನಿಖೆ ಮಾಡಿಸುತ್ತಾರೆ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸಿದ್ದು, ಸದರಿ ನಿವೇಶನ ಶಿರಡಿ ಶ್ರೀ ಸತ್ಯ ಸಾಯಿಬಾಬಾ ಸೇವಾ ಸಮಿತಿ ಟ್ರಸ್ಟ್ ಇವರಿಂದ ಕರ್ನಾಟಕ ರಾಜ್ಯ ಸರ್ಕಾರದ ಹೆಸರಿನಲ್ಲಿ ದಿನಾಂಕ ೧೯-೦೮-೨೦೨೧ ರಂದು ಜಯನಗರದ ಹಿರಿಯ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲಾಗಿದೆ. ಸದರಿ ಸಮುದಾಯ ಭವನದ ಕಟ್ಟಡದ ನಿವೇಶನ ರಾಜ್ಯ ಸರ್ಕಾರದ ಆಸ್ತಿ ಎಂದಾಗಿದೆ. ಈ ಮಧ್ಯೆ ಅದರ registration ಆಗಿದ್ದು, ಖಾತಾ ಬದಲಾವಣೆಗೆ ಸಮಯ ತೆಗೆದುಕೊಳ್ಳುವ ಬಗ್ಗೆ ಇದೆ. ಅದನ್ನೂ ಕೂಡ ಏನಾಗಿದೆ ಎಂದು ಅದನ್ನು ಪರಿಶೀಲನೆ ಮಾಡೋಣ. ಮಾನ್ಯ ಸದಸ್ಯರು ಮಾಡಿರುವ ಆಕ್ಷೇಪಣೆಗಳನ್ನು ಸರ್ಕಾರದಿಂದ ತಳ್ಳಿ ಹಾಕಿಲ್ಲ. ಬದಲಾಗಿ ಏನೇನು ತಪ್ಪು ನಡೆದಿದೆ ಎಂದು ಹೇಳಿದ್ದಾರೋ, ಅದರ ಬಗ್ಗೆ ಸಮಗ್ರ ತನಿಖೆ ನಡೆಸುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು, ಬಸವೇಶ್ವರ ಸಮುದಾಯ ಭವನಕ್ಕೆ ಒಟ್ಟು ಖರ್ಚಾಗಿರುವ ಹಣ ಮತ್ತು ಆ ಸ್ಥಳವನ್ನೂ ಕೂಡ registration ಮಾಡಿಕೊಟ್ಟಿದ್ದಾರೆ. ಅದನ್ನು ಪಂಚಾಯಿತಿ ಅಥವಾ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳುವ ಮಾತನ್ನು ಹೇಳಿದ್ದೇನು.

**ಶ್ರೀ ಎಂ. ನಾರಾಯಣಸ್ವಾಮಿಃ-** ಮಾನ್ಯ ಸಭಾನಾಯಕರು ದಿನಾಂಕ ೧೯-೮-೨೦೨೧ ರಲ್ಲಿ ಸರ್ಕಾರಕ್ಕೆ register ಮಾಡಿಕೊಟ್ಟಿದ್ದು, ರಾಜ್ಯಪಾಲರು, ಕರ್ನಾಟಕ ರಾಜ್ಯ ಸರ್ಕಾರ ಇವರ ಪರವಾಗಿ ಪ್ರತಿನಿಧಿಸುವ ಶ್ರೀ ಸೋಮಲಿಂಗಯ್ಯ ಎನ್ನುವವರ ಹೆಸರಿಗೆ ಶ್ರೀ ಸತ್ಯ ಸಾಯಿಬಾಬಾ ಸೇವಾ ಸಮಿತಿ ಟ್ರಸ್ಟನವರು ನೋಂದಣಿ ಮಾಡಿದ್ದಾರೆ. ಅದರಲ್ಲಿ ಮೂರು ಜನ ಇರುವ ಬಗ್ಗೆ ಅವರೇ ಹೇಳಿದ್ದಾರೆ. ಅದರಲ್ಲಿ ಸಂಚಾಲಕರಾಗಿ ಲಕ್ಷ್ಮಯ್ಯ, ಇವರ ಹೆಂಡತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷರು ಹಾಗೂ ಮಗ ಅನಿಲ್ ಕುಮಾರ್ ಕಾರ್ಯದರ್ಶಿ ಎಂದು ಹೇಳಿದ್ದಾರೆ. ಆದರೆ ಕಾರ್ಯದರ್ಶಿ ಒಬ್ಬನೇ register ಮಾಡಿಕೊಟ್ಟಿದ್ದಾನೆ. ಆ ಜಮೀನು ಸತ್ಯ ಸಾಯಿಬಾಬಾ ಟ್ರಸ್ಟ್‌ಗೆ transfer ಆಗಿಲ್ಲ. ಅವರು ಹೇಗೆ register ಮಾಡಲು ಸಾಧ್ಯ? ಸರ್ಕಾರದವರು ಕಣ್ಣುಮುಚ್ಚಿಕೊಂಡು register ಮಾಡಿಸಿಕೊಂಡರೇ? ಗ್ಯಾಲರಿಯಲ್ಲಿ ಕುಳಿತುಕೊಂಡು ಚೀಟಿ ಬರೆದುಕೊಡುವ ಅಧಿಕಾರಿಗಳಿಗೆ commonsense ಇಲ್ಲವೇ?

(ಮುಂದು)

(863)/21.09.2021/4.00/ಹೆಚ್‌ವಿ:ಎಂಡಿ

( ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು...):-**

ಸನ್ಮಾನ್ಯ ಸಭಾಪತಿಯವರೇ, ಹಸಿರು ವಲಯದಲ್ಲಿರುವ ಈ ಸ್ವತ್ತನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ, ಅದು conversion ಆಗಿರಬೇಕಾಗುತ್ತದೆ. Conversion ಆಗದೇ ಇರುವಂತಹ ಭೂಮಿಯನ್ನು ಘನತೆವೆತ್ತ ರಾಜ್ಯಪಾಲರ ಹೆಸರಿನಲ್ಲಿ registration ಮಾಡಿಕೊಡುತ್ತಾರೆಂದರೆ ಹೇಗೆ? ಅದಕ್ಕೊಂದು ಅರ್ಥ ಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಕ್ರೋಶದಲ್ಲಿಯೇ ಮಾತನಾಡಿರುವುದನ್ನು ನಾನು ಗಮನಿಸಿದ್ದೇನೆ. ಆಕ್ರೋಶದಲ್ಲಿ ಮಾತನಾಡುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ. ಅವರು ಬೇರೆಯವರ ಮೇಲೆ ಗಲಾಟೆ ಮಾಡಬೇಕಾಗಿತ್ತು ಆದರೆ, ನನ್ನ ಮೇಲೆ ಗಲಾಟೆ ಮಾಡುತ್ತಿದ್ದಾರೆ. ನಾನು ಅಪರಾಧಿಯಲ್ಲ. ಅವರ ಆಕ್ರೋಶ ನನಗೆ ಅರ್ಥವಾಗುತ್ತಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರನ್ನು ನಾನು ಅಪರಾಧಿಯನ್ನಾಗಿ ಮಾಡುತ್ತಿಲ್ಲ. ಅವರು ಸಹ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತ ಪ್ರತಿನಿಧಿಗಳಾಗಿದ್ದಾರೆ. ನನ್ನ ಭಾವನೆಗಳನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಹಣದ ಅಪವ್ಯಯವಾಗಬಾರದು ಎನ್ನುವುದು ಮಾನ್ಯ ಸದಸ್ಯರ ಕಳಕಳಿ, ಚಿಂತನೆ ಮತ್ತು ಉದ್ದೇಶವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ವಿಷಯದ ಗಂಭೀರತೆಯನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. Registration ಮಾಡಿರುವ ಪ್ರತಿ ನನಗೆ ದೊರೆತ್ತಿದೆ. ಅದರಲ್ಲಿ ನೋಂದಣಿ ಆಗಿದೆ ಎನ್ನುವುದು ಮಾತ್ರ ಇದೆ. ಇದರ ಹಿಂದೆ ಯಾರಿದ್ದಾರೆ, ಯಾರು ತಪ್ಪು ಮಾಡಿದ್ದಾರೆ, ದಾನಪತ್ರವಾಗಿದ್ದರೂ ಖಾತೆ ಬದಲಾವಣೆ ಆಗದೇ ಇರುವುದಕ್ಕೆ ಕಾರಣವೇನು, ಸಮಗ್ರವಾಗಿ ಹಣದ ದುರುಪಯೋಗವಾಗಿರುವುದು, ಖಾಸಗಿ ಜಾಗದಲ್ಲಿ 50 ಕೋಟಿ ರೂಪಾಯಿಗಳನ್ನು ಬಳಕೆ ಮಾಡಿಕೊಂಡು ತಡೆಗೋಡೆ ನಿರ್ಮಾಣ ಮಾಡಿಕೊಂಡಿರುವುದು high mast light bill ಅನ್ನು ಪಂಚಾಯಿತಿಯವರು ಕಟ್ಟುತ್ತಿರುವುದು ಈ ಎಲ್ಲ ಅಂಶಗಳಿಗೆ ಸಂಬಂಧಪಟ್ಟಂತೆ ಸಮಗ್ರವಾಗಿ ತನಿಖೆ ನಡೆಸಿದಾಗ ಮಾತ್ರ ಅರ್ಥವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿಸಿದರೆ, ' ಆ ಅಧಿಕಾರಿಗಳೇ ಅನುಮತಿಯನ್ನು ನೀಡಿರುತ್ತಾರೆ ಅವರಿಗೆ ಗೊತ್ತಿಲ್ಲದೇ ಏನೂ ಆಗುವುದಿಲ್ಲ ಪುನಃ ಅವರಿಂದಲೇ ತನಿಖೆಯನ್ನು ಮಾಡಿಸಿದರೆ ಹೇಗೆ?' ಎನ್ನುವ ಆತಂಕ ವಿರೋಧ ಪಕ್ಷದವರಿಗೆ ಇರಬಹುದು. ಆದ್ದರಿಂದ ರಾಜ್ಯ ಮಟ್ಟದ ಹಿರಿಯ ಅಧಿಕಾರಿಗಳ ಮೂಲಕ ಇದನ್ನು ತನಿಖೆ ಮಾಡಿಸುವಂತಹ ಕೆಲಸವನ್ನು ಮಾಡಲಾಗುತ್ತದೆ.

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ನಿಯಮ 68ರಡಿಯಲ್ಲಿ ತಾವು ನೀಡಿರುವ ವಿಚಾರಕ್ಕೆ ಉತ್ತರಿಸಲು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ದಿನ ಸದನದಲ್ಲಿ ಉಪಸ್ಥಿತರಿದ್ದಾರೆ. ತಾವು ಮಾತನಾಡಿ ಅವರು ಉತ್ತರವನ್ನು ಕೊಡುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಮಹಿಳೆಯರ ಮೇಲೆ ಅತ್ಯಾಚಾರ ನಡೆದ ನಂತರ ರಕ್ಷಣೆ ಕೊಡುವಂತಹ ಕೆಲಸವನ್ನು ಮಾಡುತ್ತಾರೆ. ಆದರೆ, ರಾಜ್ಯದಲ್ಲಿ ಮಕ್ಕಳು ಮತ್ತು ಮಹಿಳೆಯವರ ಮೇಲೆ ಅತ್ಯಾಚಾರ ಆಗದಂತೆ ತಡೆಗಟ್ಟುವಂತಹ ಕಾನೂನು ಮಾಡುವುದು ಗೃಹ ಇಲಾಖೆ. ಆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿ ಇಲ್ಲದಿದ್ದರೆ ನಾನು ಹೇಗೆ ವಿಷಯ ಮಂಡನೆ ಮಾಡುವುದು? ಕಳೆದ 10-15 ದಿನಗಳ ಹಿಂದೆಯೇ ನಾನು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮಗೆ ನೋಟೀಸ್ ಕೊಟ್ಟಿದ್ದೇನೆ. ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿ ಇಲ್ಲದಿರುವಾಗ ಸುಮ್ಮನೆ ಚರ್ಚೆ ಮಾಡುವುದರಿಂದ ಏನು ಪ್ರಯೋಜನ? ದಯಮಾಡಿ ಸಂಬಂಧಪಟ್ಟ ಸಚಿವರನ್ನು ಕರೆಯಿಸಿ. ನಿಯಮ 68ರಡಿಯಲ್ಲಿ ನಾನು ಕೊಟ್ಟಿರುವಂತಹ ವಿಚಾರ ಚರ್ಚೆಗೆ ತೆಗೆದುಕೊಳ್ಳದೇ ಬಹಳ ದಿನಗಳಿಂದ ಮುಂದಕ್ಕೆ ಹೋಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ತಾವು ಪ್ರಸ್ತಾಪ ಮಾಡುವ ವಿಚಾರಕ್ಕೆ ಅವರು ಉತ್ತರವನ್ನು ನೀಡಲು ಸಿದ್ಧರಿರುವಾಗ ತಾವು ಬೇರೆ ಮಂತ್ರಿಗಳನ್ನು ಕರೆಯಿಸಿ ಎಂದು ಹಠ ಮಾಡಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಲು ಪ್ರಾರಂಭ ಮಾಡಲಿ, ನಂತರ ಮಾನ್ಯ ಗೃಹ ಸಚಿವರು ಸದನಕ್ಕೆ ಬರುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸಭಾಪತಿಯವರು ಹೇಳುವ ಮಾತನ್ನು ಕೇಳಬೇಕು. ಅದನ್ನು ಬಿಟ್ಟು 'ಗೃಹ ಸಚಿವರೇ ಬೇಕು' ಎಂದು ಹಠ ಮಾಡಿದರೆ ಹೇಗೇ? ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಉಪಸ್ಥಿತರಿದ್ದಾರೆ. ಅವರು ತಮ್ಮ ಮಾತುಗಳನ್ನು ಪ್ರಾರಂಭಿಸಬೇಕು. ನಂತರ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ. ಸಚಿವರು ಬರುತ್ತಾರೆ. ತಾವು ಮಾತನಾಡಿ ಎಂದು ನೀವು ಹೇಳಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಸಹೋದರಿಯಾಗಿರುವ ಶ್ರೀಮತಿ ಭಾರತಿ ಶೆಟ್ಟಿಯವರು ಪ್ರಮುಖವಾಗಿರುವ ವಿಚಾರದ ಮೇಲೆ ಮಾತನಾಡುವವರಿದ್ದಾರೆ ಅವರಿಗೆ ಸಮಾಧಾನವಾಗುವಂತೆ ಅವರಿಗೆ ಬೇಕಾದ ಸಮಯವನ್ನೇ ಕೊಡಿ. ಅವರಿಗೆ ಬೇಕಾದ ಮಂತ್ರಿಗಳು ಸದನಕ್ಕೆ ಬರಲಿ.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಸದನದಲ್ಲಿ ಆರ್.ಡಿ.ಪಿ.ಆರ್. ಇಲಾಖೆಗೆ ಸಂಬಂಧಪಟ್ಟ ವಿಚಾರದ ಮೇಲಿನ ಚರ್ಚೆ ಪ್ರಾರಂಭ ಮಾಡುವುದಕ್ಕೂ ಮೊದಲು ಮಾನ್ಯ ಎಂ.ನಾರಾಯಣಸ್ವಾಮಿಯವರು ಆರ್.ಡಿ.ಪಿ.ಆರ್. ಸಚಿವರು ಬಂದ ಮೇಲೆ ಚರ್ಚೆಯನ್ನು 'ಪ್ರಾರಂಭ ಮಾಡೋಣ' ಎಂದು ಹೇಳಿದಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು, 'ತಾವು ಚರ್ಚೆಯನ್ನು ಪ್ರಾರಂಭ ಮಾಡಿ ಸಂಬಂಧಪಟ್ಟ ಸಚಿವರು ಬರುತ್ತಾರೆ' ಎಂದು ಹೇಳಿದ್ದರು, ಅವರು ಈ ಸದನಕ್ಕೆ ಬರಲಿಲ್ಲ ಮಾನ್ಯ ಸಭಾನಾಯಕರೇ ಉತ್ತರವನ್ನು ಕೊಟ್ಟರು. ನಾನು ಕಳೆದ 8 ದಿನಗಳಿಂದ ನೋಡುತ್ತಿದ್ದೇನೆ. ನನ್ನ ಸಹೋದರಿ ಶ್ರೀಮತಿ ಭಾರತಿ ಶೆಟ್ಟಿಯವರ ವಿಚಾರ ಸತತವಾಗಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಕೊನೆಗೆ ಬರುತ್ತಿತ್ತು. ಈ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನ ಮಾತ್ರ ಮಧ್ಯಾಹ್ನವೇ ಚರ್ಚೆಯನ್ನು ಪ್ರಾರಂಭ ಮಾಡಲಿ ಎನ್ನುವ ಉದ್ದೇಶದಿಂದ ಪ್ರಮೋಶನ್ ಕೊಟ್ಟು , ಬೇರೆ ವಿಷಯಗಳ ಮಧ್ಯದಲ್ಲಿ ಹಾಕಿದ್ದಾರೆ. ಈಗಲೂ ಸಹ ಮಾನ್ಯ ಸಭಾನಾಯಕರು, 'ಶ್ರೀಮತಿ ಭಾರತಿ ಶೆಟ್ಟಿಯವರೇ, ತಾವು ತಮ್ಮ ಮಾತುಗಳನ್ನು ಪ್ರಾರಂಭಿಸಿ, ಸಂಬಂಧಪಟ್ಟ ಸಚಿವರು ಬರುತ್ತಾರೆ' ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ, ಕೊನೆಗೆ ಮಂತ್ರಿಗಳು ಬರುವುದಿಲ್ಲ ಮಾನ್ಯ ಸಭಾನಾಯಕರೇ ಉತ್ತರವನ್ನು ಕೊಡುತ್ತಾರೆ. ಈ ರೀತಿ ಉತ್ತರವನ್ನು ಕೊಡಬೇಕಾದರೆ, ಮೊದಲೇ ಅವರ ಜೊತೆಗೆ ಮಾತನಾಡಿ ಒಂದು ನೋಟ್ ತೆಗೆದುಕೊಳ್ಳಬೇಕಾಗುತ್ತದೆ. ನಾನು ಸಭಾನಾಯಕನಾಗಿದ್ದ ಸಂದರ್ಭದಲ್ಲಿ ಯಾವ ಮಂತ್ರಿಗಳು ಸದನಕ್ಕೆ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ ಅವರಿಂದ ನೋಟ್ ತೆಗೆದುಕೊಂಡು, ಸಂಬಂಧಪಟ್ಟ ಅಧಿಕಾರಿಗಳಿಂದ briefing ತೆಗೆದುಕೊಂಡು ನಾನೇ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದೆ. ಆದರೆ, ಈಗ ಮಾನ್ಯ ಸಭಾನಾಯಕರು, 'ತಾವು ಚರ್ಚೆಯನ್ನು ಪ್ರಾರಂಭ ಮಾಡಿ ಅವರು ಬರುತ್ತಾರೆ' ಎಂದು ಹೇಳುತ್ತಾರೆ. ಚರ್ಚೆ ಮುಕ್ತಾಯಗೊಂಡರೂ ಸಂಬಂಧಪಟ್ಟ ಸಚಿವರು ಬರುವುದಿಲ್ಲ. ಈಗ ಶ್ರೀಮತಿ ಭಾರತಿ ಶೆಟ್ಟಿಯವರಿಗೂ ಅದೇ ರೀತಿ ಹೇಳುತ್ತಿದ್ದಾರೆ. ಅವರು ಮಾತನಾಡಿ ಮುಗಿಸಿದರೂ ಸಂಬಂಧಪಟ್ಟ ಸಚಿವರು ಬರುವುದಿಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಭಾನಾಯಕರಾಗಿದ್ದಾರೆ. You are Leader of the House. You should be strong and powerful and you will stand in the shoe of the Chief Minister. ಈ ಸದನಕ್ಕೆ ಅವರೇ ಮುಖ್ಯಮಂತ್ರಿಗಳಿದ್ದಂತೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಮಾನ್ಯ ಎಸ್.ಆರ್.ಪಾಟೀಲ್‌ರವರು ಸಭಾನಾಯಕರಾಗಿದ್ದಾಗ, ನಾನು ವಿರೋಧ ಪಕ್ಷದಲ್ಲಿದ್ದೆ, ಆಗ ಅವರು ಹೇಳುವುದನ್ನೆಲ್ಲಾ ನಂಬಿಬಿಡುತ್ತಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಎಲ್ಲ ಪ್ರಶ್ನೆಗಳಿಗೂ ಅವರ ಪರವಾಗಿ ಇವರೇ ಉತ್ತರ ಕೊಡುತ್ತಿದ್ದರು. ಎಲ್ಲಾ ಇಲಾಖೆಗಳ ಪ್ರಶ್ನೆಗೂ ಇವರೇ ಉತ್ತರ ಕೊಡುತ್ತಿದ್ದರು. ಆಗ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ, 'ಸಭಾನಾಯಕರಾದರೇ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಬಹುದು ಅದನ್ನು ನಾವು ಸ್ವೀಕರಿಸಬಹುದು' ಎಂದು ನಾನು ತಿಳಿದುಕೊಂಡಿದ್ದೆ. ಈಗ ಅವರು ವಿರೋಧ ಪಕ್ಷದ ನಾಯಕರಾದ ಮೇಲೆ ಎಲ್ಲದಕ್ಕೂ ಸಂಬಂಧಪಟ್ಟ ಸಚಿವರೇ ಉತ್ತರ ಕೊಡಬೇಕೆಂದು ಹೇಳುತ್ತಾರೆ. ಅವರು ಆ ಕಡೆ ಹೋದ ಮೇಲೆ ಬದಲಾವಣೆ ಆಗಿರುವುದು ನನಗೆ ಗೊತ್ತಿರಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಸಭಾನಾಯಕನಾಗಿದ್ದಾಗ, ಬೇರೆ ಸಚಿವರ ಪರವಾಗಿ ಉತ್ತರವನ್ನು ಕೊಟ್ಟಿದ್ದೇನೆ ಇಲ್ಲವೆಂದು ಹೇಳುವುದಿಲ್ಲ. ಯಾವಾಗ ಉತ್ತರವನ್ನು ಕೊಟ್ಟಿದ್ದೇನೆಂದರೆ, ಸಂಬಂಧಿಸಿದ ಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಕ್ಕೆ ಬರುವುದಿಲ್ಲವೆಂದು ಆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಬಂದು ಹೇಳಿದಾಗ ಅಥವಾ ನನಗೆ ನೋಟ್ ಕಳುಹಿಸಿ ಮತ್ತು ತಮಗೆ ನೋಟ್ ಕಳುಹಿಸಿದ ನಂತರ ಯಾವ ಮಂತ್ರಿಗಳು ಬರುವುದಿಲ್ಲವೆಂದು ನೋಟ್ ಮಾಡಿಕೊಂಡು, briefing ತೆಗೆದುಕೊಳ್ಳುತ್ತಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಾಕಷ್ಟು ಬಾರಿ ನಾನೇ ಉತ್ತರವನ್ನು ಕೊಟ್ಟಿದ್ದೇನೆ. ಕೊಟ್ಟಿಲ್ಲವೆಂದು ಹೇಳುವುದಿಲ್ಲ. ಆಗ ನಾನು ತಮ್ಮ ಅನುಮತಿಯನ್ನು ತೆಗೆದುಕೊಂಡು ಅವರ ಪರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದರೆ, well in advance ಅವರು ನೋಟ್ ಕಳುಹಿಸಿರುತ್ತಾರೆ. ಈಗ ಮಾನ್ಯ ಸಭಾನಾಯಕರಿಗೆ ಅಥವಾ ತಮಗೆ ಆ ರೀತಿಯ ಯಾವುದೇ ನೋಟ್ ಅನ್ನು ಕಳುಹಿಸಿಕೊಟ್ಟಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಹತ್ತಿರ ನೋಟ್ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರ ಹತ್ತಿರ ನೋಟ್ ಇದ್ದರೆ, ಶ್ರೀಮತಿ ಭಾರತಿ ಶೆಟ್ಟಿಯವರಿಗೆ ಚರ್ಚೆಯನ್ನು ಪ್ರಾರಂಭ ಮಾಡಿ ಮಾನ್ಯ ಸಚಿವರು ಬರುತ್ತಾರೆ' ಎಂದು ಇವರುಗಳು ಏಕೆ ಹೇಳುತ್ತಿದ್ದಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. Basically, I am in legal profession.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾನಾಯಕರಿಗೆ ಯಾವ ಮಂತ್ರಿಗಳು ಬರುತ್ತಾರೆನ್ನುವುದು ಅವರಿಗೂ ಗೊತ್ತಿಲ್ಲ. ಮಂತ್ರಿಗಳು ಬರುತ್ತಾರೆನ್ನುವ ನಂಬಿಕೆಯ ಮೇಲೆ ಉತ್ತರವನ್ನು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಆರ್.ಡಿ.ಪಿ.ಆರ್. ಮೇಲೆ ಚರ್ಚೆ ಪ್ರಾರಂಭ ಮಾಡಬೇಕಾದ ಸಂದರ್ಭದಲ್ಲಿ ನಾನು 'ಮಾನ್ಯ ಈಶ್ವರಪ್ಪನವರು ಬರುತ್ತಾರೆ ತಾವು ಚರ್ಚೆಯನ್ನು ಪ್ರಾರಂಭ ಮಾಡಿ' ಎಂದು ಹೇಳಿದ್ದೆ. ಆದರೆ, ಅವರ ಮನಸ್ಸಿನಲ್ಲಿ ನಾನೇ ಉತ್ತರವನ್ನು ಕೊಟ್ಟರೆ ಸಾಕು ಎನ್ನುವ ಭಾವನೆ ಇತ್ತು. ಆ ಕಾರಣದ ಹಿನ್ನೆಲೆಯಲ್ಲಿ ನಾನೇ ಅವರ ಚರ್ಚೆಗೆ ಉತ್ತರವನ್ನು ನೀಡಿದ್ದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನಗೆ ನೋಟ್ ಕೊಟ್ಟಿದ್ದರೆ ಮಾತ್ರ ನಾನು ಆ ಸಚಿವರ ಪರವಾಗಿ ಉತ್ತರವನ್ನು ಕೊಡುತ್ತಿದ್ದೆ.

**ಸಭಾಪತಿಯವರು:-** ಇಲ್ಲಿಗೆ ಈ ವಿಚಾರದ ಮೇಲಿನ ಚರ್ಚೆಯನ್ನು ಸಾಕು ಮಾಡಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ನಿಯಮ 330ರಡಿ ಪ್ರಸ್ತಾಪ ಮಾಡಿದಂತಹ ವಿಚಾರಕ್ಕೆ ಉತ್ತರವನ್ನು ನೀಡಲು ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದರು ಅದಕ್ಕೆ ಉತ್ತರ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಉತ್ತರ ಬಂದಿದ್ದರೆ, ನಾನು ಅದರ ಮೇಲೆ ಮಾತನಾಡಬೇಕಾಗುತ್ತದೆ.

**ಸಭಾಪತಿಯವರು:-** ಗಮನಸೆಳೆಯುವ ಸೂಚನೆಗಳ ಮೇಲೆ ಚರ್ಚೆ ಮುಗಿದ ನಂತರ ನಿಯಮ 330 ಅನ್ನು ತೆಗೆದುಕೊಳ್ಳಲಾಗಿತ್ತದೆ. ಮಾನ್ಯ ಭೋಜೇಗೌಡರೇ, ತಮ್ಮ ವಿಚಾರಕ್ಕೆ ಇನ್ನೂ ಉತ್ತರ ಬಂದಿಲ್ಲ, ಮಂತ್ರಿಗಳು ಬಂದಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಗಮನಸೆಳೆಯುವ ಸೂಚನೆ. ಮಾನ್ಯ ಮರಿತಿಬ್ಬೇಗೌಡರು ಪ್ರಾರಂಭಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ: ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ರಚಿಸುವಾಗ ಭೂಸ್ವಾಧೀನಪಡಿಸಿಕೊಳ್ಳದೇ ಇರುವ ಪ್ರದೇಶವನ್ನು ಬಳಕೆ ಮಾಡಿಕೊಂಡು ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕುರಿತು**

---

**ಶ್ರೀ ಮರಿತಿಬ್ಬೇಗೌಡ( ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ರಚಿಸುವಾಗ ಭೂಸ್ವಾಧೀನಪಡಿಸಿಕೊಳ್ಳದೇ ಇರುವ ಪ್ರದೇಶವನ್ನು ಬಳಕೆ ಮಾಡಿಕೊಂಡು ನಿಯಮಾವಳಿಗಳನ್ನು ಉಲ್ಲಂಘಿಸಿರುವ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಲು ಬಯಸುತ್ತಿದ್ದೇನೆ.

**ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ಅಭಿವೃದ್ಧಿಗಾಗಿ ಭೂಮಿಯನ್ನು ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಕೆಲವೊಂದು ಪ್ರಕರಣಗಳಲ್ಲಿ ಭೂಮಾಲೀಕರು ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಧ್ಯೆ ಪರಸ್ಪರ ಒಪ್ಪಂದದ ಮುಖಾಂತರ ಭೂಮಿಯನ್ನು ವಶಪಡಿಸಿಕೊಂಡು ಬಡಾವಣೆ ರಚಿಸಲಾಗಿರುತ್ತದೆ. ಈ ಹಿಂದೆ ಮೈಸೂರು ನಗರದಲ್ಲಿ ಸಿ.ಐ.ಟಿ.ಬಿ. ಇದ್ದಂತಹ ಸಂದರ್ಭದಲ್ಲಿ ಸುಮಾರು 30 ರಿಂದ 50 ವರ್ಷಗಳ ಹಿಂದೆ ಪರಸ್ಪರ ಒಪ್ಪಿಗೆ ಮೇಲೆ ಸ್ಥಳದಲ್ಲಿಯೇ ಭೂಮಾಲೀಕರನ್ನು ಒಪ್ಪಿಸಿ ಕರಾರಿನ ಮುಖಾಂತರ ಬಡಾವಣೆ ರಚಿಸಲಾಗಿತ್ತು. ಅಂತಹ ಭೂಮಿಯನ್ನು ಭೂಸ್ವಾಧೀನಪಡಿಸಿಲ್ಲ ಅಥವಾ ಅಧಿಸೂಚನೆ ಹೊರಡಿಸಿಲ್ಲವೆಂದು ಈಗಭೂಮಾಲೀಕರಿಂದ ಮೇಲಿಂದ ಮೇಲೆ ಅರ್ಜಿಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗುತ್ತಿವೆ. ಅಂತಹ ಕೆಲವು ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದ ದಾಖಲೆ ಪ್ರತಿಗಳು ಶಿಥಿಲವಾಗಿವೆ. ಈ ಕುರಿತು ಸೂಕ್ಷ್ಮ ತನಿಖೆ ಮಾಡಿ ಭೂಸ್ವಾಧೀನಕ್ಕೆ ಒಳಪಡದೆ ಇದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ:UDD 08 TTP 2014 ದಿನಾಂಕ:11.02.2015ರನ್ವಯ ಭೂಮಾಲೀಕರು ಒಪ್ಪಿದಂತಹ ಪ್ರಕರಣಗಳಲ್ಲಿ ಶೇಕಡಾ 50ರಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲು ಕ್ರಮವಹಿಸಲಾಗಿದೆ. ಭೂಮಾಲೀಕರು ಒಪ್ಪದಂತಹ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯಿದೆ, 2013ರಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಜರುಗಿಸಿ ಭೂಸ್ವಾಧೀನಪಡಿಸಿಕೊಂಡು ಪರಿಹಾರ ವಿತರಿಸುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ. ಭೂಮಾಲೀಕರಿಗೆ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ನಿವೇಶನಗಳನ್ನು ನೀಡುವುದರಿಂದ ಸದರಿ ನಿವೇಶನದ ಮೌಲ್ಯವು ಕೃಷಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಮೀನಿನ ಮೌಲ್ಯಕ್ಕಿಂತ ಅಧಿಕವಾಗಿರುವುದರಿಂದ ಭೂಮಾಲೀಕರಿಗೆ ಲಾಭದಾಯಕವಾಗಿರುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಸದನಕ್ಕೆ ತಪ್ಪು ಮಾಹಿತಿಯನ್ನು ನೀಡಿದ್ದಾರೆ. ನಾನು ಕೊಟ್ಟಿರುವ ನೋಟೀಸ್‌ನಲ್ಲಿ ಉಲ್ಲೇಖ ಮಾಡಿರುವ ವಿಚಾರವೇ ಬೇರೆಯಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಬಡಾವಣೆ ರಚನೆ ಮಾಡುವಾಗ, ಸ್ವಾಧೀನಪಡಿಸಿಕೊಳ್ಳದೇ ಇರುವಂತಹ ಸ್ಥಳಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಳ್ಳಲಾಗಿದೆ. ಈ ಬಡಾವಣೆಗಳಲ್ಲಿ 10 ಗುಂಟೆ, 15 ಗುಂಟೆ ಅಥವಾ 20 ಗುಂಟೆ ಜಾಗವನ್ನು ರಸ್ತೆ ನಿರ್ಮಾಣಕ್ಕಾಗಿ ಪ್ರಾಧಿಕಾರವು ಉಪಯೋಗಿಸಿಕೊಂಡಿರುತ್ತದೆ.

(ಮುಂದುವರಿದಿದೆ)

(864) 21.09.2021 4.10 ಪಿಕೆಎಕೆ

**ಶ್ರೀ ಮರಿತಿಬ್ಬೇಗೌಡ** (ಮುಂದುವರೆದಿದೆ)

ಈ ಕೆಲಸವನ್ನು 10-15-20 ವರ್ಷಗಳ ಹಿಂದೆ ಮಾಡಿದ್ದಾರೆ. ಇದನ್ನು ಯಾವುದೇ ಒಂದು ಒಪ್ಪಂದದ ಆಧಾರದ ಮೇಲೆ ತೆಗೆದುಕೊಂಡಿಲ್ಲ. ಭೂಮಾಲೀಕರಿಗೆ ಇದು ಗೊತ್ತೇ ಇಲ್ಲ. ಆ ರೀತಿ ಅತಿಕ್ರಮಣ ಮಾಡಿ ಪ್ರಾಧಿಕಾರ ಬಡಾವಣೆ ರಚನೆ ಮಾಡಿದೆ. ಈಗ ಅವರು ಎನ್‌ಕ್ರೋಚ್ ಮಾಡಿಕೊಂಡು ಬಡಾವಣೆ ರಚನೆ ಮಾಡಿಕೊಂಡಿರುವುದಕ್ಕೆ ಬದಲಿಯಾಗಿ ಅದೇ ಮಾದರಿ ಇರತಕ್ಕಂತಹ ಅಷ್ಟೇ ವಿಸ್ತೀರ್ಣದ ನಿವೇಶನವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ತಾವು ಏನು ಹೇಳುತ್ತಿದ್ದೀರಿ ಎಂದರೆ, 'ಪರಸ್ಪರ ಒಪ್ಪಂದದ ಮೇಲೆ' ಎನ್ನುತ್ತಿದ್ದೀರಿ. 2013ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಭೂಸ್ವಾಧೀನ ಕಾಯಿದೆ ತೆಗೆದುಕೊಂಡು ಬಂದಿದೆ. ಆ ಕಾಯಿದೆ ಪ್ರಕಾರ ಯಾವ ಭೂಮಾಲೀಕ ಒಪ್ಪಿಗೆ ಕೊಡುತ್ತಾನೋ ಅದನ್ನು 50:50 ಅನುಪಾತದ ಹಿನ್ನೆಲೆಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಬಹುದು ಅಥವಾ ಹಣ ಕೊಟ್ಟಾದರೂ ಪರಿಹಾರ ಕೊಟ್ಟು ತೆಗೆದುಕೊಳ್ಳಬಹುದು. ಆದರೆ ಇಲ್ಲಿರುವ ಸಮಸ್ಯೆ ಏನೆಂದರೆ, ನಿಮ್ಮ ಪ್ರಾಧಿಕಾರದವರು ಬಡಾವಣೆ ರಚನೆ ಮಾಡುವಾಗ ಅನಧಿಕೃತವಾಗಿ ಏನು ಭೂಸ್ವಾಧೀನಪಡಿಸಿಕೊಂಡಿದ್ದಾರೋ, ಆ ಜಾಗಕ್ಕೆ ರೈತರು ಪರಿಹಾರ ಕೇಳುತ್ತಿದ್ದಾರೆ. ಆ ಭಾಗಕ್ಕೆ 2013ರ ಪ್ರಕಾರ ಇದ್ದ ಭೂಸ್ವಾಧೀನ ನಿಯಮವನ್ನು ಅನುಸರಿಸಿ ಪರಿಹಾರವನ್ನು ಕೊಡಬೇಕು ಎಂದು, ಇಲ್ಲದಿದ್ದರೆ, ಅವನಿಗೆ ಅಷ್ಟೇ ಪ್ರಮಾಣದ ಭೂಮಿಯನ್ನು ಕೊಡಬೇಕು. ಇದನ್ನು 4 ವರ್ಷಗಳಿಂದ ಪ್ರಾಧಿಕಾರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯಲ್ಲಿಒಪ್ಪುತ್ತಿಲ್ಲ. ರೈತರು, ಅದೇ ಪ್ರಮಾಣದ ಅಭಿವೃದ್ಧಿ ಆಗದ ಭೂಮಿ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ನಿಮ್ಮ ಪ್ರಾಧಿಕಾರದ ಒಪ್ಪಿಗೆ ಇಲ್ಲ. ಅಲ್ಲದೇ, ಇದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೂಡ ಕೊಡುತ್ತಿಲ್ಲ. ರೈತರಿಗೆ ಸುಮ್ಮನಾದರೂ ಹಿಂಸೆ ಕೊಡುತ್ತಿದ್ದೀರಿ. ಉದಾಹರಣೆಗೆ ರೈತ 10 ಸಾವಿರ ಚದರ ಅಡಿ ಭೂಮಿ ಕಳೆದುಕೊಂಡಿದ್ದರೆ ಇವತ್ತು ಪ್ರಾಧಿಕಾರದವರು, 50:50 ಅನುಪಾತದಲ್ಲಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಂದರೆ ಅವರಿಗೆ 2 ಸಾವಿರ ಚದರ ಅಡಿ ಅಭಿವೃದ್ಧಿಪಡಿಸಿದ ಭೂಮಿಯನ್ನು ಕೊಡುತ್ತಾರೆ. ಅದರಿಂದ ಅವನಿಗೆ ಎಷ್ಟು ನಷ್ಟವಾಗುತ್ತದೆ? ರೈತ, ಅಭಿವೃದ್ಧಿ ಪಡಿಸದೇ ಇರುವಂತಹ 10 ಸಾವಿರ ಚದರ ಅಡಿ ಭೂಮಿಯನ್ನೇ ಕೊಟ್ಟುಬಿಡಿ ಎಂದು ಹೇಳುತ್ತಿದ್ದೇನೆ. ಸರ್ಕಾರ, 50 : 50 ಅನುಪಾತದಲ್ಲಿ 2 ಸಾವಿರ ಚದರ ಅಡಿ ಭೂಮಿ ಕೊಡುತ್ತೇವೆ ಎಂದು ಹೇಳುತ್ತಿದೆ. ಅದಕ್ಕೆ ಅವರು ಒಪ್ಪದೇ ಇದ್ದಾಗ ನೀವು, ಅವರು ಕೇಳಿದಂತೆ ಕೊಡಬೇಕಾಗುತ್ತದೆ. ಹೊಸ ಭೂಸ್ವಾಧೀನ ಕಾಯಿದೆ ನಿಯಮದ ಪ್ರಕಾರ ನೀವು ಅಷ್ಟೇ ಪ್ರಮಾಣದ ಅಭಿವೃದ್ಧಿ ಹೊಂದಿರದ 10-20 ಗುಂಟೆ ಇರಲಿ, ಅದನ್ನೇ ರೈತರಿಗೆ ಕೊಡಬೇಕು. ಪ್ರಾಧಿಕಾರದವರು, ಕಡತ ಸಿಗಲಿಲ್ಲ ಎಂದು ಹೇಳುತ್ತಾರೆ. ಕಡತ ಸಿಗದೇ ಇರುವುದಕ್ಕೆ ಜವಾಬ್ದಾರರು ಯಾರು? ರೈತರು ಕಡತವನ್ನು ತಂದು ಕೊಡಬೇಕೇ? ಇಂತಹ ಪ್ರಕರಣಗಳು ಒಂದೆರಡು ಇರಬಹುದಾದರೂ, ಪ್ರಾಧಿಕಾರದ ಸಭೆಯ ಮುಂದೆ ಈಗೇನು ಪ್ರಕರಣಗಳು ಬರುತ್ತಿವೆಯೋ ಅದಕ್ಕೆ ಸಂಬಂಧಪಟ್ಟಂತೆ ಕಡತಗಳು ಇಲ್ಲ ಎಂದು ಆ ಸಭೆಗಳಿಂದ ಉತ್ತರ ಬಂದಿಲ್ಲ. ಈಗೇನು ಉತ್ತರ ಕೊಟ್ಟಿದ್ದಾರೋ ಅದು ತಪ್ಪು ಉತ್ತರವಾಗಿದೆ. ಮಾನ್ಯ ಸಚಿವರು ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ರೈತ 10 ಎಕರೆ ಭೂಮಿಯನ್ನು ಪ್ರಾಧಿಕಾರಕ್ಕೆ ಬಿಟ್ಟು ಕೊಟ್ಟಾಗ ಪ್ರಾಧಿಕಾರವೇ ಅವರಿಗೆ 2 ಎಕರೆ ಭೂಮಿಯನ್ನು ಬಿಟ್ಟಿರುತ್ತದೆ. ಆದರೆ, ಬಡಾವಣೆ ಮಾಡುವಾಗ ಆ 2 ಎಕರೆ ಭೂಮಿಯಲ್ಲಿ ಅರ್ಧ ಎಕರೆ ಭೂಮಿಯನ್ನು ಎನ್‌ಕ್ರೋಚ್ ಮಾಡಿದ್ದಾರೆ. ಆವತ್ತು ಆ ರೈತ 10 ಎಕರೆ ಭೂಮಿ ಬಿಟ್ಟು ಕೊಟ್ಟಾಗ ನೀವು ರೂ. 50 ಸಾವಿರ ಪರಿಹಾರ ಕೊಡಲಿಲ್ಲ. ಇವತ್ತು ಆ 10 ಎಕರೆ ಜಮೀನಿಗೆ ರೂ. 50 ಕೋಟಿ ಆಗುತ್ತದೆ. ಅಂತಹ ಕಡೆ ನೀವು ಅರ್ಧ ಎಕರೆ ಎನ್‌ಕ್ರೋಚ್ ಮಾಡಿಕೊಂಡು ಬಡಾವಣೆ ಮಾಡಿ, ಅವನಿಗೆ 10 ಪರ್ಸೆಂಟ್ ಕೊಡುತ್ತೇವೆ ಎಂದರೆ ಹೇಗೇ? ಆ ರೈತನಿಗೆ ನಷ್ಟ ಆಗುವುದಿಲ್ಲವೇ? ಹೊಸ ಭೂಸ್ವಾಧೀನ ಪ್ರಕ್ರಿಯೆ ನಿಯಮ ಏನಿದೆ ಅದನ್ನು ನಾವೂ ಪಾಲಿಸಬೇಕು; ಪ್ರಾಧಿಕಾರವೂ ಪಾಲಿಸಬೇಕು. ಆದರೆ ಈ ಪ್ರಕರಣ ಹೊಸ ಭೂಸ್ವಾಧೀನ ನಿಯಮದ ವ್ಯಾಪ್ತಿಗೆ ಇದು ಬರುವುದಿಲ್ಲ. ನಿಮ್ಮ ಪ್ರಾಧಿಕಾರ ಬಡಾವಣೆ ಮಾಡುವಾಗ ಅಕ್ರಮವಾಗಿ ಭೂಸ್ವಾಧೀನ ಮಾಡಿಕೊಂಡಿರುವುದಕ್ಕೆ ಅವರು ಬದಲಿ ಭೂಮಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೇಳುತ್ತಿದ್ದಾರೆ. ಅದು ಅಲ್ಲದೇ, ನಮಗೆ ಅಭಿವೃದ್ಧಿ ಪಡಿಸಿದ ಭೂಮಿ ಬೇಡ; ಅಭಿವೃದ್ಧಿ ಪಡಿಸದೇ ಇರುವ ಭೂಮಿ ಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ(ಬೈರತಿ)**:- ಮಾನ್ಯ ಸಭಾಪತಿಗಳೆ, ಭೂಸ್ವಾಧೀನ ಪಡಿಸಿಕೊಂಡಾಗ ಅಕಸ್ಮಿಕವಾಗಿ ಆಯಿತೋ ಅಥವಾ ತಪ್ಪಿನಿಂದಾಯಿತೋ ಗೊತ್ತಿಲ್ಲ. ಆದರೆ, ಅನ್ಯಾಯವಾಗಿದೆ ಎನ್ನುವವರು ಅದರ ಬಗ್ಗೆ ಮಾಹಿತಿ ನೀಡಿದಾಗ, ಅವರಿಗೆ ಅಭಿವೃದ್ಧಿ ಪಡಿಸಿದಂತಹ ಬಡಾವಣೆಯಲ್ಲಿ ಶೇಕಡ 50:50 ಅನುಪಾತದಲ್ಲಿ ಜಾಗ ಕೊಡುವುದಕ್ಕೆ ಪ್ರಾಧಿಕಾರ ಒಪ್ಪಿಗೆ ನೀಡಿದೆ. ಇದರಲ್ಲಿ ರೈತರಿಗಾಗಲಿ ಅಥವಾ ಬೇರೆ ಯಾರಿಗೂ ತೊಂದರೆ ಆಗುವಂತಹ ಪರಿಸ್ಥಿತಿ ಉಂಟಾಗುವುದಿಲ್ಲ. ಇವು 2000ನೇ ಇಸವಿಯ ಮುಂಚೆ ಆಗಿರುವ ಪ್ರಕರಣಗಳಾಗಿವೆ. ಈಗ ಮಾಡತಕ್ಕಂತಹ ಬಡಾವಣೆಗಳ ಸಂಬಂಧ, ಎಲ್ಲಾ ನಕ್ಷೆಗಳನ್ನು ಸಮರ್ಪಕವಾಗಿ ಗಣನೆಗೆ ತೆಗೆದುಕೊಂಡು, ಯಾವ ಯಾವ ಜಮೀನುಗಳಲ್ಲಿ ಏರು-ಪೇರುಗಳಿವೆ ಎಂಬುದೆಲ್ಲವನ್ನು ಪರಿಗಣಿಸಿ ಬಡಾವಣೆ ನಿರ್ಮಾಣ ಮಾಡಲಾಗುತ್ತಿದೆ. 2000ನೇ ಇಸವಿಯ ಮುಂಚಿನ ಪ್ರಕರಣದ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಪ್ರಾಧಿಕಾರ ಇವತ್ತು 50:50 ಅನುಪಾತದಲ್ಲಿ ಕೊಡುವ ಸಂಬಂಧ ಒಂದು ಅಧಿಸೂಚನೆ ಹೊರಡಿಸಿದೆ. ಸಾರ್ವಜನಿಕರು ಪ್ರಾಧಿಕಾರಕ್ಕೆ ಜಮೀನನ್ನು ಕೊಟ್ಟರೆ ಪ್ರಾಧಿಕಾರ ಅವರಿಗೆ 50:50 ಅನುಪಾತದಲ್ಲಿ ಕೊಡುವಂಥದ್ದನ್ನು ನಾನು ಸಚಿವನಾಗಿ ಬಂದ ಮೇಲೆ ನಿಯಮ ತಂದಿದ್ದೇನೆ. ಹಾಸನ ಇರಬಹುದು, ಬಳ್ಳಾರಿ ಇರಬಹುದು. ಬೇರೆ ಬೇರೆ ನಗರಗಳಲ್ಲಿ ಇವತ್ತು ಸಾಕಷ್ಟು ಜನ ರೈತರು ಭೂಮಿ ಕೊಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಅವರಿಗೆ ಬಡಾವಣೆಗಳನ್ನು ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಿದಂತಹ ನಿವೇಶನಗಳನ್ನು ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಮಾನ್ಯ ಮರಿತಿಬ್ಬೇಗೌಡರು ಸ್ಪೆಸಿಫಿಕ್ ಆಗಿ ಇಂಥವರು ಜಮೀನು ಕಳೆದುಕೊಂಡಿದ್ದಾರೆ ಎಂದು ಹೇಳಿದರೆ, ಇದರ ಬಗ್ಗೆ ಮಾನ್ಯ ಆಯುಕ್ತರ ಜೊತೆ ಮಾತನಾಡಿ, ಸರ್ಕಾರದಿಂದ ಅವರಿಗೆ ಸೂಕ್ತ ಮಾನದಂಡದ ಹಿನ್ನೆಲೆಯಲ್ಲಿ ಸ್ಪಂದಿಸುವ ಕೆಲಸ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ) :-** ಮಾನ್ಯ ಸಭಾಪತಿಗಳೆ, ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ತಂದಿರುವ ಮತ್ತು ಕಾಯಿದೆಯಲ್ಲಿ ಏನು 50:50ರ ಅನುಪಾತ ಇದೆಯೋ ಅದು ಕೇವಲ ಭೂಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮಾತ್ರ ಅನ್ವಯಿಸುತ್ತದೆ. 2013ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಏನು ಹೊಸ ಭೂಸ್ವಾಧೀನ ಕಾಯಿದೆಯನ್ನು ಮಾಡಿದೆಯೋ, ಅದರಿಂದ ಈಚೆಗೆ ಏನು ನಿಯಮ ಬಂತೋ ಅದು ಕೇವಲ ಭೂಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮಾತ್ರ ಅನ್ವಯಿಸುತ್ತದೆ. ಅಕ್ರಮವಾಗಿ ಬಳಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿಕೊಂಡಿರುವ ಜಾಗಕ್ಕೆ ನಿಮ್ಮ ನಿಯಮ ಅನ್ವಯಿಸುವುದಿಲ್ಲ. ಪ್ರಾಧಿಕಾರವೇನು ಅಕ್ರಮವಾಗಿ ಜಾಗ ಸ್ವಾಧೀನಪಡಿಸಿಕೊಂಡು ಬಡಾವಣೆ ರಚನೆ ಮಾಡಿಕೊಂಡಿದೆಯೋ ಅದಕ್ಕೆ ಈ ನಿಯಮ ಅನ್ವಯಿಸುವುದಿಲ್ಲ. ಯಾವ ರೈತ 2000 ಇಸವಿಯಲ್ಲಾಗಲಿ ಅಥವಾ ಅದರ ಹಿಂದೆಯಾಗಲಿ ತನ್ನ ಭೂಮಿಯನ್ನು ಕಳೆದುಕೊಂಡು, ಈಗ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲೇ ನನಗೆ 50:50 ಅನುಪಾತವನ್ನನುಸರಿಸಿ ಕೊಡಿ ಎಂದು ಕೇಳಿಕೊಂಡರೆ ಅಂಥವರಿಗೆ ಕೊಡಿ. ಯಾರು, 50:50 ಅನುಪಾತದಲ್ಲಿ ಕೊಡುವುದು ಬೇಡ, ಅಭಿವೃದ್ಧಿ ಹೊಂದಿರದ ಭೂಮಿಯನ್ನೇ ನಮಗೆ ಕೊಡಿ ಎಂದರೆ ಹಾಗೆಯೇ ಕೊಡಬೇಕು. ಇದನ್ನು ನಿರ್ಬಂಧ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ.

**ಶ್ರೀ ಎನ್.ನಾಗರಾಜ(ಎಂ.ಟಿ.ಬಿ)(ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಕೈಗಾರಿಕೆ):-** ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರದ ಹೊಸ ಭೂಸ್ವಾಧೀನ ಕಾಯಿದೆಯ ಪ್ರಕಾರ 1:2 ಅನುಪಾತದಲ್ಲಿ ಕೊಡಬೇಕು ಎಂದಿದೆ. ಈಗೇನು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆ ಎಂದು ಪ್ರಸ್ತಾಪವಾಗುತ್ತಿದೆಯೋ ಆ ಸಂಬಂಧ ಈಗಿನ ಮಾನದಂಡ ಏನು 1:3 ಅನುಪಾತದ ಪ್ರಕಾರ ಪರಿಹಾರ ಪಡೆದುಕೊಳ್ಳಲು ಒಪ್ಪಿಕೊಂಡರೆ, ಪ್ಲಾನಿಂಗ್ ಅಥಾರಿಟಿಯವರಿಗೆ ಅದೇರೀತಿ ಕೊಡಲು ಒಪ್ಪಿಗೆ ಇದ್ದರೆ ಹಾಗೂ ಕೂಡ ಮಾಡಬಹುದು.

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಚಿವರಾದ ನಾಗರಾಜ್‌ರವರು ಹೇಳಿದ್ದು ಅರ್ಥಪೂರ್ಣವಾಗಿದೆ. ಇದು ಕಾನೂನಿನ ಚೌಕಟ್ಟಿನಲ್ಲಿದೆ.

**ಶ್ರೀ ಬಿ.ಎ.ಬಸವರಾಜ (ಬೈರತಿ):-** ಮಾನ್ಯ ಸಭಾಪತಿಗಳೆ, ಇವು 2000ನೇ ಇಸವಿಯಲ್ಲಿ ನಡೆದಿರುವಂತಹ ಪ್ರಕರಣಗಳಾಗಿವೆ. ಹಾಗಾಗಿ, ಈಗ ನಾವು ಅದೇ ಜಮೀನನ್ನು, ಅದೇ ಅನುಪಾತದಲ್ಲಿ ಕೊಡಬೇಕು ಎಂದರೆ ಅದು ಆಗುವಂಥದ್ದಲ್ಲ. ಅವರಿಗೆ ಇವತ್ತಿನ ಮೌಲ್ಯಕ್ಕೆ ನಿವೇಶನಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ನಮ್ಮ ರೈತರಿಗೆ ಅನ್ಯಾಯವಾಗುವುದಿಲ್ಲ. ಇವತ್ತಿನ ಮೌಲ್ಯದ ಪ್ರಕಾರ ಅವರಿಗೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು**:- ಮಾನ್ಯ ಸಚಿವರು ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ರೀತಿ ರೈತರಿಗೆ ನಿರ್ಬಂಧ ಮಾಡಿ ಈ ರೀತಿಯ ಪರಿಹಾರ ಕೊಡುತ್ತೇವೆ ಎಂದು ಹೇಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇಲ್ಲದೇ ಇದ್ದರೆ, ಪ್ರಾಧಿಕಾರದಿಂದ, ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಎಂಡಾರ್ಸ್‌ಮೆಂಟ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿಸಿ. ಎಂಡಾರ್ಸ್‌ಮೆಂಟ್ ಕೊಡುವುದಕ್ಕೆ ತಾಕತ್ತು ಇಲ್ಲವೇ? ಆ ರೈತರಿಗೆ ಎಂಡಾರ್ಸ್‌ಮೆಂಟ್ ಕೊಟ್ಟರೆ ಆತ ಕೋರ್ಟ್‌ಗೆ ಹೋಗುತ್ತಾನೆ. ಕೋರ್ಟ್‌ನ ಆದೇಶದ ಪ್ರಕಾರ ಆತನಿಗೆ ನೀವು ಹತ್ತುಪಟ್ಟು ಜಾಸ್ತಿ ಪರಿಹಾರ ಕೊಡಬೇಕಾಗುತ್ತದೆ. ನಿಮ್ಮ ಪ್ರಾಧಿಕಾರದ ಆಯುಕ್ತರು ಏಕೆ ಎಂಡಾರ್ಸ್‌ಮೆಂಟ್ ಕೊಡುತ್ತಿಲ್ಲ?

(ಮುಂದು . . .)

(865) 21-09-2021 4.20 DS-AK

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ರೈತರ ಜಮೀನನ್ನು ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಸುಮಾರು ೨೦೦೦ನೇ ಇಸವಿಯಿಂದ ಇದುವರೆವಿಗೂ ರೈತರು ಏನು ಮಾಡುತ್ತಿದ್ದರು?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ರೈತರು ಪ್ರಾಧಿಕಾರದವರಿಗೆ ಹತ್ತು ಬಾರಿ ಅರ್ಜಿಯನ್ನು ಕೊಟ್ಟಿದ್ದಾರೆ. ಇವರು ಕೊಟ್ಟಿರುವಂತಹ ಅರ್ಜಿಯನ್ನು ಅವರು ತೆಗೆದುಕೊಳ್ಳುತ್ತಿಲ್ಲ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಸರಿಯಾದಂತಹ ಸ್ಕೆಚ್, ಆರ್.ಟಿ.ಸಿ. ಇಲ್ಲ. ಇವೆಲ್ಲವನ್ನು ಪರಿಗಣನೆ ಮಾಡಿ ಯಾರು ಜಮೀನನ್ನು ಕಳೆದುಕೊಂಡಿದ್ದಾರೆ ಅವರಿಗೆ ಖಂಡಿತವಾಗಿಯೂ ನ್ಯಾಯ ಒದಗಿಸುವಂತಹ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ರೈತರು ಮನವಿ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹತ್ತು ಬಾರಿ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೆ ಇವರು ರೈತರಿಗೆ endorsement ಕೊಡುವುದಿಲ್ಲ. ಈ ರೀತಿ ಪರಿಹಾರವನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಕಾನೂನಿನಲ್ಲಿ ಅವಕಾಶವಿದ್ದರೆ endorsement ಕೊಡಿ. ಇದು ಒಬ್ಬರು ಇಬ್ಬರದ್ದು ಅಲ್ಲ. ಸಾವಿರಾರು ಮಂದಿ ರೈತರ ಸಮಸ್ಯೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಇಷ್ಟೊಂದು ಏಕೆ ಆಕ್ರೋಶವಾಗಿ ಹೇಳುತ್ತಿದ್ದಾರೆಯೋ ನನಗೆ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ನಾನು ರೈತನ ಮಗ.

**ಶ್ರೀ ಬಿ.ಎ.ಬಸವರಾಜ:-** ನಾನೂ ಕೂಡ ರೈತನ ಮಗನೇ.

**ಶ್ರೀ ಮರಿತಿಬ್ಬೇಗೌಡ:-** ನೀವು ರೈತನ ಮಗನಾಗಿ ಈ ರೀತಿ ಮಾತನಾಡುತ್ತಿದ್ದೀರಲ್ಲಾ?

**ಸಭಾಪತಿಯವರು:-** ಮಾನ್ಯ ಸಚಿವರೇ, ಅದನ್ನು ಸರಿಪಡಿಸುವುದಕ್ಕೆ ಏನು ಸಾಧ್ಯವಿದೆಯೋ ಅದನ್ನು ಮಾಡಿ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಈಗ ಅದನ್ನು ನಾನು ಮರು ಪರಿಶೀಲನೆ ಮಾಡುತ್ತೇನೆ. ಅದರ ಸಾಧಕ-ಬಾಧಕಗಳ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮುಂದಿನ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಎಷ್ಟು ದಿವಸಗಳೊಳಗೆ ಮಾಡುತ್ತೀರಿ?

**ಶ್ರೀ ಬಿ.ಎ.ಬಸವರಾಜ:-** ಎಷ್ಟು ದಿವಸ ಎಂದು ಹೇಳುವುದಕ್ಕಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಸದನದ ಬಾವಿಗೆ ಬಂದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಇದು ಅತಿಯಾಯಿತು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಮತ್ತೆ ಈ ರೀತಿ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ? ಈ ರೀತಿ ಆರ್ಭಟ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾರ್ಯಾರು ಯಾರು ಭೂಮಿ ಕಳೆದುಕೊಂಡಿದ್ದಾರೆ ಅದನ್ನು ಪರಿಶೀಲನೆ ಮಾಡಿ ಅವರಿಗೆ ಪರಿಹಾರ ಕೊಡುವಂತಹ ಕೆಲಸ ಮಾಡುತ್ತೇವೆಂದು ಸ್ಪಷ್ಟವಾಗಿ ನಗರಾಭಿವೃದ್ಧಿ ಸಚಿವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಈ ರೀತಿ ಮಾಡಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೈಸೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ರಮವಾಗಿ ರೈತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನನ್ನು ಅತಿಕ್ರಮಣ ಮಾಡಿ ಅದನ್ನು ಅಭಿವೃದ್ಧಿಪಡಿಸಿ ನಿವೇಶನವನ್ನು ಹಂಚಿದ್ದಾರೆ. ಈ ರೀತಿಯಾದರೆ ರೈತ ಬದುಕು ಹೇಗೆ ನಡೆಸಬೇಕು? ಈಗಾಗಲೇ ೨೦ ವರ್ಷಗಳಾಗಿದೆ.

**(ಗೊಂದಲ)**

**ಸಭಾಪತಿಯವರು:-** ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದು ಕಡತಕ್ಕೆ ಹೋಗುವುದಿಲ್ಲ.

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮೂಡಾದಲ್ಲಿ ಸದಸ್ಯರಾಗಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಪರಿಹಾರವೇನೆಂದರೆ, 20 ಗುಂಟೆ ಜಮೀನನ್ನು ಪ್ರಾಧಿಕಾರದವರು ಅಕ್ರಮವಾಗಿ ವಶಪಡಿಸಿಕೊಂಡು ನಿವೇಶನವನ್ನು ಮಾಡಿದ್ದಾರೆ ಎಂದು ತಿಳಿದುಕೊಳ್ಳೋಣ. 2013 ರಲ್ಲಿ ಯು.ಪಿ.ಎ. ಸರ್ಕಾರ ಹೊಸ ಭೂಸ್ವಾಧೀನ ಕಾನೂನನ್ನು ಜಾರಿಗೆ ತಂದಿದ್ದಾರೆ ಅದರ ಪ್ರಕಾರ, ಮಾನ್ಯ ಎಂ.ಟಿ.ಬಿ.ನಾಗರಾಜುರವರು ಹೇಳಿದ ಹಾಗೆ ಅಂದರೆ Guidance Value ನ ಮೂರು ಪಟ್ಟು, ಅದರ ಜೊತೆಗೆ ಬಹಳಷ್ಟು ಬೆನಿಫಿಟ್ಸ್ ಇದೆ. ಕೆಲವು ಕಡೆ ಅದು 1:3 ಅನುಪಾತದಲ್ಲಿ ಇದೆ. ಇಲ್ಲಿ ಹೊಸ ಭೂಸ್ವಾಧೀನ ಕಾಯ್ದೆ ಪ್ರಕಾರ ಎಂದರೆ Guidance Value ನ 1:4 ಅನುಪಾತದಲ್ಲಿ ಪರಿಹಾರ ಕೊಟ್ಟರೆ ಆಗುತ್ತದೆಯಲ್ಲವೇ? 20 ಗುಂಟೆ ಜಮೀನನ್ನು ಅಕ್ರಮವಾಗಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡಿದ್ದರೆ ಆ 20 ಗುಂಟೆ undeveloped land, cultivable land ಅದರಲ್ಲಿ ಅಭಿವೃದ್ಧಿಪಡಿಸಿರುವುದು ಶೇಕಡ 50 ರಷ್ಟು, ಅಂದರೆ ಅವರವರ ಅಗ್ರಿಮೆಂಟ್ ಪ್ರಕಾರ 20 ಗುಂಟೆಯಲ್ಲಿ 10 ಗುಂಟೆ ಅಭಿವೃದ್ಧಿಪಡಿಸಿರುವ ನಿವೇಶನ ಕೊಡಬೇಕು. ಇಲ್ಲದಿದ್ದರೆ 2013ರ ಭೂಸ್ವಾಧೀನ ಕಾಯ್ದೆ ಪ್ರಕಾರ ಪರಿಹಾರ ಕೊಡಬೇಕಾಗುತ್ತದೆ. It will end the problem.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಇದು ಅಕ್ರಮವಾಗಿ ಮಾಡಿರುವಂಥದ್ದಲ್ಲ. ಇದು ಆಕಸ್ಮಿಕವಾಗಿ ಆಗಿರುವಂಥದ್ದು. ಇದು 2000ನೇ ಇಸವಿಯಲ್ಲಿ ಆಗಿರುವಂಥದ್ದು. ಆ ಸಂದರ್ಭದಲ್ಲಿ ಸ್ಕೆಚ್‌ಗಳು ಸರಿಯಾಗಿರುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಬಾವಿಯಲ್ಲಿ ನಿಂತು ಮಾತನಾಡಬೇಡಿ. ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಮಾನ್ಯ ಸಚಿವರೇ, ಅದನ್ನು ಸರಿಪಡಿಸುತ್ತೇವೆಂದು ಹೇಳಿಬಿಡಿ.

**ಶ್ರೀ ಬಿ.ಎ.ಬಸವರಾಜ:-** ಸರಿಪಡಿಸುತ್ತೇನೆಂದು ಹೇಳಿದ್ದೇನೆ.

**ಸಭಾಪತಿಯವರು:-** ಮತ್ತೆ ಏಕೆ ಮಾತನಾಡುತ್ತಿದ್ದೀರಿ?

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ತಮ್ಮ ಸ್ಥಾನಕ್ಕೆ ಬಂದರು)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಕೂಡ ಪ್ರಾಧಿಕಾರದ ಸದಸ್ಯರಾಗಿ ಎಲ್ಲಾ ಸಭೆಗಳಲ್ಲೂ ಭಾಗಿಯಾಗುತ್ತಿದ್ದಾರೆ. ಹಾಗಾಗಿ ನನಗೆ ಅರಿವು ಇದೆ. ಖಂಡಿತವಾಗಿಯೂ ಇದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇನೆ. ಯಾವ ರೈತರಿಗೆ ಅನ್ಯಾಯವಾಗಿದೆ, ಯಾವ ರೈತ genuine ಆಗಿ, ಪ್ರಾಮಾಣಿಕವಾಗಿ ಭೂಮಿಯನ್ನು ಕಳೆದುಕೊಂಡಿದ್ದಾರೆ, ಅಂಥವರಿಗೆ ಪರಿಹಾರ ಕೊಡುವಂತಹ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಎಷ್ಟು ದಿವಸಗಳಲ್ಲಿ ಮಾಡುತ್ತೀರಿ?

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮೂಡಾದಲ್ಲಿ ಏನಾಗಿದೆ ಎಂಬುದನ್ನು ಮಾಹಿತಿ ತರಿಸಿಕೊಳ್ಳಬಹುದಲ್ಲವೇ?

**ಶ್ರೀ ಮರಿತಿಬ್ಬೇಗೌಡ:-** ಎಷ್ಟು ದಿವಸಗಳಲ್ಲಿ ಮಾಡುತ್ತಾರೆಂದು ಹೇಳಲಿ, ನಾನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ನೀವು ಹೇಳಿದ ಹಾಗೆ ಸದನ ನಡೆಯಬೇಕೇ?

**ಶ್ರೀ ಮರಿತಿಬ್ಬೇಗೌಡ:-** ಬಹಳಷ್ಟು ರೈತರು ಕಣ್ಣೀರು ಹಾಕುತ್ತಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಸದನದ ಬಾವಿಗೆ ಬಂದು ಧರಣಿ ಕುಳಿತರು)**

**ಸಭಾಪತಿಯವರು:-** ಬಾವಿಯಲ್ಲಿ ನಿಂತು ಮಾನ್ಯ ಸದಸ್ಯರು ಮಾತನಾಡುವುದನ್ನು ಯಾವುದು ರೆಕಾರ್ಡ್ ಮಾಡಬೇಡಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಅವರು ಪೀಠಕ್ಕೆ ಚಾಲೆಂಜ್ ಮಾಡುತ್ತಿದ್ದಾರೆ. ಸಭಾಪತಿಗಳಿಗೆ ಗೌರವ ಕೊಡುವುದಿಲ್ಲವೆಂದರೆ ಹೇಗೆ? ತಾವು ಹೇಳಿದ ತಕ್ಷಣ ನಾವು ಕುಳಿತುಕೊಳ್ಳುತ್ತೇವೆ. ಅವರ body language ಚೆನ್ನಾಗಿಲ್ಲ. It is not acceptable.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ತಾವು ಹೇಳಿದ ಹಾಗೆ ಮಾಡುವುದಕ್ಕಾಗುತ್ತದೆಯೇ? ಸದನದಲ್ಲಿ ಒಂದು ರೀತಿ ರಿವಾಜು ಇರುತ್ತವೆ. ನೀವು ಹೀಗೆ ಮಾಡಿ ಎಂದು ಯಾರಿಗೂ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಅದನ್ನು ಸರಿಪಡಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಇದಕ್ಕಿಂತ ಉತ್ತರವನ್ನು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಚಿವರೇ, ಸರಿಪಡಿಸಿ ಕೊಡುವಂತಹ ಜವಾಬ್ದಾರಿ ನಿಮಗಿದ್ದೆ ಅದನ್ನು ಸರಿಪಡಿಸಿ ಕೊಡಿ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಸಭಾಪತಿಯವರು:-** ಯಾವುದು ಕ್ರಮಕ್ಕೆ ಹೋಗುವುದು ಬೇಡ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೇ, ತಾವು ತಿಳಿದುಕೊಳ್ಳಿ. ಸದನದಲ್ಲಿ ಪ್ರಶ್ನೆಯನ್ನು ಕೇಳುತ್ತೀರಿ, ಸರ್ಕಾರ ಉತ್ತರ ಹೇಳುತ್ತದೆ. ಸರ್ಕಾರ ಉತ್ತರ ಹೇಳಿದ ನಂತರ ಇಂತಹ ದಿವಸ ನೀವು ಮಾಡಬೇಕೆಂದು ಯಾರಿಗೂ ಹೇಳುವುದಕ್ಕಾಗುವುದಿಲ್ಲ. ಸರಿಪಡಿಸಿ ಕೊಡುತ್ತೇವೆಂದು ಜವಾಬ್ದಾರಿಯಾಗಿ ಸದನದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ.

(ಮುಂದು)

866/21-09-2021/4-30/bkp-rn

**ಶ್ರೀ ಎಂ. ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈ ಸಂಬಂಧ ಉತ್ತರವನ್ನು ಹೇಳಿದ್ದಾರೆ. ಮಾನ್ಯ ಸದಸ್ಯರು ಯಾವಾಗ ಮಾಡುತ್ತೀರಿ ಎಂದು ಸಮಯವನ್ನು ಕೇಳುತ್ತಿದ್ದಾರೆ. ಆದ್ದರಿಂದ ಈ ವಿಚಾರವಾಗಿ ಮಾನ್ಯ ಸಚಿವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದನ ಮುಗಿಯುವುದರೊಳಗೆ ಮಾಡಿಕೊಡುತ್ತೇವೆಂದು ಒಂದು ಮಾತನ್ನು ಹೇಳಿದರೆ ಸರಿ ಹೋಗುತ್ತದೆ.

**(ಗೊಂದಲ)**

**ಶ್ರೀ ಬಿ.ಎ. ಬಸವರಾಜ (ಬೈರತಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಈ ರೀತಿಯ ಎಷ್ಟು ಪ್ರಕರಣಗಳಿವೆ ಎಂದು ಹೇಳಿ ನನ್ನ ಗಮನಕ್ಕೆ ತಂದರೆ....

**ಸಭಾಪತಿಯವರು:-** ಬೇಡ. ಯಾವಾಗ ಮಾಡಿಕೊಡುತ್ತೀರಿ ಎಂದು ಹೇಳಿ.

**ಶ್ರೀಬಿ.ಎ. ಬಸವರಾಜ (ಬೈರತಿ):-** ನಾವು ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕು. ಇದಕ್ಕೆಲ್ಲಾ ಸಮಯ ಬೇಕಾಗುತ್ತದೆ. ಹೀಗಾಗಿ ಸದನದಲ್ಲಿ ನಾವು ಸಮಯವನ್ನು ನಿಗದಿ ಮಾಡುವುದಕ್ಕಾಗುವುದಿಲ್ಲ. ಸದನದಲ್ಲಿ ನಾವು ಹೇಳಿದ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ. ಹೀಗಾಗಿ ನಿರ್ದಿಷ್ಟವಾಗಿ ಇಂತಹವರಿಗೆ ಅನ್ಯಾಯವಾಗಿದೆ ಎಂದು ಹೇಳಿ, ಅವರ ಹೆಸರು ಇತ್ಯಾದಿಯಾಗಿ ಕೊಟ್ಟರೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಎಷ್ಟು ಪ್ರಕರಣಗಳಿವೆ ಎಂದು ನಮಗೆ ಗೊತ್ತಿಲ್ಲ. ಇದರ ಬಗ್ಗೆ ಮಾಹಿತಿ ಇಲ್ಲ. ದಾಖಲಾತಿಗಳು ಎಷ್ಟು ಇದೆ ಎಂದು ಗೊತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಈ ವಿಚಾರದಲ್ಲಿ ನಾನು ಏನು ಮಾಡಬೇಕೆಂದು ಹೇಳಿ.

**ಶ್ರೀ ಎಸ್. ಆರ್. ಪಾಟೀಲ್( ವಿರೋಧ ಪಕ್ಷದ ನಾಯಕರು):** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ಜೊತೆ ಚರ್ಚೆ ಮಾಡಬೇಕು.

**ಸಭಾಪತಿಯವರು:-** ಶ್ರೀಯುತ ಪಾಟೀಲ್‌ರವರೆ, ತಾವು ಸಹ ಅವರ ರೀತಿಯಲ್ಲಿಯೇ ಮಾತನಾಡುತ್ತಿದ್ದೀರಿ. ಅವರು ಈ ಕೆಲಸವನ್ನು ಮಾಡುತ್ತೇನೆಂದು ಹೇಳಿದ್ದಾರೆ. ಆಯಿತು, ಸಚಿವರು ಸದಸ್ಯರ ಜೊತೆ ಒಂದು ಸಭೆಯನ್ನು ಏರ್ಪಾಡು ಮಾಡಿ ಚರ್ಚೆ ಮಾಡುವುದರ ಮೂಲಕ ಈ ಕೆಲಸ ಪೂರ್ಣ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ. ಬಸವರಾಜ (ಬೈರತಿ:-** ಆಯಿತು, ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿ ಈ ಕೆಲಸವನ್ನು ಪೂರ್ಣಗೊಳಿಸುತ್ತೇನೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:-** ಶ್ರೀಯುತ ಮರಿತಿಬ್ಬೇಗೌಡರವರೆ, ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬನ್ನಿ. ಸಚಿವರು ತಮ್ಮ ಜೊತೆ ಚರ್ಚೆ ಮಾಡುತ್ತಾರೆ.

ಮಾನ್ಯ ಸಚಿವರು ಈ ಸಂಬಂಧ ಮಾನ್ಯ ಸದಸ್ಯರೊಂದಿಗೆ ಒಂದು ಸಭೆಯನ್ನು ಮಾಡಿ ಮಾನ್ಯ ಸದಸ್ಯರ ಬೇಡಿಕೆಗಳು ಏನಿವೆ, ಅವುಗಳ ಬಗ್ಗೆ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕು. ಅದನ್ನು ಬಿಟ್ಟು ಸಮಸ್ಯೆಯನ್ನು ಈ ರೀತಿ ಬೆಳೆಸಿಕೊಂಡು ಹೋದರೆ ಹೇಗೆ?

**(ಗೊಂದಲ)**

**ಶ್ರೀಬಿ.ಎ. ಬಸವರಾಜ (ಬೈರತಿ):-** ಮಾನ್ಯಸಭಾಪತಿಯವರೆ, ಈ ಕೆಲಸ ವನ್ನು ಸರ್ಕಾರದ ನಿಯಮಾವಳಿ ರೀತ್ಯಾ ಮಾಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಸಚಿವರು ಮೈಸೂರಿಗೆ ಬಂದು ಅಲ್ಲಿ ಒಂದು ಸಭೆಯನ್ನು ಏರ್ಪಾಡು ಮಾಡಿ, ಆ ಸಭೆಗೆ ನನ್ನನ್ನು ಮತ್ತು ಶ್ರೀಯುತ ಮರಿತಿಬ್ಬೇಗೌಡರನ್ನು ಕರೆದು ಚರ್ಚೆ ಮಾಡಿ, ಇದನ್ನು ಇತ್ಯರ್ಥ ಮಾಡಿಕೊಡಬೇಕಾಗಿದ್ದು ಈ ಕೆಲಸವನ್ನು ಮಾನ್ಯ ಸಚಿವರು ಮಾಡುತ್ತಾರೆ ಎನ್ನುವ ವಿಶ್ವಾಸ ನಮಗಿದೆ. ದಯಮಾಡಿ ಶ್ರೀಯುತ ಮರಿತಿಬ್ಬೇಗೌಡರವರು ತಮ್ಮ ಸ್ಥಾನಕ್ಕೆ ಬರಬೇಕೆಂದು ನಾನು ಸಹ ವಿನಂತಿಸುತ್ತೇನೆ.

**ಸಭಾಪತಿಯವರು:** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಮಂತ್ರಿಗಳಾಗಿ ಮಾತನಾಡಬೇಡಿ. ಸಚಿವರು ಸದಸ್ಯರುಗಳನ್ನು ಕರೆದು ಚರ್ಚೆ ಮಾಡಿ. ಈಗ ಶ್ರೀಯುತ ಸಂಕನೂರ ರವರು ಮಾತನಾಡಬೇಕು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:** ಯಾವುದೂ ರೆಕಾರ್ಡ್‌ಗೆ ಹೋಗುವಂತಿಲ್ಲ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನೀವು ಸದನದಲ್ಲಿ ಹುಡುಗಾಟ ಮಾಡುತ್ತಿದ್ದೀರಿ. ನೀವು ಈ ಸದನಕ್ಕಿಂತ ದೊಡ್ಡವರಲ್ಲ. ಮತ್ತೊಮ್ಮೆ ತಮಗೆ ಹೇಳುತ್ತಿದ್ದೇನೆ. ಪದೇ ಪದೇ ಈ ರೀತಿ ಮಾಡುವುದು ಸರಿಯಾದ ಕ್ರಮವಲ್ಲ.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ.ಎಸ್.ವಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸರ್ಕಾರಕ್ಕೆ ಆದೇಶ ಮಾಡುತ್ತಿದ್ದಾರೆ. ಹಿರಿಯ ಸದಸ್ಯರು ಈ ರೀತಿಯಲ್ಲಿ ಮಾಡಿದರೆ ಹೇಗೆ? ನೀವು ಸರ್ಕಾರಕ್ಕೆ ಈ ರೀತಿಯಲ್ಲಿಯೇ ಮಾಡಬೇಕೆಂದು ಹೇಳುತ್ತಿದ್ದೀರಿ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದನ್ನು ನಾವು ಖಂಡಿಸುತ್ತಿದ್ದೇವೆ. ಈ ಸದನದಲ್ಲಿ ಎಲ್ಲರಿಗೂ ಮಾತನಾಡುವ ಹಕ್ಕು ಇದೆ. ಪ್ರಶ್ನೆ ಕೇಳುವ ಹಕ್ಕು ಇದೆ. ಸರ್ಕಾರಕ್ಕೆ ಇದೇ ರೀತಿ ಮಾಡಬೇಕೆಂದು ಹೇಳುವ ಅಧಿಕಾರ ಇಲ್ಲ. ಅವರು ತಾಕೀತು ಮಾಡುವಂತಿಲ್ಲ.

**(ಗೊಂದಲ)**

**ಸಭಾಪತಿಯವರು:** ಎಲ್ಲರೂ ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಶ್ರೀಯುತ ಬಸವರಾಜು ರವರೆ, ಕೆಲಸ ಮಾಡುತ್ತೇನೆಂದು ಅಂತಿಮವಾಗಿ ಹೇಳಿ.

**ಶ್ರೀ ಬಿ.ಎ.ಬಸವರಾಜ (ಬೈರತಿ):-** ಮಾನ್ಯ ಸಭಾಪತಿಯವರೆ, ಯಾವುದೇ ರೈತರು ಭೂಮಿಯನ್ನು ಕಳೆದುಕೊಂಡಿದ್ದರೆ, ಅಥವಾ ನಾವು ಬಡಾವಣೆ ಮಾಡುವ ಸಂದರ್ಭದಲ್ಲಿ ಯಾವುದೇ ಪಾರ್ಟಿದಾರ ನಿವೇಶನವನ್ನು ಒತ್ತುವರಿ ಮಾಡಿಕೊಂಡಿದ್ದರೆ ಕಾನೂನಿನ ಇತಿಮಿತಿಯಲ್ಲಿ ಅದನ್ನು ಪರಿಗಣನೆ ಮಾಡಿ ಅದನ್ನು ಮಾಡಿಕೊಡುವಂತಹ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ನಾನು ಕೂಡ ಮೈಸೂರು ಪ್ರಾಧಿಕಾರದ ಸಭೆಗೆ ಹೋಗುತ್ತೇನೆ. ಅಲ್ಲಿ ಯಾವ ಯಾವ ಪ್ರಕರಣಗಳಿವೆ ಎಂದು ತಿಳಿಸಲು ಆಯುಕ್ತರಿಗೆ ಸೂಚನೆಯನ್ನು ಕೊಡುತ್ತೇನೆ. ಅದು ಸರಿಯಾಗಿದೆಯೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲವೋ ಎಂದು ಪರಿಶೀಲನೆ ಮಾಡುತ್ತೇವೆ. ಅಂದು ಎಲ್ಲಾ ಸದಸ್ಯರು ಬರಲಿದ್ದು, ಅವರೊಂದಿಗೆ ಚರ್ಚೆ ಮಾಡಿ ಇದನ್ನು ಇತ್ಯರ್ಥ ಮಾಡುತ್ತೇನೆ.

**ಸಭಾಪತಿಯವರು:** ಮೂಡಾ ಮೀಟಿಂಗ್ ನಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 38ಕ್ಕೆ 10 ನಿಮಿಷಕ್ಕೆ ಮುಂದೂಡಲಾಯಿತು)**

(867) + (868) 21-09-2021, 4.50 KG ವಿಕೆ

**(ಸಭಾಪತಿಯವರ ಉಪಸ್ಥಿತಿ)**

**(ಸಂಜೆ 4 ಗಂಟೆ 38 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 57 ನಿಮಿಷಗಳಿಗೆ ಪ್ರಾರಂಭಗೊಂಡಿತು)**

**(ಸದನ ಪ್ರಾರಂಭವಾದಾಗ ಜೆಡಿ (ಎಸ್) ಪಕ್ಷದ ಮಾನ್ಯ ಸದಸ್ಯರುಗಳಾದ ಶ್ರೀ ಎನ್.ಅಪ್ಪಾಜಿಗೌಡ, ಶ್ರೀ ಕಾಂತರಾಜ್ (ಬಿಎಂಎಲ್) ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಹೆಚ್.ಎಂ.ರಮೇಶ್‌ಗೌಡ, ಶ್ರೀ ಕೆ.ಟಿ.ಶ್ರೀಕಂಠೇಗೌಡ ಮತ್ತು ಶ್ರೀ ಎಸ್.ಎಲ್.ಭೋಜೇಗೌಡರವರು ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಸಭಾಪತಿಯವರು**:- ಮಾನ್ಯ ನಗರಾಭಿವೃದ್ಧಿ ಸಚಿವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರ ಸಲುವಾಗಿ ಇನ್ನೊಮ್ಮೆ ಕೊನೆಯ ಬಾರಿ ಹೇಳಿಬಿಡಿ.

**ಶ್ರೀ ಬಿ.ಎ.ಬಸವರಾಜ (ಭೈರತಿ) (ನಗರಾಭಿವೃದ್ಧಿ ಸಚಿವರು**) ಮಾನ್ಯ ಸಭಾಪತಿಯವರೇ, ಈಗಾಗಲೇ 2 ರಿಂದ 4 ಬಾರಿ ಸಮರ್ಪಕವಾಗಿ ಉತ್ತರಗಳನ್ನು ಕೊಟ್ಟಿದ್ದೇವೆ. ಇನ್ನೂ ಸರಿಯಾಗಿ ಉತ್ತರವನ್ನು ಕೊಡಬೇಕೆಂದರೆ, ಅದು ಸಮಂಜಸವಲ್ಲ. ತಾವು ಸಭಾಪತಿಗಳಿದ್ದೀರಿ, ಸದನದ ಗೌರವವನ್ನು ಕಾಪಾಡುವಂತಹದ್ದು ತಮ್ಮಲ್ಲಿದೆ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಿ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನನಗೆ ಪ್ರಾಧಿಕಾರದ ಸಭೆ ಯಾವತ್ತು ಕರೆಯುತ್ತಾರೆಂದು ಗೊತ್ತಿಲ್ಲ. ಅಲ್ಲದೇ, ಸಾಕಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂಬ ಮಾಹಿತಿ ಇದೆ. ಪ್ರಕರಣಗಳು ನ್ಯಾಯಾಲಯದಲ್ಲಿರುವಾಗ, ನಾನು ಯಾವ ರೀತಿ ಇವರಿಗೆ ಆಶ್ವಾಸನೆ ಕೊಡಲಿ?

**ಸಭಾಪತಿಯವರು**:- ಮಾನ್ಯ ಸಚಿವರೇ, ಅದು ಚರ್ಚೆಯಾಗಿದೆ ಬಿಡಿ. ಮಾನ್ಯ ಮರಿತಿಬ್ಬೇಗೌಡರವರೇ, ಬಾವಿಯಲ್ಲಿದ್ದಾಗ ಮಾತನಾಡಬೇಡಿ.

**ಶ್ರೀ ಬಿ.ಎ.ಬಸವರಾಜ (ಭೈರತಿ) ನಗರಾಭಿವೃದ್ಧಿ ಸಚಿವರು**) ಮಾನ್ಯ ಸಭಾಪತಿಯವರೇ, ಈ ಬಗ್ಗೆ ಪ್ರಕರಣಗಳು ನ್ಯಾಯಾಲಯದಲ್ಲಿರುವಂತಹ ಸಂದರ್ಭದಲ್ಲಿ ನಾವು ಅದನ್ನು ಸಹ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ. ದಿನಾಂಕವನ್ನು ನಿಗದಿ ಮಾಡಿ ಎಂದು ಹೇಳುವುದು ಸಮಂಜಸವಲ್ಲ. ಇವತ್ತೇ ಬನ್ನಿ, ನಾಳೆ ಬನ್ನಿ, ಇಷ್ಟು ಗಂಟೆಗೆ ಬನ್ನಿ ಎಂದು ಹೇಳುವುದು ಸದನಕ್ಕೆ ಶೋಭೆ ತರುವಂತಹದ್ದಲ್ಲ.

**( ಮುಂದು)**

**(869) 21-09-2021 (5.00) ಎಂವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಎ.ಬಸವರಾಜ (ಬೈರತಿ) (ಮುಂದು...):-**

ನಾನು ದಯಮಾಡಿ ಮಾನ್ಯ ಸದಸ್ಯರುಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಲಿ. ನಾನು ಅವರಿಗೆ ಏನು ಮಾನ್ಯತೆ ಕೊಡಬೇಕು ಕೊಡುತ್ತೇನೆ. ಮಾನ್ಯ ಸದಸ್ಯರು ಕಳೆದ ಇಪ್ಪತ್ತು ವರ್ಷಗಳಿಂದ ಪ್ರಾಧಿಕಾರದ ಸದಸ್ಯರಾಗಿದ್ದಾರೆ, ಅವರು ಏಕೆ ಈ ಪ್ರಕರಣವನ್ನು ಇತ್ಯರ್ಥ ಮಾಡಿಲ್ಲವೆಂದು ಅವರು ದಯಮಾಡಿ ಹೇಳಬೇಕು. ಕಳೆದ ಇಪ್ಪತ್ತು ವರ್ಷಗಳಿಂದ ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮತ್ತು ಇನ್ನು ಹಲವಾರು ಸದಸ್ಯರುಗಳು ಆ ಪ್ರಾಧಿಕಾರದ ಸದಸ್ಯರಾಗಿದ್ದಾರೆ ಆದರೆ, ನಾನು ಬಂದು ಕೇವಲ ಒಂದೂವರೆ ವರ್ಷವಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ನಾನು ತಮಗೆ ಏನು ಹೇಳುತ್ತೇನೆಂದರೆ, ಇದಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ತಾವು ಮೈಸೂರಿಗೆ ಹೋಗಿ ಮಾನ್ಯ ಸದಸ್ಯರನ್ನು ಕರೆದು ಸಭೆ ಮಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎ.ಬಸವರಾಜ (ಬೈರತಿ):-** ಮಾನ್ಯ ಸಭಾಪತಿಯವರೆ, ನಾನು ಪೀಠಕ್ಕೆ ಗೌರವ ನೀಡಿ, ಅಲ್ಲಿ ಸಭೆಯನ್ನು ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದೇನೆ.

**ಸಭಾಪತಿಯವರು:-** ದಯಮಾಡಿ ಎಲ್ಲಾ ಶಾಸಕರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ. ಈಗಾಗಲೇ ಮಾನ್ಯ ಮಂತ್ರಿಗಳು ಸಭೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಎರಡು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ತಮ್ಮದು ಅತಿಯಾಯಿತು ಬಿಡಿ. ನೀವು ಒಬ್ಬರೇ ಸದನದಲ್ಲಿ ಇರುವವರು. ಬೇರೆ ಯಾರೂ ಇಲ್ಲ. ಈಗ ನೀವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ಮಾತನಾಡುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಸದನದ ಬಾವಿಗೆ ಬಂದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರಿಗೆ ನಾನು ವಿನಂತಿ ಮಾಡುತ್ತೇನೆ. ಈ ರೀತಿಯ ಉದ್ವೇಗ ಮಾಡಿ, ನಾವು ಹೇಳಿದ ಹಾಗೆ ಕೇಳಬೇಕು ಎನ್ನುವುದಾದರೆ, ಇದು ಯಾವ ಲೆಕ್ಕ? ಅತೀ ಶೀಘ್ರದಲ್ಲೇ ಇದಕ್ಕೆ ಸಂಬಂಧಪಟ್ಟಂತೆ ಸಭೆ ಕರೆದು ಈ ಸಮಸ್ಯೆಯನ್ನು ಸರಿಪಡಿಸುತ್ತೇನೆಂದು ಮಾನ್ಯ ಮಂತ್ರಿಗಳು ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಇದೇ ದಿನಾಂಕ ನೀಡಿ ಮತ್ತು ಇದೇ ಸಮಯ ನೀಡಿ ಎನ್ನುವುದು ಇದು ಯಾವ ರೀತಿಯ ನ್ಯಾಯ? ಈಗ ಪ್ರತಿಪಕ್ಷ ನಾಯಕರು ಸಹ ಇದನ್ನು ಗಮನಿಸಬೇಕು. ಅತೀ ಶೀಘ್ರದಲ್ಲೇ ಸಭೆ ಕರೆದು ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೂ ಸಹ ಮತ್ತೇ ಏನು ಅವರ ಅಧಿಕಾರ ಚಲಾವಣೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮರಿತಿಬ್ಬೇಗೌಡರು ಈ ಹಿಂದೆ ಉಪಸಭಾಪತಿಗಳಾಗಿದ್ದಂತಹವರು. ಅವರು ಈ ರೀತಿ ಹಠ ಮಾಡಿದರೆ ಹೇಗೆ?

**(ಗೊಂದಲ)**

**(ಈ ಹಂತದಲ್ಲಿ ಧರಣಿನಿರತ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ತಾವು ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಿ.

ಮಾನ್ಯ ಸದಸ್ಯರುಗಳು ಸದನದ ಬಾವಿಯಿಂದ ಮಾತನಾಡಿರುವುದು ಯಾವುದೂ ಸಹ ರೆಕಾರ್ಡ್ ಆಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿನ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರಿಗೆ ಮಾನ್ಯ ಸಚಿವರು ಅತೀ ಶೀಘ್ರದಲ್ಲೇ ಸಭೆ ಕರೆಯುತ್ತೇನೆಂದು ಈಗಾಗಲೇ ತಿಳಿಸಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಈಗ ಮಾತನಾಡುತ್ತಿರುವುದು ಯಾವುದೂ ಸಹ ರೆಕಾರ್ಡ್‌ಗೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿನ ಸದನದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇವರು ರೈತರ ಬಗ್ಗೆ ನಮಗೆ ಹೇಳಿಕೊಡಬೇಕಾಗಿಲ್ಲ. ನಾವು ಈ ದೇಶದಲ್ಲಿ 'ಕಿಸಾನ್ ಸಮ್ಮಾನ್'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದವರು. ನಾವು ರೈತರ ಬಗ್ಗೆ ಅವರಿಂದ ಕಲಿಯಬೇಕಾದಂತಹ ಅವಶ್ಯಕತೆ ಇಲ್ಲ. ನಾವು ಈ ರೀತಿಯ ಆರ್ಭಟಕ್ಕೆಲ್ಲಾ ಮಣಿಯುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರವನ್ನು ಆರ್ಭಟದಲ್ಲಿ ಮಣಿಸುತ್ತೇವೆಂದರೆ ನಾವು ಮಣಿಯುವುದಿಲ್ಲ. ಸರ್ವಾಧಿಕಾರಿಯಾಗುವುದಕ್ಕೆ ಅವರು ಒಬ್ಬರೇ ಅಲ್ಲ. ಅವರಿಗೂ ಸಹ ಜವಾಬ್ದಾರಿ ಬೇಕು. ಮಾನ್ಯ ಮರಿತಿಬ್ಬೇಗೌಡರು ಹಿರಿಯ ಸದಸ್ಯರು. ಈ ರೀತಿಯಾದರೆ ಸದನ ನಡೆಸುವುದು ಹೇಗೆ? ಮಾನ್ಯ ಸಚಿವರು ಅತೀ ಶೀಘ್ರದಲ್ಲೇ ಸಭೆ ಕರೆಯುತ್ತೇನೆಂದು ಹೇಳಿದ್ದಾರೆ.

**ಸಭಾಪತಿಯವರು:-** ಸದನದ ಬಾವಿಯಲ್ಲಿ ಇರುವವರೆಲ್ಲರೂ ಸಹ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೆ, ತಾವು ಕೊನೆಯದಾಗಿ ಏನಾದರೂ ಹೇಳುವುದಾದರೆ ತಮ್ಮ ಸ್ಥಳಕ್ಕೆ ಹೋಗಿ ಹೇಳಿ.

**(ಗೊಂದಲ)**

**(ಈ ಹಂತದಲ್ಲಿ ಶ್ರೀ ಮರಿತಿಬ್ಬೇಗೌಡರು ಸದನದ ಬಾವಿಯಿಂದಲೇ ಮಾನ್ಯ ಸಭಾಪತಿಯವರೆ, ನಾನು ಹೋಗುವುದಿಲ್ಲ ಎಂದರು)**

**ಸಭಾಪತಿಯವರು:-** ಒಂದು ನಿಮಿಷ, ಸದನದಲ್ಲಿ ಪೀಠಕ್ಕೆ ಗೌರವ ಕೊಡಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನನಗೆ ಸದನ ನಡೆಸುವುದಕ್ಕೆ ಬಹಳ ಕಠಿಣವಾಗಿದೆ.

ಆದುದರಿಂದ, ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 22ನೇ ಸೆಪ್ಟೆಂಬರ್ ಮಾಹೆ 2021ರ ಬುಧವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"